ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕರುಣ್ ಶತಕದ ಅಬ್ಬರ

ಭಾರತ ತಂಡದಿಂದ ಹೊರಬಿದ್ದಿರುವ ಕನ್ನಡಿಗ ಕರುಣ್ ನಾಯರ್ ರಣಜಿ ಟ್ರೋಫಿಯಲ್ಲಿ ಮತ್ತೆ ಅಬ್ಬರಿಸಿದ್ದಾರೆ. ಗೋವಾ ಎದುರು ಶಿವಮೊಗ್ಗದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಭಾನುವಾರ ಅಜೇಯ 174 ರನ್ (ಅಜೇಯ) ಬಾರಿಸಿದ ಕರುಣ್ ಕರ್ನಾಟಕ 371 ರನ್ ಗಳಿಸಲು ನೆರವಾದರು.

ಕರ್ನೂಲ್ ದುರಂತದ ಹಿನ್ನೆಲೆಯಲ್ಲಿ ವಿಶೇಷ ಅಭಿಯಾನಕ್ಕೆ ಸರಕಾರ ಸೂಚನೆ

ಬಸ್ ಸುರಕ್ಷತೆ ಖಾತರಿಗೆ ಕ್ರಮ

ಬೆಂಗಳೂರು: ಕರ್ನೂಲ್ ಬಸ್ ದುರಂತದ ಬೆನ್ನಲ್ಲೇ ಎಚ್ಚೆತ್ತಿರುವ ರಾಜ್ಯ ಸರಕಾರ, ರಾಜ್ಯ ಎಲ್ಲಾ ಖಾಸಗಿ ಹಾಗೂ ಸರಕಾರಿ ಬಸ್‌ಗಳಲ್ಲಿ ಸುರಕ್ಷತಾ ಆಡಿಟ್ ನಡೆಸಲು ತೀರ್ಮಾನಿಸಿದ್ದು, ಈ ವಿಷಯದಲ್ಲಿ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬೇಡಿ ಎಂದು ಅಧಿಕಾರಿಗಳಿಗೆ ಸ್ಪಷ್ಟ ಸಂದೇಶ ರವಾನಿಸಿದೆ.

ಪ್ರಮುಖವಾಗಿ ರಾಜ್ಯದಲ್ಲಿ ಸಂಚರಿಸುವ ಖಾಸಗಿ ಹಾಗೂ ಸರಕಾರಿ ಬಸ್‌ಗಳಲ್ಲಿ ತುರ್ತು ನಿರ್ಗಮನ ಸೇರಿದಂತೆ ಸುರಕ್ಷತಾ ಸಾಧನಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎನ್ನುವ ಬಗ್ಗೆ ತಪಾಸಣೆ ನಡೆಸಬೇಕು. ಇನ್ನು ಲಗೇಜ್ ವಿಭಾಗಗಳಲ್ಲಿ ಯಾವುದೇ ಸುಡುವ ಅಥವಾ ಸ್ಫೋಟಕ ವಸ್ತುಗಳನ್ನು ಸಾಗಿಸದಂತೆ ನೋಡಿಕೊಳ್ಳಬೇಕು. ಎಲ್ಲಾ ಎಸಿ ಬಸ್‌ಗಳಲ್ಲಿಯೂ ಕಿಟಕಿಗಳನ್ನು ಒಡೆಯಲು ಸುತ್ತಿಗೆಗಳು ಇರಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅನೇಕ ಖಾಸಗಿ ಬಸ್‌ಗಳು ವಾಣಿಜ್ಯ ಸರಕನ್ನು ಸಾಗಿಸುತ್ತಿವೆ ಎನ್ನುವ ಆರೋಪವಿದೆ. ಆದ್ದರಿಂದ ಬಸ್‌ಗಳಲ್ಲಿ ಯಾವುದೇ ವಾಣಿಜ್ಯ ಸರಕು, ಲಗೇಜ್ ಸಾಗಿಸುವ ಸಂದರ್ಭದಲ್ಲಿ ಸುಲಭವಾಗಿ ಬೆಂಕಿ ಹೊತ್ತಿಕೊಂಡು ಸ್ಫೋಟಿಸುವ ವಸ್ತುಗಳನ್ನು ಸಾಗಿಸದಂತೆ ನಿಗಾ ವಹಿಸಬೇಕು. ಎಲ್ಲ ಎಸಿ ಬಸ್‌ಗಳಲ್ಲಿ ತುರ್ತು ಸಂದರ್ಭದಲ್ಲಿ ಕಿಟಕಿಗಳನ್ನು ಒಡೆಯಲು ಸಹಾಯವಾಗುವಂತೆ ಸುತ್ತಿಗೆಗಳು ಕಡ್ಡಾಯವಾಗಿರಬೇಕು. ಲಗೇಜ್ ಸಾಗಿಸುವ ಜಾಗದಲ್ಲಿ ಯಾವುದೇ ವ್ಯಕ್ತಿಗಳು ಮಲಗಲು ಅವಕಾಶ ನೀಡಬಾರದು. ಬಸ್‌ಗಳ ನವೀಕರಣದ ಸಂದರ್ಭದಲ್ಲಿ ಪರಿಶೀಲನೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿದರು.

→ 4

ನಿಯಮ ಪಾಲನೆಗೆ ಸಚಿವರ ಸೂಚನೆ

- ಬಸ್‌ಗಳಲ್ಲಿ ಸುರಕ್ಷತಾ ಪರಿಕರಗಳ ಬಗ್ಗೆ ಆದ್ಯತೆ ನೀಡಲು ಸೂಚನೆ
- ವಾಣಿಜ್ಯ ಸರಕು, ಸುಲಭ ದಹ್ಯ ವಸ್ತುಗಳ ಸಾಗಾಟಕ್ಕೆ ನಿರ್ಬಂಧ
- ಕಾನೂನು ಉಲ್ಲಂಘಿಸಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಆದೇಶ

ಈ ಹಿಂದೆ ಸಾರಿಗೆ ಸಚಿವನಾಗಿದ್ದಾಗ ಹಾವೇರಿ ಬಳಿ ಖಾಸಗಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಕೆಲ ಪ್ರಯಾಣಿಕರು ಪ್ರಾಣ ಕಳೆದುಕೊಂಡಿದ್ದರು. ಆ ಸಂದರ್ಭದಲ್ಲಿ ಸಾರಿಗೆ ಸಂಸ್ಥೆ ಬಸ್‌ಗಳು, ಕಾಂಟ್ರಾಕ್ಟ್ ಗ್ಯಾರೇಜ್ ಬಸ್‌ಗಳು, ಖಾಸಗಿ ಟೂರಿಸ್ಟ್ ಬಸ್‌ಗಳು, ಟೆಂಪೋ ಟ್ರಾವೆಲರ್ಸ್, ಶಾಲಾ ವಾಹನಗಳು ಸೇರಿ ಸುಮಾರು 50 ಸಾವಿರ ವಾಹನಗಳಲ್ಲಿ ತುರ್ತು ನಿರ್ಗಮನ ದ್ವಾರಗಳನ್ನು ಕಡ್ಡಾಯವಾಗಿ ಅಳವಡಿಸಲು ಮತ್ತು ದ್ವಾರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಬಗ್ಗೆ ಪರಿಶೀಲಿಸಲು ವಿಶೇಷ ಅಭಿಯಾನ ಕೈಗೊಳ್ಳಲಾಗಿತ್ತು.

-ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಉಲ್ಲಂಘನೆಗೆ ಕ್ರಮ ಅಗತ್ಯ

ಸಾರಿಗೆ ಇಲಾಖೆಯ ನಿಯಮಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿದರೆ ಬಹುದೊಡ್ಡ ಪ್ರಮಾಣದ ದಂಡ ಅಥವಾ ಶಿಕ್ಷೆಗೆ ಅವಕಾಶವಿಲ್ಲ. ಅಧಿಕಾರಿಗಳ ಪ್ರಕಾರ, ವಾಣಿಜ್ಯ ಸರಕುಗಳನ್ನು ಸಾಗಿಸಲು ಕಠಿಣ ನಿಯಮ ಜಾರಿ ಮಾಡುವ ಅಗತ್ಯವಿದೆ. ಏಕೆಂದರೆ, ಪ್ರಸ್ತುತ ನಿಯಮ ಉಲ್ಲಂಘನೆಗಳಿಗೆ ಕೇವಲ 5,000 ರು. ದಂಡ ಮಾತ್ರ ವಿಧಿಸಲಾಗುತ್ತಿದೆ. ಈ ದಂಡವನ್ನು ಹೆಚ್ಚಿಸುವುದಷ್ಟೇ ಅಲ್ಲದೇ, ಶಿಕ್ಷೆಯ ಪ್ರಮಾಣವನ್ನು ಸೇರಿಸಿದರೆ ನಿಯಮ ಉಲ್ಲಂಘನೆ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸೊಂಪಾದ ಪುಟಗಳು

ಡಿಸಿಎಂ ಪಟ್ಟಕ್ಕೆ ಪ್ರಿಯಾಂಕ್ -ಜಮೀರ್?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಹೀಗೊಂದು ದಾಖಲೆಯ ಯೋಗಾ ಯೋಗ...
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನೀವು ಏನೇ ಕಟ್ಟಿ, ಅದನ್ನು ಸಂರಕ್ಷಿಸುವುದು ಸಹ ನಿಮ್ಮ ಹೊಣೆಗಾರಿಕೆಯೇ. ಕಟ್ಟುವುದಷ್ಟೇ ಕೆಲಸ ಎಂದು ಭಾವಿಸಿದರೆ, ಕಟ್ಟಿದ್ದನ್ನು ಉಳಿಸಿಕೊಳ್ಳುವುದು ಕಷ್ಟವಾಗಬಹುದು.

ವಕ್ರತುಂಡೋಕ್ತಿ

ನಮಗೆ ಇನ್ನೂ ಜಾಸ್ತಿ ಮೈ ಇರಬೇಕಿತ್ತು ಎಂದೆನಿಸುವುದು ಟ್ಯಾಟೂ ಡಿಸೈನ್‌ಗಳಲ್ಲಿರುವ ವೈವಿಧ್ಯವನ್ನು ನೋಡಿದಾಗ.

17 ಜಿಲ್ಲೆಗಳಲ್ಲಿ ಶಾಂತಿಯುತ ಪಥ ಸಂಚಲನ

ಪ್ರಭಾಕರ ಭಟ್‌ಗೆ ಪ್ರಿಯಾಂಕ್ ಪಂಥಾಹ್ವಾನ

ಆರ್‌ಎಸ್‌ಎಸ್ ಸದ್ದು

ಬೆಂಗಳೂರು: ರಾಜ್ಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿರುವ ಚಿತ್ತಾಪುರ ಪಥಸಂಚಲನ ನಡೆಯುವುದೋ ಇಲ್ಲವೋ ಎನ್ನುವ ಗೊಂದಲದ ನಡುವೆಯೇ ರಾಜ್ಯದ 17 ಜಿಲ್ಲೆಗಳಲ್ಲಿ ಭಾನುವಾರ ಸಂಘ ಪರಿವಾರ ಪಥ ಸಂಚಲನ ಶಾಂತಿಯುತವಾಗಿ ನೆರವೇರಿದೆ.

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಿರ್ಬಂಧಕ್ಕೆ 'ಕಾನೂನು ಸುವ್ಯವಸ್ಥೆ'ಯ ಕಾರಣವನ್ನು ಸರಕಾರ ಪರ ಅಡ್ವೋಕೇಟ್ ಜನರಲ್ ನೀಡಿದ್ದರು. ಆದರೀಗ ರಾಜ್ಯದ 17 ಜಿಲ್ಲೆಗಳಲ್ಲಿ ಭಾನುವಾರ ಸಾವಿರಾರು ಗಣವೇಷಧಾರಿಗಳ ಪಥ ಸಂಚಲನ ಯಾವುದೇ ಸಮಸ್ಯೆ ಇಲ್ಲದೇ ನಡೆದಿದೆ. ಆದ್ದರಿಂದ ವಿಚಾರಣೆಯ ಸಮಯದಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವ ಸಾಧ್ಯತೆಯಿದೆ. ಈ ಹಿಂದೆ ವಿಚಾರಣೆಯ ಸಮಯದಲ್ಲಿಯೇ, ದೇಶಾದ್ಯಂತ ನಡೆದಿರುವ ಪಥಸಂಚಲನದಲ್ಲಿ ಆಗದ ಕಾನೂನು ಸುವ್ಯವಸ್ಥೆ ಸಮಸ್ಯೆ ಚಿತ್ತಾಪುರದಲ್ಲಿ ಮಾತ್ರ ಆಗುತ್ತದೆ ಎನ್ನುವ ಆತಂಕವೇಕೆ? ಎಂದು ಸಂಘದ ಪರವಾಗಿವಾದ ಮಂಡಿಸಿದ್ದ ಅರುಣ್ ಶ್ಯಾಮ್ ಪ್ರಶ್ನಿಸಿದ್ದರು. ಇದೀಗ, ಭಾನುವಾರದ ಪಥ ಸಂಚಲನದ ಮಾಹಿತಿಯನ್ನು ನೀಡಿ, ಅನುಮತಿ ಕೇಳುವ ಸಾಧ್ಯತೆಯಿದೆ ಎನ್ನಲಾಗಿದೆ.

ಪಥಸಂಚಲನಕ್ಕೆ ಅವಕಾಶ ಸಿಗುವುದೋ ಇಲ್ಲವೋ ಎನ್ನುವ ಗೊಂದಲವಿದ್ದರೂ, ಚಿತ್ತಾಪುರದಲ್ಲಿ ನ.2ಕ್ಕೆ ನಡೆಯುವ ಪಥಸಂಚಲನದಲ್ಲಿ ರಾಜ್ಯದ ನಾನಾ ಭಾಗದ ಕಾರ್ಯಕರ್ತರು ಭಾಗವಹಿಸುವ ಸಾಧ್ಯತೆಯಿದೆ.

→ 4

ಆರ್‌ಎಸ್‌ಎಸ್‌ನ ನೊಂದಣಿ ಪತ್ರ ಕೇಳಿದ್ದು ತಪ್ಪೇ? ಸಂಘಪರಿವಾರವನ್ನು ದೇಶದ ದೊಡ್ಡ ಎನ್‌ಜಿಒ ಎಂದು ಮೋದಿ ಹೇಳುತ್ತಾರೆ. ಹಾಗಾದರೆ ಅದರ ಲೆಕ್ಕವನ್ನು ಕೊಡಲಿ. ಸರ್ದಾರ್ ಪಟೇಲರಿಂದ ಹಿಡಿದು ಇಂದಿರಾವರೆಗೆ ನಾವು ದೊಡ್ಡ ಮನಸ್ಸು ಮಾಡಿಕೊಂಡು ಬಂದಿದ್ದೇ ತಪ್ಪಾಗಿದೆ.

-ಪ್ರಿಯಾಂಕ್ ಖರ್ಗೆ, ಸಚಿವ

ನಾಳೆ ಶಾಂತಿ ಸಭೆ

ಹೈಕೋರ್ಟ್ ನಿರ್ದೇಶನದಂತೆ ಅ.28ರಂದು ಚಿತ್ತಾಪುರದಲ್ಲಿನ ಪಥಸಂಚಲನಕ್ಕೆ ಸಂಬಂಧಿಸಿದಂತೆ ಶಾಂತಿ ಸಭೆ ನಡೆಸಲು ಜಿಲ್ಲಾಡಳಿತ ಮುಂದಾಗಿದ್ದು, 10 ಸಂಘಟನೆಗಳಿಗೆ ಸಭೆಗೆ ಹಾಜರಾಗುವಂತೆ ನೋಟಿಸ್ ನೀಡಿದೆ. ಶಾಂತಿ ಸಭೆ ನಡೆಸಿದ ಬಗ್ಗೆ ಹಾಗೂ ಅಲ್ಲಿ ಕೈಗೊಂಡ ನಿರ್ಣಯದ ಬಗ್ಗೆ ಅಕ್ಟೋಬರ್ 30ರಂದು ವರದಿ ಸಲ್ಲಿಸುವಂತೆ ಹೈಕೋರ್ಟ್ ಸರಕಾರಕ್ಕೆ ಸೂಚಿಸಿದೆ. ಇದರಂತೆ ಮಂಗಳವಾರ ಶಾಂತಿ ಸಭೆ ಕರೆಯಲಾಗಿದೆ.

ಚಂಡಮಾರುತ: ಒಡಿಸ್ಸಾದಲ್ಲಿ ಕಟ್ಟೆಚ್ಚರ

ಭುವನೇಶ್ವರ: ಬಂಗಾಳಕೊಲ್ಲಿಯಲ್ಲಿ ಭಾನುವಾರ ಉಂಟಾದ ವಾಯುಭಾರ ಕುಸಿತವು ತೀವ್ರಗೊಂಡು ಪೂರ್ವ ಕರಾವಳಿಯತ್ತ ನಿಧಾನವಾಗಿ ಚಲಿಸುತ್ತಿದ್ದು, ಒಡಿಸ್ಸಾ, ಆಂಧ್ರ ಪ್ರದೇಶ, ಕರ್ನಾಟಕ, ತಮಿಳು ನಾಡು, ಕೇರಳ ಸೇರಿ ದಕ್ಷಿಣದ ರಾಜ್ಯಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ. ಅಕ್ಟೋಬರ್ 28 ಮತ್ತು 29ರಂದು ಗಂಟೆಗೆ 100 ಕಿ.ಮೀ.ವೇಗದಲ್ಲಿ ಗಾಳಿಯೊಂದಿಗೆ ಭಾರೀ ಮಳೆಯಾಗಲಿದೆ ಎಂಬ ಎಚ್ಚರಿಕೆ ಹಿನ್ನೆಲೆ ಯಲ್ಲಿ ಒಡಿಶಾದ ಎಲ್ಲಾ 30 ಜಿಲ್ಲೆಗಳಲ್ಲಿ ಕಟ್ಟೆಚ್ಚರ ಘೋಷಿಸಲಾಗಿದೆ. ಆಂಧ್ರಪ್ರದೇಶದ ಸುಮಾರು ಏಳು ಜಿಲ್ಲೆಗಳಲ್ಲಿ ಸರಕಾರಿ ನೌಕರರ ರಜೆಯನ್ನು ರದ್ದುಗೊಳಿಸಲಾಗಿದೆ.

ಟ್ರಂಪ್‌ಗೆ ಜಗ್ಗದ ಭಾರತ

ದೆಹಲಿ: ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸಲು ಭಾರತ ಒಪ್ಪಿಕೊಂಡಿದೆ. ವರ್ಷಾಂತ್ಯಕ್ಕೆ ಎರಡೂ ರಾಷ್ಟ್ರಗಳ ಇಂಧನ ತೈಲ ವಹಿವಾಟು

ಸಂಪೂರ್ಣ ಸ್ಥಗಿತಗೊಳ್ಳಲಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯ ಹೊರತಾಗಿಯೂ ರಷ್ಯಾದಿಂದ ಭಾರತದ ತೈಲ ಖರೀದಿ ಪ್ರಮಾಣ ಏರುತ್ತಲೇ ಸಾಗಿದೆ. ಈ ಮೂಲಕ ಭಾರತ ಟ್ರಂಪ್ ಬೆದರಿಕೆಗೆ ಮಣಿಯುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದೆ.

ಮೂರು ತಿಂಗಳ ನಿಧಾನಗತಿಯ ನಂತರ, ರಷ್ಯಾದಿಂದ ಭಾರತದ ತೈಲ ಆಮದು ಅಕ್ಟೋಬರ್ ತಿಂಗಳ ಮೊದಲ 15 ದಿನಗಳಲ್ಲಿ ದಿನಕ್ಕೆ 18 ಲಕ್ಷ ಬ್ಯಾರೆಲ್‌ಗಳಿಗೆ ಏರಿಕೆಯಾಗಿದೆ ಎಂದು ಅಂತಾರಾಷ್ಟ್ರೀಯ ಆಮದು-ರಫ್ತು ವಹಿವಾಟಿನ ಬಗ್ಗೆ ಮಾಹಿತಿ ನೀಡುವ ಕೆಪ್ಲರ್ (ಒಟ್ಟಿಟಿ) ಸಂಸ್ಥೆ ಸಂಗ್ರಹಿಸಿದ ಡೇಟಾದ ಮೂಲಕ ತಿಳಿದು ಬಂದಿದೆ. ಭಾರತದ ಸರಕಾರಿ ಮತ್ತು ಖಾಸಗಿ ಕಚ್ಚಾ ತೈಲ ಕಂಪನಿಗಳು ಅಮೆರಿಕ ಮತ್ತು ಐರೋಪ್ಯ ದೇಶಗಳ ಒತ್ತಡವನ್ನು ಧಿಕ್ಕರಿಸಿ, ರಷ್ಯಾದಿಂದ ಆಕರ್ಷಕ ಬೆಲೆಗಳಿಗೆ ಕಚ್ಚಾ ತೈಲವನ್ನು ಪಡೆಯುತ್ತಿದ್ದಾರೆ ಎಂದು ಕೆಪ್ಲರ್‌ನ ಸಂಶೋಧನಾ ವಿಶ್ಲೇಷಕ ಸುಮಿತ್ ರಿಟೋಲಿಯಾ ಹೇಳಿದ್ದಾರೆ. ಕಳೆದ ಮೂರು ತಿಂಗಳಲ್ಲಿ ಭಾರತದ ರಷ್ಯಾದ ತೈಲ ಆಮದು ಸ್ವಲ್ಪ ಕುಸಿದಿತ್ತು.

→ 4

31 ಮಂದಿ ಬೆಸ್ತರ ರಕ್ಷಣೆ

ಮಂಗಳೂರು: ಅರಬ್ಬಿ ಸಮುದ್ರದಲ್ಲಿ ಕೆಟ್ಟು ನಿಂತಿದ್ದ ಮೀನುಗಾರಿಕಾ ದೋಣಿಯಲ್ಲಿದ್ದ 31 ಬೆಸ್ತರನ್ನು ಕರಾವಳಿ ರಕ್ಷಣಾ ಪಡೆ ರಕ್ಷಣೆ ಮಾಡಿದೆ.

ಗೋವಾದ ಐಎಫ್‌ಬಿ ಸೆಂಟ್‌ಆಂಟೊನಿ 1 ಮೀನುಗಾರಿಕಾ ದೋಣಿಯ ಸ್ಟೇರಿಂಗ್ ಗೇರ್ ಕೈಕೊಟ್ಟ ಕಾರಣ 31 ಬೆಸ್ತರು 11 ದಿನಗಳಿಂದ ಸಮುದ್ರದಲ್ಲಿ ಸಿಲುಕಿದ್ದರು. ಈ ಬಗ್ಗೆ ಮಾಹಿತಿ ಪಡೆದ ಕರಾವಳಿ ರಕ್ಷಣಾ ಪಡೆ ಅ.24ರಂದು ಕಾರ್ಯಾಚರಣೆ ಆರಂಭಿಸಿತ್ತು. ನಾಪತ್ತೆಯಾಗಿದ್ದ ನಾವೆಯು ನವ ಮಂಗಳೂರು ಬಂದರಿನಿಂದ 100 ನಾಟಿಕಲ್ ಮೈಲು ದೂರದಲ್ಲಿ ಸಂಪರ್ಕ ಕಳೆದುಕೊಡಿರುವುದನ್ನು ಗುರುತಿಸಿ ಐಸಿಜಿಎಸ್ ಕಸ್ತೂರಬಾ ಗಾಂಧಿ ಹಡಗನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಇದೇ ವೇಳೆ ಕೊಚ್ಚಿಯ ಕರಾವಳಿ ರಕ್ಷಣಾ ಪಡೆಯ

ಡಾರ್ನಿ ಯರ್ ವಿಮಾನ ವೈಮಾನಿಕ ಶೋಧ ಆರಂಭಿಸಿತ್ತು. ಪ್ರಕ್ಷುಬ್ಧ ವಾತಾವರಣ ಇದ್ದ ಕಾರಣ ದೋಣಿಯು ಅಲೆಗಳ ಸೆಳೆತಕ್ಕೆ ಸಿಲುಕಿ ಕೆಲ ದೂರ ತೇಲಿಕೊಂಡು ಹೋಗಿತ್ತು. ದೋಣಿಯು ತೇಲುತ್ತಿರುವ ನಿಖರ ಸ್ಥಳವನ್ನು ಪತ್ತೆಹಚ್ಚಿ ಅಲ್ಲಿಗೆ ತೆರಳಿದ ರಕ್ಷಣಾ ಸಿಬ್ಬಂದಿ ಅದರಲ್ಲಿದ್ದ 31 ಮಂದಿ ಮೀನುಗಾರರನ್ನು ರಕ್ಷಿಸಿದ್ದಾರೆ.

ಸಲ್ಮಾನ್‌ಗೆ ಪಾಕ್ ಉಗ್ರ ಪಟ್ಟ

ಇಸ್ಲಾಮಾಬಾದ್: ಬಲೂಚಿಸ್ತಾನ್ ಪರ ಮಾತನಾಡಿದ್ದಕ್ಕೆ ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಪಾಕಿಸ್ತಾನವು 'ಭಯೋತ್ಪಾದಕ' ಎಂಬ ಹಣೆಪಟ್ಟಿ ಕಟ್ಟಿದೆ.

ಸಲ್ಮಾನ್ ಖಾನ್ ಇತ್ತೀಚೆಗೆ ರಿಯಾದ್‌ನಲ್ಲಿ ಭಾರತೀಯ ಸಿನಿಮಾದ ಜಾಗತಿಕ ವ್ಯಾಪ್ತಿಯ ಬಗ್ಗೆ ಮಾತನಾಡುವಾಗ, ' ಇಲ್ಲಿ ಹಲವಾರು ದೇಶಗಳ ಜನರು ವಾಸಿಸುತ್ತಾರೆ. ಬಲೂಚಿಸ್ತಾನದ ಜನರಿದ್ದಾರೆ, ಅಫ್ಘಾನಿಸ್ತಾನದ ಜನರಿದ್ದಾರೆ, ಪಾಕಿಸ್ತಾನದ ಜನರಿದ್ದಾರೆ. ಎಲ್ಲರೂ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಭಾರತದ ಸಿನಿಮಾ ಇಲ್ಲಿ ಸೂಪರ್ ಹಿಟ್ ಆಗುತ್ತದೆ' ಎಂದು ಬಲೂಚಿಸ್ತಾನ್ ಮತ್ತು ಪಾಕಿಸ್ತಾನವನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದರು. ಹೀಗಾಗಿ, ಪಾಕಿಸ್ತಾನ, 1997ರ ಭಯೋತ್ಪಾದನಾ ನಿಗ್ರಹ ಕಾಯ್ದೆಯಡಿ 'ಸಲ್ಮಾನ್ ಭಯೋತ್ಪಾದಕ' ಎಂದು ಘೋಷಿಸಿದೆ.

ಹುಲಿ ದಾಳಿಗೆ ರೈತ ಬಲಿ

ಮೈಸೂರು: ಹುಲಿ ದಾಳಿಗೆ ರೈತನೋರ್ವ ಬಲಿಯಾಗಿರುವ ಘಟನೆ ನಂಜನಗೂಡು ತಾಲೂಕಿನ ಹೆಡಿಯಾಲ ಹೋಬಳಿಯ ಮುಳ್ಳೂರುಹುಂಡಿ-ಬೆಣ್ಣೆಗೆರೆ ಗ್ರಾಮದ ಜಮೀನಿನಲ್ಲಿ ನಡೆದಿದೆ. ಬೆಣ್ಣೆಗೆರೆ ಗ್ರಾಮದ ರಾಜಶೇಖರ್ (55) ಹುಲಿ ದಾಳಿಗೆ ಬಲಿಯಾದ ರೈತ. ರಾಜಶೇಖರ್ ಹಾಗೂ ಸಿದ್ದರಾಮೇಗೌಡ (50) ಬೇರೆಯವರ ಜಮೀನಿನಲ್ಲಿ ಟೊಮೆಟೊ ಬಿಡಿಸಲು ಹೋಗಿದ್ದರು. ಟೊಮೆಟೊ ಬಿಡಿಸಿ ನಂತರ ಊಟಕ್ಕೆ ಮನೆಗೆ ಹೋಗುವಾಗ, ಪೊದೆಯಲ್ಲಿ ಅವಿತಿದ್ದ ಹುಲಿ ರಾಜಶೇಖರ್ ಅವರ ಮೇಲೆ ದಾಳಿ ಮಾಡಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜಕೀಯ ನಾಯಕರ ವಾಕ್ಸಮರ

ಮನ್ ಕಿ ಬಾತ್‌ನಲ್ಲಿ ಕಾಫಿ ಘಮ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ನಡೆಸಿಕೊಡುವ ಮನ್ ಕಿ ಬಾತ್‌ನ 127ನೇ ಸಂಚಿಕೆಯಲ್ಲಿ ಕರ್ನಾಟಕವನ್ನು ವಿಶೇಷವಾಗಿ ಉಲ್ಲೇಖಿಸಿದ್ದಾರೆ. ಕರ್ನಾಟಕದ ಕಾಫಿ, ಮುಧೋಳ ನಾಯಿ ಮತ್ತು ಬೆಂಗಳೂರಿನಲ್ಲಿ ಇಂಜಿನಿಯರ್ ಕಪಿಲ್ ಶರ್ಮಾ ಅವರು ಕೆರೆಗಳಿಗೆ ಕಾಯಕಲ್ಪ ನೀಡುವ ಅಭಿಯಾನ ಆರಂಭಿಸಿರುವುದನ್ನು ಪ್ರಸ್ತಾಪಿಸಿರುವ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ, ಕೇರಳ, ತಮಿಳುನಾಡು ಸೇರಿದಂತೆ ದೇಶದ ವಿವಿಧೆಡೆ ಬೆಳೆಯುತ್ತಿರುವ ಕಾಫಿ, ಜಾಗತಿಕವಾಗಿ ಪ್ರಸಿದ್ಧಿ ಪಡೆಯುತ್ತಿದೆ. ಇತ್ತೀಚೆಗೆ, ಈಶಾನ್ಯ ಭಾರತದಲ್ಲೂ ಕಾಫಿ ಬೆಳೆಯಲಾಗುತ್ತಿದ್ದು, ಭಾರತದ ವಿವಿಧ ಬಗೆಯ ಕಾಫಿಗೆ ಇರುವ ಬೇಡಿಕೆಯ ಬಗ್ಗೆ

ಮನ್ ಕಿ ಬಾತ್‌ನಲ್ಲಿ ಮೋದಿ ಹರ್ಷ ವ್ಯಕ್ತಪಡಿಸಿದರು. 'ಭಾರತೀಯ ಕಾಫಿ ಪ್ರಪಂಚದಾದ್ಯಂತ ಬಹಳ ಜನಪ್ರಿಯವಾಗುತ್ತಿದೆ. ಕರ್ನಾಟಕದ ಚಿಕ್ಕಮಗಳೂರು, ಕೊಡಗು ಮತ್ತು ಹಾಸನ; ತಮಿಳುನಾಡಿನ ಪಳನಿ, ಶೇವರಾಯ್, ನೀಲಗಿರಿ ಮತ್ತು ಅಣ್ಣಾಮಲೈ ಪ್ರದೇಶಗಳಾಗಿರಬಹುದು; ಗಡಿಯಲ್ಲಿರುವ ನೀಲಗಿರಿ ಪ್ರದೇಶವಾಗಿರಬಹುದು.

→ 4

ಮುಧೋಳ ಶ್ವಾನಕ್ಕೆ ಶಹಬ್ಬಾಸ್

ಕಳೆದ ವರ್ಷ ಲಕ್ನೋದಲ್ಲಿ ನಡೆದ ಅಖಿಲ ಭಾರತ ಪೊಲೀಸ್ ಕರ್ತವ್ಯ ಸಭೆಯ ಸಂದರ್ಭದಲ್ಲಿ ಬಿಎಸ್‌ಎಫ್‌ನಿಂದ ತರಬೇತಿ ಪಡೆದ ಮುಧೋಳ ನಾಯಿ ರಿಯಾ, ವಿದೇಶಿ ತಳಿಗಳ ಶ್ವಾನಗಳನ್ನು ಸೋಲಿಸಿ ಪ್ರಥಮ ಬಹುಮಾನವನ್ನು ಗೆದ್ದಿದೆ. ನಮ್ಮ ಸ್ಥಳೀಯ ಶ್ವಾನಗಳು ಅದ್ಭುತ ಧೈರ್ಯವನ್ನು ಪ್ರದರ್ಶಿಸಿವೆ ಎಂದು ಪ್ರಧಾನಿ ತಮ್ಮ ಮನ್ ಕಿ ಬಾತ್‌ನಲ್ಲಿ ಎರಡನೇ ಬಾರಿಗೆ ಮುಧೋಳ ಶ್ವಾನದ ಬಗ್ಗೆ ಅಭಿಮಾನ ಪ್ರದರ್ಶಿಸಿದರು.

ಹಲವರ ಭವಿಷ್ಯ ಬರೆಯಲಿರುವ ಬಿಹಾರ ಕದನ

ವಿಧಾನಸಭೆ ಚುನಾವಣೆಗೆ ಸಜ್ಜಾಗಿ ನಿಂತಿರುವ ಬಿಹಾರದಲ್ಲಿ ಚುನಾವಣೆ ಯಾತ್ರೆ ಕೈಗೊಂಡು, ವಾಸ್ತವ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲುವ ಯತ್ನವನ್ನು 'ವಿಶ್ವವಾಣಿ' ದಿನಪತ್ರಿಕೆ ಮಾಡಲಿದೆ. ಪಕ್ಷಗಳ ಸೆಣಸಾಟ, ಯುವಕರ ಮನದಾಳ, ಬಡತನ, ಮಹಿಳೆಯರ ಸಮಸ್ಯೆ ನಿಜಕ್ಕೂ ಬಿಹಾರ ಬದಲಾಗಿದೆಯೇ, ಇಲ್ಲವೇ ಎಂಬೆಲ್ಲಾ ಹಲವು ವಿಷಯಗಳ ಬಗ್ಗೆ **ರಾಘವ ಶರ್ಮ ನಿಡ್ಲೆ** ಇಂದಿನಿಂದ ಪ್ರತ್ಯಕ್ಷ ವರದಿ ನೀಡಲಿದ್ದಾರೆ.

ರಾಜಕೀಯ ವರದಿಗಾರಿಕೆ ಮಾಡುವ ಯಾರಿಗೇ ಆಗಲಿ, ಬಿಹಾರ ಚುನಾವಣೆ ಎನ್ನುವುದು ಹಲವು ಕಾರಣಗಳಿಗೆ ಇಷ್ಟವಾಗಿ ಬಿಡುತ್ತದೆ. ರಾಷ್ಟ್ರ ರಾಜಕಾರಣದ ದಿಕ್ಕನ್ನು ಬದಲಿಸಬಲ್ಲ ಶಕ್ತಿ ಬಿಹಾರಕ್ಕಿದೆ. ಅಂದಾಜು 13 ಕೋಟಿ ಜನಸಂಖ್ಯೆಯ ಬಿಹಾರದಲ್ಲಿ ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಗೆ ವಲಸೆ ಹೋಗುವ ದೊಡ್ಡ ಜನವರ್ಗವೇ ಇದೆ. ಇಲ್ಲಿನ ಜನಜೀವನ, ರಾಜ ಕೀಯ, ಜಾತಿ ಅಂಕಗಣಿತ ಸೇರಿದಂತೆ ಹತ್ತಾರು ವಿಷಯಗಳ ಬಗ್ಗೆ ಆಳ ವಾಗಿ ತಿಳಿದುಕೊಳ್ಳಲು ಚುನಾವಣೆ ಒಂದು ಸದವಕಾಶ ಎಂದೇ ನಾನು ನಂಬಿದ್ದೇನೆ. ಇದೀಗ ಮತ್ತೊಂದು ರಾಜ್ಯ ವಿಧಾನಸಭೆ ಚುನಾವಣೆಗೆ ಸಜ್ಜಾಗಿ ನಿಂತಿರುವ ಬಿಹಾರದಲ್ಲಿ ಮತ್ತೊಮ್ಮೆ ಚುನಾವಣೆ ಯಾತ್ರೆ ಕೈಗೊಂಡು, ವಾಸ್ತವ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲುವ ಯತ್ನವನ್ನು ನಾನು ವಿಶ್ವವಾಣಿ ದಿನಪತ್ರಿಕೆಗಾಗಿ ಇಂದಿನಿಂದ ಮಾಡಲಿದ್ದೇನೆ. ಪಕ್ಷಗಳ ಸೆಣಸಾಟ, ಯುವಕರ ಮನದಾಳ, ಬಡತನ, ಮಹಿಳೆಯರ ಸಮಸ್ಯೆ, ನಿಜಕ್ಕೂ ಬಿಹಾರ ಬದಲಾಗಿದೆಯೇ, ಇಲ್ಲವೇ ಎಂಬೆಲ್ಲಾ ಹಲವು ವಿಷಯಗಳ ಬಗ್ಗೆ

ಪ್ರತ್ಯಕ್ಷ ವರದಿ ನೀಡುವ ಯತ್ನವನ್ನು ಪತ್ರಿಕೆ ಮಾಡಲಿದೆ.

2014ರ ಲೋಕಸಭೆ, 2015ರ ವಿಧಾನಸಭೆ, 2019ರ ಲೋಕಸಭೆ ಚುನಾವಣೆ ಮತ್ತು 2020ರ ವಿಧಾನಸಭೆ ಚುನಾವಣೆ ವರದಿ ಮಾಡಿದ್ದ ಸಂದರ್ಭಕ್ಕೂ ಈಗಿನ ಸಂದರ್ಭಕ್ಕೂ ಸಾಕಷ್ಟು ವ್ಯತ್ಯಾಸಗಳಿದ್ದು, ಹಲವು ಕಾರಣಗಳಿಗಾಗಿ ಈ ಸಲದ ಚುನಾವಣೆ ಅತ್ಯಂತ ಮಹತ್ವದ್ದೆನಿಸಿ ಕೊಂಡಿದೆ. ರಾಜಕಾರಣ ತಮ್ಮ ರಕ್ತದಲ್ಲೇ ಇದೆ ಎಂಬಂತೆ ದೇಶದ ರಾಜಕೀಯದ ಬಗ್ಗೆ ಅರಳು ಹುರಿದಂತೆ ವಿಶ್ಲೇಷಿಸುವ ಈ ರಾಜ್ಯದ ಜನವರ್ಗದೊಂದಿಗೆ ರಾಜಕೀಯ ಮತ್ತು ಜಾತಿ ಅಂಕಗಣಿತದ ಚರ್ಚೆ ಮಾಡುವುದೇ ಒಂದು ಖುಷಿ. ಬಿಹಾರದ ಯಾವು ದೋ ಒಂದು ಮೂಲೆಯಲ್ಲಿ ಕುಳಿತ ಬಡ ಕೂಲಿ ಕಾರ್ಮಿಕ, ಕೃಷಿಕನೂ ಕರ್ನಾಟಕದ ರಾಜಕೀಯ ಬೆಳವಣಿಗೆಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡುತ್ತಿದ್ದುದನ್ನು ಕಂಡೇ ನಾನು ಹಲವು ಬಾರಿ ಬೆರಗಾಗಿದ್ದೆ. ಇಲ್ಲಿನ ಯುವಕರಲ್ಲೂ ರಾಜಕೀಯ ಪ್ರಜ್ಞೆ ಹೆಚ್ಚಿಗೇ ಇದೆ. ಅವರಿಗೆ ಬೋಧಿಸುವ ಶಿಕ್ಷಕ ವರ್ಗ ಕೂಡ ಬಹಿರಂಗವಾಗಿ ಒಂದಿಲ್ಲೊಂದು ಪಕ್ಷದೊಂದಿಗೆ ಜೋಡಿಸಿಕೊಂಡಿರುತ್ತಾರೆ.

→ 4

ಪಲ್ಟಿ ಹೊಡೆದರೂ ಕುರ್ಚಿ ಇವರಿಗೇ!

ಅಧಿಕಾರಕ್ಕಾಗಿ ನಿತೀಶ್ ಕುಮಾರ್ ಅಲ್ಲಿಂದಿಲ್ಲಿಗೆ 'ಪಲ್ಟಿ' ಹೊಡೆದರೂ, ಲಾಲೂ ಜಂಗಲ್ ರಾಜ್‌ನಿಂದ ಹಳಿ ತಪ್ಪಿದ ಬಿಹಾರವನ್ನು ಸರಿ ದಾರಿಗೆ ತಂದಿದ್ದು ನಿತೀಶ್ ಕುಮಾರ್. ಆದರೆ ನಿತೀಶ್ ಕುಮಾರ್ ಅವರಿಗೆ ಸಾಮಾಜಿಕ ಸಮೀಕರಣ ಜತೆಯಾಗಲಿಲ್ಲ. ಲಾಲುಗಿದ್ದಂತೆ ದೊಡ್ಡ ಬೇಸ್ ವೋಟ್ ಬ್ಯಾಂಕ್ ಜೊತೆಗಿಲ್ಲ. ಸೆಕ್ಯುಲರ್ ಘೋಷಣೆ ಹಾಕಿ ಲಾಲು ಜತೆಗೆ ಹೋಗಿದ್ದರಿಂದ ಮೇಲ್ಜಾತಿಯ ಮತಗಳು ದೂರ ಹೋದವು. 2020ರಲ್ಲಿ ರಾಮ್ ವಿಲಾಸ್ ಪಾಸ್ವಾನ್ ಪುತ್ರ ಚಿರಾಗ್ ಪಾಸ್ವಾನ್ ಅವರು ಜೆಡಿಯು ಸ್ಪರ್ಧೆ ಮಾಡಿದ ಕ್ಷೇತ್ರಗಳಲ್ಲೆಲ್ಲಾ ಎಲ್‌ಜೆಪಿಯ ಅಭ್ಯರ್ಥಿಗಳನ್ನು ಹಾಕಿ, ಜೆಡಿಯು ಅಸ್ತಿತ್ವವನ್ನೇ ಬುಡಮೇಲು ಮಾಡಲು ಯತ್ನಿಸಿದರು. ಆದರೂ, ನಿತೀಶ್‌ಗೆ ಸಿಎಂ ಕುರ್ಚಿ ಮಾತ್ರ ತಪ್ಪಲಿಲ್ಲ. ಎನ್‌ಡಿಎ ಸರಕಾರ ಇರಲಿ, ಮಹಾಮೈತ್ರಿ ಸರಕಾರವಿರಲಿ ಸಿಎಂ ಮಾತ್ರ ನಿತೀಶ್ ಕುಮಾರ್. ಈ ಬಾರಿ ನಿತೀಶ್‌ಗೆ ಪ್ರಶಾಂತ್ ಕಿಶೋರ್ ಮತ್ತು ಚಿರಾಗ್ ಪಾಸ್ವಾನ್ ಇಬ್ಬರೂ ರಾಜಕೀಯ ಬೆದರಿಕೆ ಒಡ್ಡಿದ್ದಾರೆ. ಜೆಡಿಯು ಫಲಿತಾಂಶ ಕಳೆದ ಬಾರಿಗಿಂತಲೂ ಕಡಿಮೆಯಾದಲ್ಲಿ ನಿತೀಶ್ ಜತೆಗೆ ಪಕ್ಷವೂ ಅವಸಾನದ ಹಾದಿ ಹಿಡಿಯುವ ಸಾಧ್ಯತೆಯೇ ಹೆಚ್ಚು ಎಂಬ ಮಾತುಗಳಿವೆ. ಹಾಗಾಗಿ ಜೆಡಿಯು ಅಸ್ತಿತ್ವ ರಕ್ಷಣೆ ದೃಷ್ಟಿಯಿಂದ ಅವರಿಗೆ ಇದು ನಿರ್ಣಾಯಕ ಚುನಾವಣೆ.

ಸಮಾಚಾರ ಸಣ್ಣದಲ್ಲ

ಮರು ಪರಿಶೀಲನಾ ಅರ್ಜಿಗೆ ಒತ್ತಾಯ

ಹಾವೇರಿ: ಶಿಕ್ಷಕರುಗಳಿಗೆ ಅರ್ಹತಾ ಪರೀಕ್ಷೆ ಟಿಇಟಿ ಕುರಿತು ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಮರು ಪರಿಶೀಲಿಸುವಂತೆ ಕೋರಿ ರಾಜ್ಯ ಸರಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಬೇಕೆಂದು ಅಖಿಲ ಭಾರತ ಶಿಕ್ಷಕರ ಪೆಡರೇಷನ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಗುರಿಕಾರ ರಾಜ್ಯ ಸರಕಾರಕ್ಕೆ ವಿನಂತಿಸಿದ್ದಾರೆ ಶಿಕ್ಷಕರಾಗಿ ನೇಮಕವಾಗುವ ಪೂರ್ವ ದಲ್ಲಿ ಶಿಕ್ಷಕ ರಪೂರ್ಣ ಪ್ರಮಾಣದ ತರಬೇತಿಯನ್ನು ಪಡೆದು ಶಿಕ್ಷಕರಾಗಿ ನೇಮಕವಾಗಿರುತ್ತಾರೆ ಶಿಕ್ಷಕರಾಗಿ ನಿಯುಕ್ತಿಹೊಂದಿದ ಮೇಲೆ ಸರಕಾರ ಹಾಗೂ ಇಲಾಖೆ ನಿಗದಿಗೊಳಿಸುವ ಎಲ್ಲ ತರಬೇತಿಗಳನ್ನು ಪಡೆದು ಕೊಂಡಿದ್ದಾರೆ 10, 15 ವರ್ಷಗಳವರೆಗೆ ನಿರಂತರವಾಗಿ ಸೇವೆ ಸಲ್ಲಿಸಿದ್ದಾರೆ ಇದರ ಪ್ರತಿಕವಾಗಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಮುಂದಿನ ಹಂತದ ಶಿಕ್ಷಣ ಪೂರೈಯಿಸಿ ವಿವಿಧ ರೀತಿಯ ಉದ್ಯೋಗ ಮಾಡುತಿದ್ದಾರೆ. ಶಿಕ್ಷಕರ ಸೇವಾನುಭವವೇ ದೊಡ್ಡ ತರಬೇತಿಯಾಗಿರುವ ಹೊತ್ತಿಗೆ ಕೇಂದ್ರ ಸರಕಾರದ ಎನ್ ಸಿ ಟಿ ಇಯ ತಪ್ಪು ನೀತಿಯಿಂದ ಶಿಕ್ಷಕರ ಸೇವೆಗೆ ದಕ್ಕೆ ಉಂಟಾಗಿದೆ ಪ್ರತಿವರ್ಷ ನಿರಂತರ ವ್ಯಾಪಕ ಮೌಲ್ಯಮಾಪನ ಮಾಡುವ ಶಿಕ್ಷಕರುಗಳಿಗೆ ಟಿಇಟಿ ಇದು ಯಾವ ನ್ಯಾಯ? ಕರ್ನಾಟಕ ಸರ್ಕಾರ ಮರುಪರಿಶೀಲನಾ ಅರ್ಜಿ ಮತ್ತು ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗೆ ಸಲ್ಲಿಸಬೇಕೆಂದು ಗುರಿಕಾರ ವಿನಂತಿಸಿದ್ದಾರೆ.

ಇಬ್ಬರಿಗೆ ಸ್ವರ ಕಮಲಾಕರ ಪ್ರಶಸ್ತಿ

ಶಿರಸಿ: ಆಗ್ರಾ ಘರಾಣೆಯ ಮೇರು ಕಲಾವಿದರಾಗಿದ್ದ ಪಂಡಿತ್ ಕಮಲಾಕರ್‌ಭಟ್ ಕೆರೇಕೈ ಅವರ ಸ್ಮರಣಾರ್ಥ ಸ್ಥಾಪಿತ ಅಂತರ್ಕಮಲ ಮ್ಯೂಸಿಕ್ ಅಕಾಡೆಮಿಯು ''ಸ್ವರ ಕಮಲಾಕರ ಪ್ರಶಸ್ತಿ'' ಪ್ರಕಟಿಸಿದೆ. ಅಗ್ರಾ ಘರಾಣೆಯ ಖ್ಯಾತ ಖಯಾಲ್ ಗಾಯಕ ಉಸ್ತಾದ್ ವಸೀಮ್ ಅಹ್ಮದ್ ಖಾನ್ ಮತ್ತು ತಬಲಾ ವಾದನ ಕ್ಷೇತ್ರದ ಹಿರಿಯ ಗುರು ಪಂಡಿತ ಮೋಹನ್ ಹೆಗಡೆ ಹುಣಸೆಕೊಪ್ಪ ಅವರಿಗೆ 'ಸ್ವರ ಕಮಲಾಕರ' ಪ್ರಶಸ್ತಿ ಘೋಷಿಸಲಾಗಿದೆ. ಕಾರ್ಯಕ್ರಮದ ಅತಿಥಿಗಳಾಗಿ ರಾಜ್ಯ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ ರಾವ್ ಹಾಗೂ ಪತ್ರಕರ್ತ ರಾಘವೇಂದ್ರ ಬೆಟ್ಟಕೊಪ್ಪ ಭಾಗವಹಿಸಲಿದ್ದಾರೆ. ಪ್ರಶಸ್ತಿಯನ್ನು ನವೆಂಬರ್9ರಂದು ಭಾನುವಾರ ಬೆಂಗಳೂರು ನಗರದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಇಡೀ ದಿನ ಸಂಗೀತ ಮಹೋತ್ಸವ, ಗಾಯನ ಕಾರ್ಯಕ್ರಮ ಆಯೋಜಿಸಿ ಪ್ರಶಸ್ತಿ ಪ್ರದಾನ ಹಮ್ಮಿಕೊಂಡಿದೆ. ಅಗ್ರಾ ಘರಾನೆಯನ್ನು ಆರಾಧನೆಯಲ್ಲಿ ಅಳವಡಿಸಿಕೊಂಡ ಕಮಲಾಕರ ಭಟ್ಟ ಅವರ ಸ್ಮರಣೆಯ ಉತ್ಸವದಲ್ಲಿ ಭಾರತದೆಲ್ಲೆಡೆಯಿಂದ ಆಹ್ವಾನಿತ ಕಲಾವಿದರು ಭಾಗವಹಿಸಿ ತಮ್ಮ ಗಾಯನ ಮತ್ತು ವಾದನಗಳನ್ನು ಪ್ರಸ್ತುತಿಗಳನ್ನು ನೀಡಲಿದ್ದಾರೆ ಎಂದು ಪ್ರಕಟನೆಯಲ್ಲಿ ಗಾಯಕ, ಕಮಲಾಕರ ಭಟ್ಟ ಪುತ್ರ ಕಿರಣ್ ಭಟ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಹೃದಯಾಘಾತಕ್ಕೆ ಯುವಕ ಬಲಿ

ಲಿಂಗಸೂಗೂರು: ಹೃದಯಘಾತದಿಂದ ಯಾದಗಿರಿ ಮೂಲದ ವ್ಯಕ್ತಿ ಸಾವನ್ನಪಿದ ಘಟನೆ ಲಿಂಗಸೂಗೂರಿನ ತಾಲೂಕು ಸಾರ್ವಜನಿಕ ಆಸ್ಪತ್ರೆ ಜರುಗಿದೆ. ಯಾದಗಿರಿ ಮೂಲದ ಸರ್ಕಾರಿ ನೌಕರ ಪ್ರಕಾಶ್ ತಂದೆ ಶಾಂತಗೌಡ (32) ಮುದಗಲ್ ಗೆ ಗರ್ಭಿಣಿ ಹೆಂಡತಿಯನು ಪರೀಕ್ಷೆಗೆ ಕರೆದುಕೊಂಡು ಬಂದಿದ್ದು. ಮುದಗಲ್ ನಲ್ಲಿ ಎದೆ ನೋವು ಕಾಣಿಸಿಕೊಂಡಿದ್ದು, ಲಿಂಗಸೂಗೂರು ಸರ್ಕಾರಿ ಆಸ್ಪತ್ರೆಗೆ ಬರುವ ಮಾರ್ಗ ಮದ್ಯದಲ್ಲಿ ಸಾವನ್ನಪಿದ್ದಾನೆ ಎಂದು ವೈದ್ಯರು ದೃಢಪಡಿಸಿದ್ದಾರೆ. ಹೆಂಡತಿ.... ಕೂಡ ಶಿಕ್ಷಕಿಯಾಗಿದ್ದು ಗಂಡನ್ನನ್ನು ಕಳೆದುಕೊಂಡ ಜೀವದ ಆಕ್ರಂದನ ಮುಗಿಲು ಮುಟ್ಟಿತ್ತು.

ಸನ್ಮಾನಕ್ಕೆ ಸಾಧಕರಿಂದ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲಾಡಳಿತದಿಂದ ನವೆಂಬರ್1 ರಂದು ಆಚರಿಸಲಾಗುವ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಸನ್ಮಾನಕ್ಕೆ ವಿವಿಧ ಕ್ಷೇತ್ರ್ಯಗಳಲ್ಲಿ ಸಾಧನೆ ಮಾಡಿದ ಮಹನೀಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಪತ್ರಿಕೋದ್ಯಮ, ವಿಜ್ಞಾನ-ತಂತ್ರಜ್ಞಾನ, ಕೃಷಿ, ಪರಿಸರ, ಪೌರಾಕರ್ಮಿಕ, ವೈದ್ಯಕೀಯ, ಸಮಾಜ ಸೇವೆ, ವಾಣಿಜ್ಯೋದ್ಯಮ, ರಂಗಭೂಮಿ, ಜಾನಪದ, ನಾಟ್ಯ/ನೃತ್ಯ, ಚಿತ್ರಕಲೆ/ಶಿಲ್ಪಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡಾ ಕ್ಷೇತ್ರದಲ್ಲ ಪ್ರಶಸ್ತಿ ಪಡೆದ ಮಹನೀಯರು ಅಗತ್ಯ ದಾಖಲೆಗಳೊಂದಿಗೆ ಅಕ್ಟೋಬರ್ 27ರೊಳಗಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಭವನ, ದೇವಗಿರಿ-ಹಾವೇರಿ ಈ ವಿಳಾಸಕ್ಕೆ ಸಲ್ಲಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಬಸವರಾಜ ಬೊಮ್ಮಾಯಿ} ಸಂಸದ

ಪಥ ಸಂಚಲನದಿಂದ ಯಾರಿಗಾದರೂ ತೊಂದರೆಯಾಗಿದಿಯಾ? ಸರಕಾರ ಸಮಾಜದಲ್ಲಿ ಕ್ಷೋಭೆ ಉಂಟುಮಾಡುವ ಕೆಲಸ ಮಾಡುತ್ತಿದೆ. ಇಷ್ಟು ವರ್ಷದಿಂದ ಸಂಘ ಪಥ ಸಂಚಲನ ಮಾಡುತ್ತಿದೆ. ಯಾರಿಗಾದರೂ ತೊಂದರೆಯಾಗಿದೆಯಾ?. ಮೊಹರಂನಲ್ಲಿ ಕಬ್ಬಿಣದ ಚಾಟಿಯಿಂದ ಹೊಡೆದುಕೊಳ್ಳುತ್ತಾರೆ ಅದು ಸರಿನಾ?

ಪೂರ್ವಭಾವಿ ಸಭೆ | ಅಗತ್ಯ ಸಿದ್ಧತೆ ಕೈಗೊಳ್ಳಲು ಇಲಾಖೆ ಅಧಿಕಾರಿಗಳಿಗೆ ಎಡಿಸಿ ನಿರ್ದೇಶನ

ರಾಜ್ಯೋತ್ಸವ ಆಚರಣೆಗೆ ಸಿದ್ಧತೆ

ಹಾವೇರಿ: ಜಿಲ್ಲಾಡಳಿತದಿಂದ ನವೆಂಬರ್1 ರಂದು ಅರ್ಥಪೂರ್ಣ ಕನ್ನಡ ರಾಜ್ಯೋತ್ಸ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ್ ಎಲ್ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಕನ್ನಡ ರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 7-45ಕ್ಕೆ ನಗರದ ಮೈಲಾರ ಮಹದೇವಪ್ಪ ವೃತ್ತದಿಂದ ಹೊರಡುವ ಭುವನೇಶ್ವರಿ ಭಾವಚಿತ್ರ ಮೆರವಣಿಗೆ ಅಗತ್ಯ ಜನಪದ ಕಲಾ ತಂಡಗಳನ್ನು ಒದಗಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಯಾವುದೇ ಲೋಪವಾಗದಂತೆ ಧ್ವಜಾರೋಹಣ, ಕ್ರೀಡಾಂಗಣ ಸ್ವಚ್ಚತೆ, ವೇದಿಕೆ ಅಲಂಕಾರ, ಆಸನ ವ್ಯವಸ್ಥೆ, ಸಾಧಕರಿಗೆ ಸನ್ಮಾನ, ಪಥಸಂಚಲನ, ಅಂಬ್ಯುಲೆನ್ಸ್, ಕುಡಿಯುವ ನೀರು, ಧ್ವನಿವರ್ಧಕ ಸೇರಿದಂತೆ ಅಗತ್ಯ ಸಿದ್ಧತೆಕೈಗೊಳ್ಳಬೇಕು ಎಂದು ವಿವಿಧ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆ.ಎಸ್.ಆರ್.ಟಿ.ಸಿ., ಅರಣ್ಯ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಸರ್ಕಾರ ಯೋಜನೆಗಳ ಮಾಹಿತಿ ಕುರಿತು ಸ್ಥಬ್ದಚಿತ್ರಗಳನ್ನು ಮಾಡಬೇಕು. ಎಲ್ಲ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಕನ್ನಡ ನಾಡು-ನುಡಿ ಹಾಗೂ ಸಂಸ್ಕೃತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಎಲ್ಲ ಸರ್ಕಾರಿ ಕಟ್ಟಡಗಳಿಗೆ ದೀಪಾಲಂಕಾರ ಮಾಡಬೇಕು ಹಾಗೂ ನಗರದ ಎಲ್ಲ ವೃತ್ತಗಳಿಗೆ ದೀಪಾಲಂಕಾರ ಮಾಡುವಂತೆ ನಗರಸಭೆ ಪೌರಾಯುಕ್ತರಿಗೆ ತಿಳಿಸಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಅಶೋಕ ಶಾಸ್ತ್ರಿ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮೋಹನ ದಂಡಿನ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಡಿ.ಜೆ. ಮಂಜುನಾಥ, ಡಿವೈಎಸ್ಪಿ ಹನಕನಹಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಡಾ.ನಾಗರಾಜ್ ಎಲ್ ಅವರು ಮಾತನಾಡಿದರು.

> **ಕೆ.ಎಸ್.ಆರ್.ಟಿ.ಸಿ., ಅರಣ್ಯ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಸರ್ಕಾರ ಯೋಜನೆಗಳ ಮಾಹಿತಿ ಕುರಿತು ಸ್ಥಬ್ದಚಿತ್ರಗಳನ್ನು ಮಾಡಬೇಕು. ಎಲ್ಲ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು.**
> -ಡಾ.ನಾಗರಾಜ್, ಎಲ್, ಅಪರ ಜಿಲ್ಲಾಧಿಕಾರಿ

ಮಹಿಳೆ ಜಾಗೃತಳಾದರೆ ಸಮಾಜ ಸದೃಢ

ಸಂಘದ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಹೊನ್ನಾವರ ವನಿತಾ ದೇಶಭಂಡಾರಿ ಉದ್ಘಾಟಿಸಿದರು.

ಕುಮಟಾ: ಮಹಿಳಾ ಸಬಲೀಕರಣದ ಅವಶ್ಯಕತೆ ನಮ್ಮ ಸಮಾಜಕ್ಕೆ ಅಗತ್ಯವಾಗಿದೆ.ಈ ನಿಟ್ಟಿನಲ್ಲಿ ಸರಕಾರವು ಕೊಡಮಾಡಿದ ಸೌಲಭ್ಯಗಳ ಕುರಿತು ಅರಿತುಕೊಂಡು ಅವುಗಳ ಪ್ರಯೋಜನ ಪಡೆಯಬೇಕಾಗಿದೆ. ಶಿಶು ಅಭಿವೃದ್ಧಿ ಮಹಿಳಾ ಕಲ್ಯಾಣ ವಿಭಾಗದಲ್ಲಿ ಈ ದಿಸೆಯಲ್ಲಿ ಸಾಕಷ್ಟು ಯೋಜನೆಗಳಿವೆ. ಸುಕನ್ಯಾ ಸಮೃದ್ಧಿ ಯೋಜನೆಯು ಹೆಣ್ಣು ಮಕ್ಕಳ ಪಾಲಿಗೆ ವರವಾಗಿದೆ. ಸಮಾಜದ ಪ್ರತಿಯೊಬ್ಬರೂ ಶಿಕ್ಷಣ ಪಡೆಯುವುದರ ಮೂಲಕ ಉತ್ತಮ ಸಮಾಜ ನಿರ್ಮಿಸಬಹುದಾಗಿದೆ ಎಂದು ಹೊನ್ನಾವರದ ಶಿಶು ಅಭಿವೃದ್ಧಿ ಮತ್ತು ಮಹಿಳಾ ಕಲ್ಯಾಣಾಧಿಕಾರಿ ವನಿತಾ ದೇಶ ಭಂಡಾರಿ ಹೇಳಿದರು. ಅವರು ಪಟ್ಟಣ ದ ನೆಲ್ಲಿಕೇರಿಯ ಮಹಾಸತಿ ಸಭಾಭವನದಲ್ಲಿ ಉತ್ತರ ಕನ್ನಡ ಜಿಲ್ಲಾ ಭಂಡಾರಿ ಸಮಾ ಜೋನ್ನತಿ ಸಂಘದ ವಾರ್ಷಿಕ ಸ್ನೇಹ ಸಮ್ಮೇಳನವನ್ನು ರವಿವಾರ ಉದ್ಘಾಟಿಸಿ ಮಾತನಾಡುತ್ತಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಕೆ ಎಸ್ ಆರ್‌ಟಿ ಸಿ ಕುಮಟಾದ ಘಟಕ ವ್ಯವಸ್ಥಾಪಕ ವಿನಾಯಕ ದೇಶಭಂಡಾರಿ ಅವರು ಮಾತನಾಡಿದರು. ಇನ್ನೋರ್ವ ಮುಖ್ಯ ಅತಿಥಿ ಉಡುಪಿ ಜಿಲ್ಲಾ ಚಪ್ಪೇಗಾರ ಸಾರಸ್ವತ ಸಮಾಜದ ಮಾಜಿ ಅಧ್ಯಕ್ಷ ಮಹಾಬಲ ನಾಯ್ಕ, ಸಮಾಜದ ಅಭ್ಯುದಯಕ್ಕೆ ಸ್ವಂತಿಕೆಯ ಅವಶ್ಯಕತೆಯ ಕುರಿತು ಮಾತಾಡಿದರು. ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ತಾಲೂಕಿನ ಪರವಾಗಿ ಸಮಾಜಕ್ಕೆ ಶ್ರಮಿಸಿದ ಹಿರಿಯರನ್ನು ಸನ್ಮಾನಿಸಲಾಯಿತು ಕಾರವಾರದಿಂದ. ಅರವಿಂದ ಕಲ್ಗುಟ್ಕರ್, ಯಲ್ಲಾಪುರದಿಂದ ಪ್ರೇಮಾನಂದ ನಾಯ್ಕ ಕುಮಟಾದಿಂದ ರಮೇಶ ಭಂಡಾರಿ ದೇವರಕ್ಲ ಹೊನ್ನಾವರದಿಂದ ದುರ್ಗಪ್ಪ ದೇಶಭಂಡಾರಿ ಇವರು ಸನ್ಮಾನ ಪಡೆದರು. ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಪುರಸ್ಕಾರ ಪಡೆದಿರುವ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ರಮೇಶ ಪತ್ರೇಕರ್ ಮತ್ತು ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯ ಜಿಲ್ಲಾ ಪ್ರಶಸ್ತಿ ಪಡೆದ ಪ್ರೌಢಶಾಲಾ ಶಿಕ್ಷಕ ಕಿಶೋರ ಕಿಂದಳಕರ್‌ಅವರನ್ನು ಸಮಾಜದ ಪರವಾಗಿ ಸನ್ಮಾನಿಸಲಾಯಿತು.

ಹದಗೆಟ್ಟ ರಸ್ತೆ ಅಭಿವೃದ್ಧಿಗಾಗಿ ಹೋಮದ ಪ್ರತಿಭಟನೆ

ಹಾವೇರಿ: ರಾಣೆಬೆನ್ನೂರ ನಗರ ಸೇರಿದಂತೆ ತಾಲೂಕಿನಾದ್ಯಂತ ರಸ್ತೆಗಳು ಹದಗೆಟ್ಟು ಹೋಗಿವೆ ತಕ್ಷಣವೇ ರಸ್ತೆಗಳನ್ನು ಅಭಿವೃದ್ಧಿ ಪಡಿಸುವಂತೆ ಒತ್ತಾಯಿಸಿ ರಾಣೆಬೆನ್ನೂರ ನಗರದಲ್ಲಿರುವ ಹಾಳಾದ ನಡು ರಸ್ತೆಯಲ್ಲಿಯೇ ರೈತ ಸಂಘಟನೆಯ ಮುಖಂಡರು ಅಗ್ನಿಕುಂಡದ ಹೋಮ ಹಾಕಿ ವಿನೂತನ ಹೋರಾಟ ನಡೆಸಿದ್ದಾರೆ.

ರವಿವಾರ ಮುಂಜಾನೆ ಸಮಯದಲ್ಲಿ ಹೋರಾಟ ಕೈಗೊಂಡು ಸ್ಥಳೀಯ ಶಾಸಕರು ಹಾಗೂ ಜಿಲ್ಲಾಡಳಿತ ಮತ್ತು ಸರಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ನಂತರ ಮಾತನಾಡಿ ರೈತ ಸಂಘದ ಮುಖಂಡ ಹನುಮಂತಪ್ಪ ಕಬ್ಬಾರ ರಾಣೆಬೆನ್ನೂರ ನಗರದ ಅಭಿವೃದ್ಧಿಗಾಗಿ ಸರಕಾರದಿಂದ ನೂರಾರು ಕೋಟಿ ಅನುದಾನ ಬಂದಿದ್ದರೂ ಅಭಿವೃದ್ಧಿ ಮಾತ್ರ ಶೂನ್ಯವಾಗಿದೆ. ನಗರದಲ್ಲಿ ಅನೇಕ ರಸ್ತೆಗಳು ಹಾಳಾಗಿದ್ದು ತಗ್ಗು ಗುಂಡಿಯಿಂದ ತುಂಬಿಕೊಂಡಿರುವ ರಸ್ತೆಯಲ್ಲಿ ಸಂಚರಿದುವ ಸಾರ್ವಜನಿಕರು ಬಿದ್ದು ಕೈಕಾಲು ಮುರಿದುಕೊಂಡು ಆಸ್ಪತ್ರೆ ಸೇರುತ್ತಿದ್ದಾರೆ.

ಇನ್ನು ಕೆಲವು ಕಡೆ ಪ್ರಾಣವೇ ಹೋಗಿವೆ. ರಾಣೆಬೆನ್ನೂರ ವಿಧಾನಸಭಾ ಕ್ಷೇತ್ರದ ಹಳ್ಳಿ ರಸ್ತೆ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿವೆ. ರಸ್ತೆಗಳ ತಗ್ಗು ಗುಂಡಿಗಳಿಂದ ಲಕ್ಷಾಂತರ ಬೆಲೆಬಾಳುವ ವಾಹನಗಳು ಹಾನಿಯಾಗುತ್ತಿವೆ. ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಜನರ ಪಾಲಿಗೆ ಸರಕಾರ ಇಲ್ಲದಂತಾಗಿದೆ. ಪ್ರತಿ ನಿತ್ಯ ಜನರು ನರಕಯಾತನೆ ಅನುಭವಿಸುತ್ತಿದ್ದಾರೆ. ತಕ್ಷಣವೇ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಬೇಕು. ಮಾಡದೇ ಹೋದರೆ ಉಗ್ರ ಹೋರಾಟ ಆರಂಭಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಬಸವರಾಜ ಮಗಳಗೇರಿ, ಮಂಜುನಾಥ ಸಂಬೋಜಿ, ರಾಜೇಶ ಅಂಗಡಿ, ದೇವರಾಜ ಕಡೆಮನಿ, ಶಂಕರ ಜಿ, ಲಲಿತಾ ಲಮಾಣಿ, ಶೈಲಮ್ಮ ಅರಣಗೇರಿ, ಸಿದ್ದಪ್ಪ ಗುಡಿಹಿಂದ್ಲರ, ಹನುಮಂತಪ್ಪ ಕಟ್ಟಿಮನಿ,ನೀಲಮ್ಮ ಮೇಗಳಗೇರಿ, ನಾಗಮ್ಮ ತಳವಾರ, ಕೊಟ್ರಮ್ಮ ಕಾಯಕದ, ಅಭಿದಾಬಾನು ಶಿಡೇನೂಡ ಸೇರಿದಂತೆ ಅನೇಕರು ಹಾಜರಿದ್ದರು.

ರಸ್ತೆಗಳನ್ನು ಅಭಿವೃದ್ಧಿ ಪಡಿಸುವಂತೆ ಆಗ್ರಹಿಸಿ ರೈತ ಸಂಘಟನೆಯವರು ವಿನೂತನ ಪ್ರತಿಭಟನೆ ನಡೆಸಿದರು.

ಬಂಗಾರಪ್ಪ ಹೆಸರಲ್ಲಿ ಹೈಟೆಕ್ ಆಸ್ಪತ್ರೆ ನಿರ್ಮಿಸಿ

ಸಿದ್ದಾಪುರ: ಅಹಿಂದ ವರ್ಗಗಳ ಪಾಲಿಗೆ ಬಂಗಾರದ ಮನುಷ್ಯರಾಗಿದ್ದ ಬಡವರ ಆಶ್ರಯದಾತ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಜನ್ಮದಿನದ ಪ್ರಯುಕ್ತ ಸಿದ್ದಾಪುರ ಬ್ಲಾಕ್ ಕಾಂಗ್ರೆಸ್ ವತಿಯಿಂದ ಹಣ್ಣುಹಂಪಲು ವಿತರಿಸ ಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ ನೇತ್ರತ್ವದಲ್ಲಿ ಪಟ್ಟಣದ ತಾಲೂಕಾ ಆಸ್ಪತ್ರೆಯ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಲಾಯಿತು. ಈ ವೇಳೆ ವಸಂತ ನಾಯ್ಕ ಮಾತನಾಡಿ, ರಾಜ್ಯ ಕಂಡ ಧೀಮಂತ ನಾಯಕ ಬಂಗಾರಪ್ಪ ಅಂದರೆ ಅದೊಂದು ದೊಡ್ಡ ಶಕ್ತಿ. ಬಡವರ ಪರವಾಗಿ ಅನೇಕ ಜನಪರ ಯೋಜನೆ ಜಾರಿಗೆ ತಂದವರು. ರಾಜ್ಯದ ಜನರ ಮನಸ್ಸಲ್ಲಿ ಶಾಸ್ವತವಾಗಿ ನೆಲೆಯೂರಿದವರು ಬಂಗಾರಪ್ಪ. ಅವರ ಹೆಸರಲ್ಲಿ ಜಿಲ್ಲೆಗೊಂದು ಹೈಟೆಕ್ ಆಸ್ಪತ್ರೆ ನಿರ್ಮಿಸುವಂತೆ ರಾಜ್ಯ ಸರಕಾರಕ್ಕೆ ಒತ್ತಾಯಿಸಲಾಗುವುದು ಎಂದರು. ಬಂಗಾರಪ್ಪ ಅವರ ಅಪ್ಪಟ ಅಭಿಮಾನಿ ನಾಸಿರ್ ಖಾನ್ ಮಾತನಾಡಿ, ಬಂಗಾ ರಪ್ಪ ಅವರಷ್ಟು ಗತ್ತು- ಗಾಂಭೀರ್ಯದ ರಾಜಕಾರಣಿಯನ್ನು ನನ್ನ ಜೀವಮಾನದಲ್ಲೇ ನೋಡಿಲ್ಲ. ಬಡವರ ಬಗ್ಗೆ ಅವರಿಗಿರುವ ತುಡಿತ ಮತ್ತ್ಯಾರಲ್ಲೂ ಕಾಣಲು ಸಾಧ್ಯವಿಲ್ಲ. ಅಹಿಂದ ವರ್ಗದ ಪಾಲಿಗೆ ನಿಜವಾದ ಬಂಗಾರದ ಮನುಷ್ಯರಾಗಿದ್ದರೂ ಬಂಗಾರಪ್ಪ. ಇವತ್ತು ಏನಾದರೂ ರೈತರು ಕೃಷಿ, ತೋಟಗಾರಿಕೆ ಮಾಡುತ್ತಿದ್ದಾರೆಂದರೆ ಅದಕ್ಕೆ ಬಂಗಾರಪ್ಪ ಕಾರಣ. ಅಂತಹ ಧೀಮಂತ ನಾಯಕನನ್ನು ಪ್ರತಿಯೊಬ್ಬರು ಸ್ಮರಿಸಬೇಕು ಎಂದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಮಾರುತಿ ಕಿಂದ್ರಿ, ಪ್ರಮುಖರಾದ ಮುನಾವರ್‌ಗುರ್ಕಾರ್, ಕೆ.ಟಿ.ಹೊನ್ನೆಗುಂಡಿ, ಸುರೇಂದ್ರ ದಫೇದಾರ್, ಪ್ರಶಾಂತ ನಾಯ್ಕ, ಲೀಲಾವತಿ ನಾಯ್ಕ, ಎ.ಬಿ.ನಾಯ್ಕ ಕಡಕೇರಿ, ಗಂಗಾಧರ ನಾಯ್ಕ ಗೋಳಗೋಡ, ನೀಲಕಂಠ ನಾಯ್ಕ ಬೇಡ್ಕಣಿ, ಪೂರ್ಣಚಂದ್ರ ತ್ಯಾರ್ಸಿ,ಮಂಜುನಾಥ ಕುಂಬ್ಳೆ, ಪುನೀತ್ ಹೊಸೂರ, ನಿತಿನ್ ಹೊಸೂರ ಮತ್ತಿತರರು ಹಾಜರಿದ್ದರು.

ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಆಕಾಂಕ್ಷಿ

ಪತ್ರಿಕಾ ಭವನದಲ್ಲಿ ಪದವೀಧರರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ರಾಘವೇಂದ್ರ ಬಾಸೂರ ಮಾತನಾಡಿದರು.

ಹಾವೇರಿ: ಪದವೀಧರರ ಸಮಸ್ಯೆಗಳನ್ನು ಅರಿತಿದ್ದೇನೆ. ಪ್ರತಿವರ್ಷ ಲಕ್ಷಾಂತರ ವಿದ್ಯಾರ್ಥಿಗಳು ಪದವಿ ಪಡೆದು ಹೊರಬರುತ್ತಾರೆ. ಅವರೆಲ್ಲ ಶ್ರಯೋಭಿವೃದ್ಧಿಯೇ ನನ್ನಾಶಯವಾಗಿದ್ದು ಈ ಬಾರಿಯ ಪಶ್ಚಿಮ ಪದವೀಧರರ ಚುನಾವಣೆಗೆ ನಾನು ಕೂಡಾ ಕಾಂಗ್ರೆಸ್ ಪಕ್ಷದ ಪ್ರಬಲ ಆಕಾಂಕ್ಷಿ ಎಂದು ಕರ್ನಾಟಕ ಪದವೀಧರರ ಹಿತರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ರಾಘವೇಂದ್ರ ಬಾಸೂರ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಶ್ಚಿಮ ಪದವೀಧರ ಕ್ಷೇತ್ರ ಚುನಾವಣೆ ಹಿನ್ನೆಲೆ ಮತದಾರರ ನೋಂದಣಿ ಪ್ರಕ್ರಿಯೆ ಶುರುವಾಗಿದ್ದು, ಜಿಲ್ಲೆಯಲ್ಲಿರುವ ಅರ್ಹ ಪದವೀಧರು ಹಾಗೂ ಡಿಪ್ಲೋಮಾ ಪದವೀಧರರು ಸಂಬಂಧಿಸಿದ ತಾಲೂಕಾ ತಹಸೀಲ್ದಾರ, ಬಿಇಒ ಕಚೇರಿಗಳಿಗೆ ತೆರಳಿ ಮತದಾರರ ನೋಂದಣಿ ಮಾಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಪದವೀಧರರ ಚುನಾವಣೆಗೆ ಮತದಾರರಾಗಲು ಪದವಿ ಹಾಗೂ ಡಿಪ್ಲೋಮಾ ಪದವಿಯನ್ನು ಪೂರೈಸಿರಬೇಕು. 2025 ಸೆಪ್ಟಂಬರ್1ರೊಳಗೆ ಮೂರು ವರ್ಷ ಪೂರ್ಣಗೊಂಡಿರುವ ಪದವೀಧರರು ಮಾತ್ರ ಅರ್ಹರಾಗಿರುತ್ತಾರೆ. ಅಂತಹ ಪದವಿಧರರು ನ.6ರ ಒಳಗಾಗಿ ಸಂಬಂಸಿದ ತಹಸೀಲ್ದಾರ ಹಾಗೂ ಬಿಇಒ ಕಚೇರಿಗಳಲ್ಲಿ ಅರ್ಜಿಗಳನ್ನು ತೆಗೆದುಕೊಂಡು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಜಿಲ್ಲೆಯಲ್ಲಿ ಪ್ರತಿ ವರ್ಷ ಹತ್ತು ಸಾವಿರ ಪದವಿಧರರು ತೇರ್ಗಡೆ ಹೊಂದುತ್ತಿದ್ದು ಮತದಾರರಾಗಿ ನೊಂದಣಿ ಮಾಡಿಸಿಕೊಳ್ಳಬೇಕೆಂದು ತಿಳಿಸಿದರು.

ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಗೆ ನಾನು ಕೂಡ ಕಾಂಗ್ರೆಸ್ ಪಕ್ಷದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಕಾಂಗ್ರೆಸ್ ಪಕ್ಷ ಟಿಕೇಟ್ ನೀಡುವ ವಿಶ್ವಾಸವಿದೆ. ನಮ್ಮ ಜತೆಗೆ ಇನ್ನೂ ನಾಲ್ಕು ಜನ ಕಾಂಗ್ರೆಸ್ನ ಮುಖಂಡರು ಆಕಾಂಕ್ಷಿಗಳಾಗಿದ್ದಾರೆ. ಪಕ್ಷ ಯಾರಿಗೆ ಟಿಕೇಟ್ ಕೊಟ್ಟರೂ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡುತ್ತೇನೆ. ಈಗಾಗಲೇ ಹಾವೇರಿ, ಗದಗ, ಧಾರವಾಡ, ಉತ್ತರಕನ್ನಡ ಜಿಲ್ಲೆಗಳಲ್ಲಿ ಪಕ್ಷ ಸಂಘಟನೆ ಮಾಡಿದ್ದು ನಾಲ್ಕು ಜಿಲ್ಲೆಯಲ್ಲಿ ಪದವೀಧರರ ನೊಂದಣಿ ಮಾಡಿಸುತ್ತಿದ್ದೇವೆ. ಹಾವೇರಿ ಜಿಲ್ಲೆಯಲ್ಲಿ ಉದ್ಯೋಗ ಮೇಳ ಆಯೋಜಿಸಿ 400ರಿಂದ 500 ಜನ ಪದವೀಧರರಿಗೆ ಉದ್ಯೋಗ ಕಲ್ಪಿಸಿಕೊಟ್ಟಿದ್ದೇವೆ ಎಂದರು.

ಕಾಂಗ್ರೆಸ್ ಸರಕಾರದ ಪ್ರಣಾಳಿಕೆಯಂತೆ ಎನ್ಪಿಎಸ್ ಟು ಒಪಿಎಸ್ ಜಾರಿ ಮಾಡುವುದು ಮುಖ್ಯ ಉದ್ದೇಶವಾಗಿದೆ. ಸರಕಾರಿ ನೌಕರರಿಗೆ, ಶಿಕ್ಷಕರಿಗೆ, ವಕೀಲರಿಗೆ, ಡಾಕ್ಟರ್ಗಳಿಗೆ, ಖಾಸಗಿ ನೌಕರರಿಗೆ ಹಾಗೂ ಪದವೀಧರ ರಕ್ಷಣೆ ಮತ್ತು ಸಮಸ್ಯೆಗಳ ಬಗೆಹರಿಸುವುದು ಆದ್ಯತೆಯಾಗಿದೆ. ಸರಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿಯನ್ನು ಕಾಂಗ್ರೆಸ್ ಸರಕಾರ ನೀಡಿದ್ದು, ಅನುದಾನಿತ ಶಿಕ್ಷಕರಿಗೂ ಜ್ಯೋತಿ ಸಂಜೀವಿನಿ ಕೊಡಿಸುವುದು ನಮ್ಮ ಉದ್ದೇಶವಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಗದಿಗೆಪ್ಪ ನೆಲೋಗಲ್ಲ, ಸಂತೋಶ ಹರ್ತಿಕೋಟೆ, ಜಮೀರ ಜಿಗರಿ ಇದ್ದರು.

ನಿತ್ಯ ಭಗವದ್ಗೀತೆ ಶ್ಲೋಕ: ಶ್ಲಾಘನೀಯ

ತಾಲೂಕಾ ಶ್ರೀ ಭಗವದ್ಗೀತಾ ಅಭಿಯಾನ ಉದ್ಘಾಟನೆಗೊಂಡಿತು.

ಕುಮಟಾ: ಮಿರ್ಜಾನದ ಬಿಜಿಎಸ್ ಸೆಂಟ್ರಲ್ ಸ್ಕೂಲ್ನಲ್ಲಿ ತಾಲೂಕಾ ಶ್ರೀ ಭಗವದ್ಗೀತಾ ಅಭಿಯಾನವನ್ನು ಅಭಿಯಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಮುರಳೀಧರ ಪ್ರಭು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಬಿಜಿಎಸ್ ಸೆಂಟ್ರಲ್ ಸ್ಕೂಲ್ ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ನೀಡುತ್ತಿದ್ದು, ಪ್ರತಿನಿತ್ಯ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಶ್ಲೋಕ ಹೇಳಿಕೊಡುತ್ತಿರುವುದು ಶ್ಲಾಘನೀಯ.

ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಏಕಾಗ್ರತೆ ಉಂಟಾಗಲು, ಜೀವನ ಹೇಗೆ ನಿರ್ವಹಣೆ ಮಾಡಬೇಕು, ನಮ್ಮ ಕರ್ತವ್ಯಗಳೇನು ಎಂಬುದನ್ನು ಅರಿಯಲು ಇಂದಿನ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಪಠಣ ಅತ್ಯವಶ್ಯಕ ಎಂದು ಮುರಲೀಧರ ಪ್ರಭು ನುಡಿದರು. ಪ್ರಾಸ್ತಾವಿಕವಾಗಿ ಬಿಜಿಎಸ್ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಎಮ್. ಟಿ. ಗೌಡ ಮಾತನಾಡಿದ್ದರು.

ಮುಖ್ಯ ಅತಿಥಿಗಳಾಗಿ ಕುಮಟಾ ತಾಲೂಕಾ ಶ್ರೀ ಭಗವದ್ಗೀತಾ ಅಭಿಯಾನ ಸಮಿತಿಯ ಅಧ್ಯಕ್ಷ ರಮೇಶ ಉಪಾಧ್ಯಾಯ ಉಪಸ್ಥಿತರಿದ್ದರು. ಸಂಸ್ಕೃತ ಉಪನ್ಯಾಸಕ ಗಣೇಶ ಭಟ್ ಭಗವದ್ಗೀತೆಯ ಮಹತ್ವದ ಬಗ್ಗೆ ತಿಳಿಸಿ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಶ್ಲೋಕ ಹೇಳಿಕೊಟ್ಟರು. ಕುಮಟಾ ತಾಲೂಕಾ ಶ್ರೀ ಭಗವದ್ಗೀತಾ ಅಭಿಯಾನ ಸಮಿತಿಯ ಉಪಾಧ್ಯಕ್ಷೆ ಶ್ರೀಮತಿ ಸುಧಾ ಶಾನಭಾಗ್, ಬಿಜಿಎಸ್ ಸೆಂಟ್ರಲ್ ಸ್ಕೂಲಿನ ಪ್ರಾಂಶುಪಾಲೆ ಶ್ರೀಮತಿ ಅರ್ಚನಾ ಭಟ್, ಉಪ ಪ್ರಾಂಶುಪಾಲೆ ಶ್ರೀಮತಿ ಅನುರಾಧ ಗುನಗ, ಹಿರಿಯ ಶಿಕ್ಷಕ ಎಮ್. ಜಿ. ಹಿರೇಕುಡಿ, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮ ದಲ್ಲಿ ಉಪಸ್ಥಿತರಿದ್ದರು. ಶಾಲಾವಿದ್ಯಾರ್ಥಿ ಪ್ರತಿನಿಧಿ ಕೃಷ್ಣ ಪ್ರಸಾದನ ಶಂಖನಾದದೊಂದಿಗೆ ಸರ್ವರಿಗೂ ಗೀತೋಪದೇಶ ಮಾಡಲಾಯಿತು.ಸಮಸ್ತ ವಿದ್ಯಾರ್ಥಿಗಳು ಭಗವದ್ಗೀತೆಯ 12ನೇ ಅಧ್ಯಾಯದ ಎಲ್ಲಾ ಶ್ಲೋಕಗಳನ್ನು ಪಠಿಸಿದರು. ನಕ್ಷನ ಬಾಲ ಕೃಷ್ಣ ವೇಷ ಮತ್ತು ಅನೀಶ್ ಭಟ್ಟನ ಕೊಳಲು ವಾದನ ಜನಮನಸೂರೆಗೊಂಡಿತು.

ಚಿರಾಗ್ ಮತ್ತು ಸಂಗಡಿಗರು ವೇದಘೋಷ ಮೊಳಗಿಸಿದರು. ಕೃತಿಕಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ನಕುಲ್ ಪೈ ಸರ್ವರನ್ನು ಸ್ವಾಗತಿಸಿದನು. ಪ್ರಥ್ವಿ ಪ್ರಭು ಶ್ರೀ ಭಗವದ್ಗೀತೆಯ ಮಹತ್ವದ ಬಗ್ಗೆ ಮಾತನಾಡಿದಳು. ಮಾನ್ಯತಾ ಕಾರ್ಯಕ್ರಮ ನಿರೂಪಿಸಿ, ಕಾರ್ಯಕ್ರಮದ ಕೊನೆಯಲ್ಲಿ ಶಾಂತಿ ಮಂತ್ರ ಬೋಧಿಸಿದಳು. ವಿರಾಜ್ ಸರ್ವರನ್ನು ವಂದಿಸಿದನು. ಸಂಪೂರ್ಣ ಕಾರ್ಯಕ್ರಮವನ್ನು ವಿದ್ಯಾರ್ಥಿಗಳೇ ಸಂಸ್ಕೃತ ಶಿಕ್ಷಕಿ ಶ್ರೀಮತಿ ಸುಮಂಗಲಾ ವೈದ್ಯ ರವರ ಮಾರ್ಗದರ್ಶನದಲ್ಲಿ ಸಂಸ್ಕೃತ ಭಾಷೆಯಲ್ಲೇ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಜಾಪ್ರಿ ದೇವರ ಜಾತ್ರೆ ನ.3ರಂದು

ಜೊಯಿಡಾ: ತಾಲೂಕು ಕೇಂದ್ರ ಗಾವಡೇವಾಡಾದಲ್ಲಿ ಬುಡಕಟ್ಟು ಕುಣಬಿ ಜನಾಂಗದ ಜಾನಪದ ಸೊಗಡಿನ ಖಾಪ್ರಿ ದೇವರ ವಾರ್ಷಿಕ ಜಾತ್ರೆ ನವೆಂಬರ್3 ಸೋಮವಾರದಂದು ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ. ಕಾರ್ತಿಕ ಮಾಸದ ಏಕಾದಶಿ ಅಂದರೆ ರವಿವಾರದಂದು ರಾತ್ರಿ ಕುಣಬಿ ಬುಡಕಟ್ಟು ಸಾಂಪ್ರದಾಯದಂತೆ ಗ್ರಾಮದ ಬುಧವಂತನ ಮನೆ ಅಂಗಳದಲ್ಲಿ ಇರುವ ತುಳಸಿ ದೇವಿಯ ವಿವಾಹ ರಾತ್ರಿ ನೆರವೇರಿಸಿ ನಂತರ ಪೂರ್ತಿ ಜಾಗರಣೆ ಮಾಡಲಾಗುತ್ತದೆ.

ಸೋಮವಾರದಂದು ಬೆಳಿಗ್ಗೆ ಇಂದಲೇ ಬುಡಕಟ್ಟು ಕುಣಬಿ ಸಾಂಪ್ರದಾಯದಂತೆ ತುಳಸಿ ಕಟ್ಟೆಯ ಸುತ್ತ ದೇವರ ಹಾಡುಗಳನ್ನು ಹೇಳುತ್ತಾ ಕುಣಿತ ಪ್ರಾರಂಭವಾಗುತ್ತದೆ. ಬೆಳಿಗ್ಗೆ 10 ಗಂ ಸುಮಾರು ಕಬಳಿ ವೇಷಧಾರಿ ಖಾಪ್ರಿದೇವರು ಮುಖ್ಯ ವೇದಿಕೆಯಲ್ಲಿ ಅಂದರೆ ತುಳಸಿ ಅಂಗಳದಲ್ಲಿ ಬರಲು ಸಿದ್ದತೆ ಮಾಡಿದ ನಂತರ ಖಾಪ್ರಿ ದೇವರ ಆವ್ಹಾನದ ಹಾಡುಗಳು ಹಾಡಲಾಗುತ್ತದೆ.

ಖಾಪ್ರಿದೇವರು ಅಂದರೆ ಹಿರಿಯರ ಎರಡು ಆತ್ಮಗಳಾಗಿದೆ. ಒಂದು ವಾರದಿಂದ ದೇವರ ಹೆಸರಿನಲ್ಲಿ ಉಪವಾಸ ಇದ್ದ ಇಬ್ಬರ ಮೈ ಮೇಲೆ ಆತ್ಮ ಬರುವ ನಂಬಿಕೆ ಇದೆ. ಈ ಕುಟುಂಬ ಇಬ್ಬರಿಗೆ ಕಂಬಳಿಯನ್ನು ಪೂರ್ತಿಯಾಗಿ ದೇಹಕ್ಕೆ ಸುತ್ತಿ, ಗೊಂಡೆ ಹೂವಿನಿಂದ ಅಲಂಕಾರ ಮಾಡಿದ ಒಂದು ವೇಷಧಾರಿ ದೇವರ ಮನೆಯ ಹೊರಗಡೆಯಿಂದ ಬಂದರೆ ಇನ್ನೊಂದು ಖಾಪ್ರಿ ವೇಷಧಾರಿ ದೇವರ ಮನೆಯಿಂದ ಅಂಗಳಕ್ಕೆ ಬಂದು ತುಳಸಿ ಕಟ್ಟೆಯ ಸುತ್ತ ಹಾಡಿನ ತಾಳಕ್ಕೆ ಹೆಜ್ಜೆ ಹಾಕಿ ಕೈಯಲ್ಲಿ ಒನಕೆ ಹಿಡಿದು ಕುಣಿದು ಸಾವಿರಾರು ಸಂಖ್ಯೆಯಲ್ಲಿ ಸೇರಿದ ಭಕ್ತರಿಗೆ ಆಶೀರ್ವಾದ ನೀಡಿ ದೇವರ ಮನೆ ಸೇರುವ ಸಾಂಪ್ರದಾಯ ಇದೆ. ಜಾನಪದ ಸೊಗಡಿನ ಹಾಡುಗಳಲ್ಲಿ ಜನ್ಮಿ ದೇವರು, ಆತ್ಮಗಳಾದ ಖಾಪ್ರಿದೇವರ ಹೊಗಳುವಿಕೆ, ತೆಗೆಯುವಿಕೆ, ಬೈಗಳು ಇರುವುದು ಜಾನಪದದ ವಿಶಿಷ್ಟವಾಗಿದೆ.

ಖಾಪ್ರಿದೇವರಲ್ಲಿ ನಂಬಿಕೆ:

ಜಾತ್ರೆಯ ಮೊದಲ ರಾತ್ರಿ ಯಾರು ಕೂಡ ಗ್ರಾಮದ ಸೀಮೆ ಬಿಟ್ಟು ಹೊರಗೆ ಹೋಗುವಂತಿಲ್ಲ, ರಾತ್ರಿ ಭತ್ತದ ಬೆಳೆ ಕಾಯಲು ಯಾರು ಹೋಗುವುದಿಲ್ಲ, ಕಾಡು ಪ್ರಾಣಿಗಳಿಂದ ಬೆಳೆ ಹಾನಿಯಾದ ಉದಾಹರಣೆಯೇ ಇಲ್ಲವೆಂದು ಹೇಳಲಾಗಿದೆ. ಗಾವಡೇವಾಡಾದ ಬುಡಕಟ್ಟುಗಳು ಮಾಳೆಯ ಮೇಲೆ ಬಿಡಿ ಚುಟ್ಟ ಕಟ್ಟಿ ಬೆಂಕಿ ಇಟ್ಟು ಬರುವ ಸಾಂಪ್ರದಾಯ ಇಂದಿಗೂ ಪ್ರಸ್ತುತವಾಗಿದೆ. ಸೀಮೆಯ ಸುತ್ತಲೂ ಖಾಪ್ರಿದೇವರು ಸುತ್ತುತ್ತಾ ಇರುತಿದ್ದ ಬಗ್ಗೆ ಬಲವಾದ ನಂಬಿಕೆ ಇದೆ. ಅನೇಕರು ತಮ್ಮ ಅನುಭವ ಹಂಚಿಕೊಳ್ಳುತ್ತಾರೆ.

ರಾತ್ರಿ ಜಾಗರಣೆ ಮಾಡಲಾಗುತ್ತದೆ. ತುಳಸಿ ಕಟ್ಟೆಯ ಸುತ್ತ ದೇವರ ಹಾಡುಗಳನ್ನು ಹಾಡಿ ಕುಣಿಯಲಾಗುತ್ತದೆ. ಘಟಾಂಗ ಎಂದು ಕರೆಯಲಾಗುತ್ತದೆ. 'ಭೀಮಾಸೂರ' ಪೌರಾಣಿಕ ಖೇಳ ಪ್ರದರ್ಶನ ನಡೆಯಲಿದೆ.

13 ಸಾವಿರ ಕುಟುಂಬಗಳಿಗೆ ವಸತಿ ಹಕ್ಕುಪತ್ರ ವಿತರಣೆ

ಹಾನಗಲ್: ಮನೆ ಮಾಲಿಕತ್ವ ಇಲ್ಲದೇ ಕಳೆದ 30-40 ವರ್ಷಗಳಿಂದ ಅನಿಶ್ಚಿತೆಯ ಬದುಕು ಸಾಗಿಸುತ್ತಿದ್ದ ತಾಲೂಕಿನ 13 ಸಾವಿರಕ್ಕೂ ಹೆಚ್ಚು ಕುಟುಂಬಗಳಲ್ಲೀಗ ಸಂತಸ, ಸಡಗರ ಮನೆ ಮಾಡಿದೆ.

ಕಳೆದ ಹಲವು ತಿಂಗಳುಗಳಿಂದ ತಾಲೂಕಾಡಳಿತ ನಿರಂತರ ಶ್ರಮ ವಹಿಸಿ ದಾಖಲೆ ರಹಿತ ಕುಟುಂಬಗಳಿಗೆ ಹಕ್ಕುಪತ್ರದೊಂದಿಗೆ ಶಾಶ್ವತವಾಗಿ ಮನೆ ಮಾಲಿಕತ್ವ ನೀಡಲು ಮುಂದಾಗಿದೆ.

ಹೌದು..! ಅನಧಿಕೃತವಾಗಿ ಖಾಸಗಿ ಮತ್ತು ಸರಕಾರಿ ಸರ್ವೆ ನಂಬರ್‌ಜಮೀನುಗಳಲ್ಲಿ ದಾಖಲೆ ರಹಿತವಾಗಿ ಹಲವು ದಶಕಗಳಿಂದ ವಾಸಿಸುತ್ತಿರುವ ಜನವಸತಿ ಪ್ರದೇಶಗಳನ್ನು ಕಂದಾಯ ಮತ್ತು ಉಪ ಗ್ರಾಮಗಳನ್ನಾಗಿ ಪರಿವರ್ತಿಸಿ ಅಲ್ಲಿರುವ ಕುಟುಂಬಗಳಿಗೆ ಮನೆಯ ದಾಖಲೆಗಳನ್ನು ನೀಡಿ, ಅಧಿಕೃತಗೊಳಿಸುವ ಕಾರ್ಯವನ್ನು ತಾಲೂಕಾಡಳಿತ ಶಾಸಕ ಶ್ರೀನಿವಾಸ ಮಾನೆ ಮಾರ್ಗದರ್ಶನ, ತಹಶೀಲ್ದಾರ್‌ರೇಣುಕಾ ಎಸ್. ನೇತೃತ್ವದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮಾಡುತ್ತಿದ್ದು, ಬಹಳ ವರ್ಷಗಳ ಸಮಸ್ಯೆಗೀಗ ಪರಿಹಾರ ಸಿಕ್ಕಿದೆ.

ಮನೆ ನಿರ್ಮಿಸಿಕೊಂಡು ದಾಖಲೆಗಳಿಲ್ಲದೇ, ಸೌಲಭ್ಯಗಳಿಂದ ವಂಚಿತವಾಗಿ ಜೀವನ ಸಾಗಿಸುತ್ತಿರುವ ತಾಂಡಾ, ಹಟ್ಟಿ, ಕಾಲೋನಿ, ಕ್ಯಾಂಪ್ ಸೇರಿದಂತೆ ಇತರೆ ಜನವಸತಿ ಪ್ರದೇಶಗಳನ್ನು ದಾಖಲೆ ಸಹಿತ ಗಾಂವಠಾಣ ವ್ಯಾಪ್ತಿಗೆ ತಂದು ಹಕ್ಕುಪತ್ರ ವಿತರಣೆಗೆ ತಾಲೂಕಾಡಳಿತ ಮುಂದಾಗಿದೆ. ತಾಲೂಕಿನಲ್ಲಿ ಹತ್ತಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಇಂಥ ಹಲವು ಸಮಸ್ಯೆಗಳನ್ನು ಹುಡುಕಿ ಶಾಶ್ವತ ಪರಿಹಾರ ದೊರಕಿಸುವಲ್ಲಿ ಶಾಸಕ ಶ್ರೀನಿವಾಸ ಮಾನೆ ಗಮನ ನೀಡಿದ್ದು, ಹಕ್ಕುಪತ್ರ ವಿತರಿಸುವ ಕಾರ್ಯವನ್ನು ಆದ್ಯತೆಯಾಗಿ ಪರಿಗಣಿಸಿ, ಸಾವಿರಾರು ಕುಟುಂಬಗಳಲ್ಲಿ ಭರವಸೆಯ ಬೆಳಕು ಮೂಡಿಸಿದ್ದಾರೆ.

2016 ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1974 ಸೆಕ್ಷನ್ 38 ಎ ಗೆ ಬದಲಾವಣೆ ತಂದು ಖಾಸಗಿ ಸರ್ವೆ ನಂಬರ್‌ನಲ್ಲಿ ಬೇರೆಯವರ ಮಾಲಿಕತ್ವದ ಜಮೀನಿನಲ್ಲಿ ವಾಸಿಸುತ್ತಿರುವ 10 ಕ್ಕಿಂತ ಹೆಚ್ಚು ಕುಟುಂಬಗಳಿರುವ ಜನವಸತಿಯನ್ನು ಅಧಿಕೃತಗೊಳಿಸಿ ಹಕ್ಕುಪತ್ರ ನೀಡಲು ಬದಲಾವಣೆ ತರಲಾಗಿದೆ.

ತಾಲೂಕಿನಲ್ಲಿ 153 ಕಂದಾಯ ಮತ್ತು ಉಪ ಗ್ರಾಮಗಳನ್ನು ರಚಿಸಿ ಹಕ್ಕುಪತ್ರ ವಿತರಿಸುವ ಕಾರ್ಯ ಚಾಲನೆ ಪಡೆದಿದೆ. ಮೊದಲ ಹಂತದಲ್ಲೀಗ ಕೆಲವರಕೊಪ್ಪ, ಉಪ್ಪುಣಸಿ, ಹಳ್ಳಿಬೈಲ್, ಕಲಕೇರಿ, ಬಿಂಗಾಪುರ, ಲಕ್ಷ್ಮಿಪುರ, ಹುಲಗಿನಹಳ್ಳಿ, ಆಲದಕಟ್ಟಿ, ತಿಳವಳ್ಳಿ, ಕೊಂಡೋಜಿ, ಅಕ್ಕಿವಳ್ಳಿ, ಹರಳಕೊಪ್ಪ, ವಿಜಯನಗರ ಹೀಗೆ ಹಲವು ಗ್ರಾಮಗಳ ಒಂದು ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗುತ್ತಿದೆ. 8500 ಅರ್ಜಿ ಸ್ವೀಕರಿಸಿ ಡೇಟಾ ಎಂಟ್ರಿ ಮಾಡಲಾಗಿದ್ದು, 4 ಸಾವಿರಕ್ಕೂ ಹೆಚ್ಚು ಹಕ್ಕುಪತ್ರಗಳನ್ನು ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಹಲವು ದಶಕಗಳಿಂದ ಮಾಡಲಾಗದ ಕೆಲಸವನ್ನು ತಾಲೂಕಾಡಳಿತ ಕಂದಾಯ ಇಲಾಖೆಯ ಮೂಲಕ ಮಾಡುವ ಮೂಲಕ ಇತಿಹಾಸ ಬರೆಯುತ್ತಿದೆ. ತಾನು ವಾಸವಿರುವ ಜಾಗವನ್ನು ತನ್ನದಾಗಿಸಿಕೊಳ್ಳುವ ಆಸೆ ಪ್ರತಿಯೊಬ್ಬ ವ್ಯಕ್ತಿಗೂ ಸಹ ಇರುತ್ತದೆ. ದಾಖಲೆ ಇಲ್ಲದೇ ಮನೆ ಕಟ್ಟಿಕೊಂಡು ಪರದಾಡುತ್ತಿದ್ದ ಬಡ ವರ್ಗಕ್ಕೆ ಸೇರಿದ ಸಾವಿರಾರು ಕುಟುಂಬಗಳೀಗ ನೆಮ್ಮದಿಯ ನಿಟ್ಟುಸಿರು ಬಿಟ್ಟಿವೆ.

ಗ್ರಾಮವೊಂದರಲ್ಲಿ ಕಂದಾಯ ಇಲಾಖೆಯ ಸಿಬ್ಬಂದಿ ಹಕ್ಕುಪತ್ರ ರಹಿತ ಕುಟುಂಬವೊಂದರ ವಿಚಾರಣೆ ನಡೆಸುತ್ತಿರುವುದು.

> **ಹತ್ತಾರು ವರ್ಷಗಳ ಸಮಸ್ಯೆಗೆ ಪರಿಹಾರ ಸಿಗುತ್ತಿದ್ದು, ಅನಿಶ್ಚಿತತೆಯಲ್ಲಿದ್ದ ಸಾವಿರಾರು ಕುಟುಂಬಗಳಲ್ಲಿ ಸಂತಸ ಮೂಡಿದೆ. ಹಕ್ಕುಪತ್ರ ಎಂದರೆ ಬರೀ ಕಾಗದ ನೀಡಿ ಕೈ ತೊಳೆದುಕೊಳ್ಳದೇ, ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಿ, ಇ-ಸ್ವತ್ತು ನೀಡುವ ಮೂಲಕ ಮನೆ ಮಾಲಿಕತ್ವ ದೊರಕಿಸಲಾಗುತ್ತಿರುವುದು ವಿಶೇಷ.**
> -ರೇಣುಕಾ, ಎಸ್, ತಹಸೀಲ್ದಾರ್

> **ತಾಲೂಕಿನಲ್ಲಿ ದಾಖಲೆ ಇಲ್ಲದೇ ಸರಕಾರಿ ಮತ್ತು ಖಾಸಗಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಕುಟುಂಬಗಳಿಗೆ ಮನೆ ಮಾಲಿಕತ್ವದ ಗ್ಯಾರಂಟಿ ಭರವಸೆ ನೀಡಲಾಗಿತ್ತು. ಹಕ್ಕುಪತ್ರ ನೀಡಲು ಒಟ್ಟು 13,622 ಕುಟುಂಬಗಳನ್ನು ಗುರುತಿಸಲಾಗಿದ್ದು, ಮೊದಲ ಹಂತದಲ್ಲಿ ಒಂದು ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗುತ್ತಿದೆ. ಉಳಿದವರಿಗೆಲ್ಲ ಕೆಲವೆ ತಿಂಗಳಿನಲ್ಲಿ ಆಸ್ತಿ ನೋಂದಣಿ, ಇ-ಸ್ವತ್ತಿನೊಂದಿಗೆ ಹಕ್ಕುಪತ್ರ ನೀಡಲಾಗುವುದು.**
> -ಶ್ರೀನಿವಾಸ ಮಾನೆ, ಶಾಸಕ

ಸಮಾಚಾರ ಸಣ್ಣದಲ್ಲ

ಕಲಾ ಪ್ರತಿಭೆಗಳಿಂದ ಅರ್ಜಿ ಆಹ್ವಾನ

ಹೊಸಪೇಟೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಕ್ಕಳು ಮತ್ತು ಯುವಜನರಲ್ಲಿರುವ ಕಲಾ ಪ್ರತಿಭೆ ಗುರುತಿಸಿ, ಅವರಿಗೆ ಉತ್ತೇಜನ ನೀಡುವ ಮತ್ತು ತಮ್ಮ ಕಲಾ ನೈಪುಣ್ಯವನ್ನು ವೃದ್ಧಿಗೊಳಿಸುವಂತೆ ಪ್ರೋತ್ಸಾಹಿಸಲು ಜಿಲ್ಲಾ ಮಟ್ಟದ ಕಲಾಪ್ರತಿಭೋತ್ಸವ ಏರ್ಪಡಿಸುವ ಸಲುವಾಗಿ ವಿವಿಧ ಪ್ರಕಾರಗಳ ಕಲಾ ಪ್ರತಿಭೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಬಾಲ ಪ್ರತಿಭೆ 08 ರಿಂದ 14 ವರ್ಷದೊಳಗಿನ ಹಾಗೂ ಕಿಶೋರ ಪ್ರತಿಭೆ 14 ರಿಂದ 18 ವರ್ಷದ ಒಳಗಿನವರಾಗಿರಬೇಕು.

ಶಾಲಾ ಮುಖ್ಯಸ್ಥರು ತಮ್ಮ ಶಾಲಾ ಮೂಲಕ ಸ್ಪರ್ಧಿಸುವ ಸ್ಪರ್ಧಿಗಳು ಅರ್ಜಿ ಸಲ್ಲಿಸುವಾಗ ತಾವು ಭಾಗವಹಿಸುವ ಕಲಾ ಪ್ರಕಾರ ಹಾಗೂ ವಿಭಾಗವನ್ನು ನಮೂದಿಸಿ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬೇಕು. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಅರ್ಜಿಯನ್ನು ನ.10 ರೊಳಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಠಡಿ ಸಂ 2, ಮೊದಲನೇ ಮಹಡಿ, ತಹಶಿಲ್ದಾರ ಕಛೇರಿ ಕಟ್ಟಡ ಹೊಸಪೇಟೆ ಈ ವಿಳಾಸಕ್ಕೆ ನೇರವಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು. ವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ನಿಯಮಗಳು ಮತ್ತು ನಿಬಂಧನೆಗಳಗಾಗಿ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್‌ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣೆ: ಅರ್ಜಿ

ಬಳ್ಳಾರಿ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ಹೊಸದಾಗಿ ಸಿದ್ಧಪಡಿಸಬೇಕಾಗಿರುವುದರಿಂದ ಅರ್ಹರಿಂದ ನೋಂದಾಯಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ತಿಳಿಸಿದ್ದಾರೆ. ಅರ್ಹತಾ ದಿನಾಂಕ 2025ಕ್ಕೆ ನ.1ಕ್ಕೆ ಅನ್ವಯಿಸುವಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯು ನೂತನವಾಗಿ ಸಿದ್ಧಪಡಿಸುವ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಈ ಹಿಂದಿನ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಮತದಾರರು ಸಹ ನಮೂನೆ 19 ರಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಇಂದು ಮಿಂಚಿನ ನೋಂದಣಿ ಅಭಿಯಾನ

ರಾಯಚೂರು: ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ-2026 ರ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಕುರಿತ ವಿಶೇಷ ಮಿಂಚಿನ ನೋಂದಣಿ ಅಭಿಯಾನವು ಅಕ್ಟೋಬರ್27 ರಂದು ರಾಯಚೂರು ಜಿಲ್ಲೆಯ ವಿವಿಧೆಡೆ ನಡೆಯಲಿದೆ.

ರಾಯಚೂರಿನ ಕೃಷಿ ವಿಶ್ವವಿದ್ಯಾಲಯ, ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಿಮ್ಸ್, ಡೆಂಟಲ್ ಕಾಲೇಜು, ಪ್ಯಾರಾ ಮೆಡಿಕಲ್ ಕಾಲೇಜು, ಪಾಲಿಟೆಕ್ನಿಕ್, ನವೋದಯ ಎಂಜಿನಿಯರಿಂಗ್ ಕಾಲೇಜು, ನವೋದಯ ವೈದ್ಯಕೀಯ ಕಾಲೇಜು, ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲೆ ಎಲ್ಲ ತಹಸೀಲ್ದಾರ ಕಚೇರಿಗಳಲ್ಲಿ, ತಾಲೂಕು ಪಂಚಾಯತ್ ಕಚೇರಿಗಳಲ್ಲಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳಲ್ಲಿ ಅಕ್ಟೋಬರ್27 ರಂದು ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಗೆ ಹೆಸರು ನೋಂದಣಿಗಾಗಿ ವಿಶೇಷ ಮಿಂಚಿನ ನೋಂದಣಿ ಅಭಿಯಾನ ನಡೆಯಲಿದೆ ಎಂದು ಜಿ.ಪಂ.ಸಿಇಓ ಹಾಗೂ ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷ ಈಶ್ವರ್ ಕಾಂದೂ ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಇಂದು ಸಂಗೀತ ಸಂಜೆ ಕಾರ್ಯಕ್ರಮ

ರಾಯಚೂರು: ಗೆಳೆಯರ ಸಾಂಸ್ಕೃತಿಕ ವೇದಿಕೆ ವತಿಯಿಂದ ಅ.27 ರಂದು ಸಂಜೆ 5;30 ಕ್ಕೆ ನಗರದ ಪಂ.ಸಿದ್ದರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ಕನ್ನಡ, ತೆಲುಗು, ಹಿಂದಿ ಚಿತ್ರ ಗೀತೆಗಳ ಸಂಗೀತ ಸಂಜೆ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆಂದು ವೇದಿಕೆ ಅಧ್ಯಕ್ಷ ರೆಡ್ಡಿ ತಿಮ್ಮಯ್ಯ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮದ ಉದ್ಘಾಟನೆಯನ್ನು ಪಾಲಿಕೆ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಗಿರಿ ಮಾಡಲಿದ್ದು, ಅಧ್ಯಕ್ಷತೆಯನ್ನು ಹಿರಿಯ ನ್ಯಾಯವಾದಿ ಸಿ.ಎಸ್.ರಸ್ತಾಪುರ ವಹಿಸಲಿದ್ದಾರೆ ಎಂದರು. ಮುಖ್ಯ ಅತಿಥಿಗಳಾಗಿ ಆರ್ಡಿ ಎ ಅಧ್ಯಕ್ಷ ಬಿ. ಗೋವಿಂದ, ಪ್ರಮುಖರಾದ ಈರಣ್ಣ ಭಂಡಾರಿ, ವಿಠೋಬರಾವ್, ವೆಂಕಟೇಶ್ವರ ರಾವ್ ಜೀತೇಂದ್ರ ಆರ್ಯ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ವಿರೇಶ, ಶ್ರೀನಿವಾಸ ಯಾದವ್ ಉಪಸ್ಥಿತರಿದ್ದರು.

ವಿರಾಮ
ಪ್ರತಿ ಭಾನುವಾರ

{ಬಸವರಾಜ ಬೊಮ್ಮಾಯಿ} ಸಂಸದ

ಪಥ ಸಂಚಲನದಿಂದ ಯಾರಿಗಾದರೂ ತೊಂದರೆಯಾಗಿದಿಯಾ? ಸರಕಾರ ಸಮಾಜದಲ್ಲಿ ಕ್ಷೋಭೆ ಉಂಟುಮಾಡುವ ಕೆಲಸ ಮಾಡುತ್ತಿದೆ. ಇಷ್ಟು ವರ್ಷದಿಂದ ಸಂಘ ಪಥ ಸಂಚಲನ ಮಾಡುತ್ತಿದೆ. ಯಾರಿಗಾದರೂ ತೊಂದರೆಯಾಗಿದೆಯಾ?. ಮೊಹರಂನಲ್ಲಿ ಕಬ್ಬಿಣದ ಚಾಟಿಯಿಂದ ಹೊಡೆದುಕೊಳ್ಳುತ್ತಾರೆ ಅದು ಸರಿನಾ?.



ಪ್ರಸನ್ನ ಚಿತ್ತದಿಂದ ಉತ್ತಮ ಆಲೋಚನೆ ಸಾಧ್ಯ

ಮಾನಸಿಕ ಆರೋಗ್ಯ ಆರೈಕೆ ಕಾಯಿದೆ ಕುರಿತು ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ತರಬೇತಿ ಕಾರ್ಯಾಗಾರ। ಎಸ್ ಪಿ ಪುಟ್ಟಮಾದಯ್ಯ ಹೇಳಿಕೆ

ರಾಯಚೂರು: ಜಿಲ್ಲೆಯ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮಾನಸಿಕ ಅಸ್ವಸ್ಥರು ಕಂಡುಬಂದಲ್ಲಿ ಪೊಲೀಸರು ಏನು ಮಾಡಬೇಕು ಎಂಬುವುದು ಬಹಳ ಮುಖ್ಯವಾಗಿರುತ್ತದೆ. ಸಮಾಜದಲ್ಲಿ ಒಬ್ಬ ವ್ಯಕ್ತಿಯಿಂದ ಅಶಾಂತಿ ಉಂಟಾದಲ್ಲಿ ಮೊದಲು ಆ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಹೇಳಿದರು.

ನಗರದ ಕೃಷಿ ವಿಜ್ಞಾನಿಗಳ ವಿಶ್ವ ವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ಹಮ್ಮಿಕೊಂಡಿದ್ದ ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ 2017 ರ ಕಾನೂನು ನಿಯಮಗಳ ಕುರಿತು ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ತರಬೇತಿ ಗೆ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಅದಕ್ಕೆ ಘಟನೆಗೆ ಕಾರಣವಾದ ವ್ಯಕ್ತಿಯ ಮನಸ್ಸು ಹಾಗೂ ಬುದ್ಧಿ ಶಕ್ತಿ ಮುಖ್ಯವಾಗಿರುತ್ತದೆ. ಮಾನಸಿಕ ಆರೋಗ್ಯ ಕಾಯ್ದೆಯಲ್ಲಿ ಈ ಕುರಿತು ಅನೇಕ

ಕಾರ್ಯಗಾರಕ್ಕೆ ಸಸಿಗೆ ನೀರು ಹಾಕುವ ಮೂಲಕ ಪುಟ್ಟಮಾದಯ್ಯ ಎಂ., ಅವರು ಉದ್ಘಾಟಿಸಿದರು.

ಕಾನೂನು ನಿಯಮಗಳಿದ್ದು, ಅವುಗಳನ್ನು ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ತಿಳಿದುಕೊಳ್ಳಬೇಕು ಎಂದರು.

ಮನುಷ್ಯ ಮಾನಸಿಕವಾಗಿ ಖಿನ್ನತೆಗೆ ಒಳಗಾದಾಗ ಆ ವ್ಯಕ್ತಿ ಸಮಾಜಕ್ಕೆ ಹಾನಿ ಉಂಟು ಮಾಡುವುದು ಮತ್ತು ಸಮಾಜಕ್ಕೆ ಅಪಾಯವಾಗುವಂತೆ ನಡೆದುಕೊಳ್ಳುತ್ತಾನೆ. ಆದ್ದರಿಂದ ಮೊದಲು ಆ ವ್ಯಕ್ತಿಯ ಮಾನಸಿಕ ಆರೋಗ್ಯವನ್ನು ತಿಳಿದುಕೊಳ್ಳುವುದು ಬಹಳ ಮುಖ್ಯವಾಗಿರುತ್ತದೆ. ಪೊಲೀಸರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಮಾನಸಿಕ ಅಸ್ವಸ್ಥರು ಕಂಡು ಬಂದಲ್ಲಿ ಅಥವಾ ಸಾರ್ವಜನಿಕರು ಅವರ ಬಗ್ಗೆ ಮಾಹಿತಿ ನೀಡಿದ್ದಲ್ಲಿ ಮೊದಲು ಆ ವ್ಯಕ್ತಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು ಎಂದು ತಿಳಿಸಿದರು.

> **ಮನುಷ್ಯ ಮಾನಸಿಕವಾಗಿ ಖಿನ್ನತೆಗೆ ಒಳಗಾದಾಗ ಆ ವ್ಯಕ್ತಿ ಸಮಾಜಕ್ಕೆ ಹಾನಿ ಉಂಟು ಮಾಡುವುದು ಮತ್ತು ಸಮಾಜಕ್ಕೆ ಅಪಾಯವಾಗುವಂತೆ ನಡೆದುಕೊಳ್ಳುತ್ತಾನೆ. ಆದ್ದರಿಂದ ಮೊದಲು ಆ ವ್ಯಕ್ತಿಯ ಮಾನಸಿಕ ಆರೋಗ್ಯವನ್ನು ತಿಳಿದುಕೊಳ್ಳುವುದು ಬಹಳ ಮುಖ್ಯವಾಗಿರುತ್ತದೆ.**
> **-ಪುಟ್ಟಮಾದಯ್ಯ ಎಂ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

ಮನುಷ್ಯನಿಗೆ ಮನಸ್ಸೆ ಮೊದಲ ಧರ್ಮವಾಗಿರುತ್ತದೆ. ಎಲ್ಲಾ ಕ್ರಿಯೆಗಳು ಮನಸ್ಸಿನಿಂದಲೇ ಆಗುತ್ತದೆ. ಮನಸ್ಸೆ ನಾಯಕ ಸ್ಥಾನದಲ್ಲಿರುತ್ತದೆ. ಇಂತ ಮನಸ್ಸಿನಿಂದ ಕೆಟ್ಟ ಆಲೋಚನೆಗಳು, ಕೆಟ್ಟ ಮಾತುಗಳನ್ನು ಹಾಗೂ ಕೆಟ್ಟ ಕ್ರಿಯೆಗಳನ್ನು ಮಾಡಿದರೆ ಎತ್ತಿನ ಹೆಜ್ಜೆ ಗುರುತುಗಳ ಹಿಂದೆ ಬಂಡಿ ಚಕ್ರವು ಹಿಂಬಾಲಿಸುವ ಹಾಗೆ ದುಖಃವು ಹಿಂಬಾಲಿಸುತ್ತದೆ. ಅದೇ ಪ್ರಸನ್ನ ಚಿತ್ತದಿಂದ ಮಾತುಗಳು, ಆಲೋಚನೆ ಹಾಗೂ ಕ್ರಿಯೆಗಳನ್ನು ಮಾಡಿದರೆ ಸುಖವು ನೆರಳಿನಂತೆ ಯಾ ವಾಗಲೂ ಹಿಂಬಾಲಿಸುತ್ತದೆ ಎಂದು ತಿಳಿಸಿದರು.

ಮಾನಸಿಕ ಕಾಯ್ದೆಯ ಕುರಿತು ರಿಮ್ಸ್ ಆಸ್ಪತ್ರೆ ಮಾನಸಿಕ ಮುಖ್ಯಸ್ಥ ಡಾ.ರಮೇಶಬಾಬು ಮಾತನಾಡಿ, ಮಾನವನ ಪ್ರತಿಯೊಂದು ಕೋಶದಲ್ಲಿಯೂ ಮನಸ್ಸು ಇರುತ್ತದೆ. ಮನಸ್ಸು ಹೃದಯ ಅಥವಾ ತಲೆಯಲ್ಲಿರುವುದಿಲ್ಲ. ಆದ್ದರಿಂದ ನಿಮ್ಮ ನೀವು ಮೊದಲು ಅರ್ಥೈಸಿಕೊಳ್ಳಬೇಕು. ಮಾನಸಿಕ ಆರೋಗ್ಯ ಆರೈಕೆ ಕಾಯ್ದೆಯೂ ಸಮುದಾಯದ ಪಾಲ್ಗೊಳ್ಳುವಿಕೆಯ ಆಧಾರದ ಮೇಲೆ ನಿಂತಿದೆ ಪ್ರತಿಯೊಬ್ಬರೂ ಕಾಯ್ದೆಯ ಬಗ್ಗೆ ತಿಳಿದುಕೊಳ್ಳುವುದು ಅತ್ಯಂತ ಮುಖ್ಯವಾಗಿರುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾನಸಿಕ ರೋಗ ತಜ್ಞರಾದ ಅನಿಲ್ ಗುಮಾಸ್ತೆ, ಸ್ನೇಹ, ಮಂಜುಳಾ, ಶ್ರೀಕಾಂತ ,ಎಎಸ್ಪಿಗಳಾದ ಹರೀಶ, ಕುಮಾರ ಸ್ವಾಮಿ, ಡಿವೈಎಸ್ಪಿ ಶಾಂತವೀರ ಸೇರಿದಂತೆ ಜಿಲ್ಲೆಯ ವಿವಿಧ ಠಾಣೆಗಳ ಸಿಬ್ಬಂದಿಗಳು ಭಾಗಿಯಾಗಿದ್ದರು.

ಕುಷ್ಟರೋಗ ಪತ್ತೆ ಹಚ್ಚುವ ಆಂದೋಲನ ಯಶಸ್ವಿಗೆ ಸಹಕರಿಸಿ

ಹೊಸಪೇಟೆ: ನ.3 ರಿಂದ ನ.19 ರವರೆಗೆ ನಡೆಯಲಿರುವ ಕುಷ್ಠರೋಗ ಪತ್ತೆಹಚ್ಚುವ ಆಂದೋಲನ ಕಾರ್ಯಕ್ರಮವನ್ನು ಒಟ್ಟು 624 ತಂಡಗಳಿಂದ 1,74,693 ಮನೆಗಳನ್ನು 14 ದಿನಗಳಲ್ಲಿ ಸಮೀಕ್ಷೆ ನಡೆಸಲು ಕ್ರಿಯಾಯೋಜನೆಯನ್ನು ರೂಪಿಸಿಕೊಳ್ಳಲಾಗಿದ್ದು, ಈ ಕಾರ್ಯಕ್ರಮದ ಯಶಸ್ವಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸಹಕರಿಸಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಲ್.ಆರ್.ಶಂಕರನಾಯ್ಕ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆರೋಗ್ಯ ಇಲಾಖೆಯ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದರು. ಚರ್ಮದ ಮೇಲ್ಭಾಗದಲ್ಲಿ ಮಚ್ಚೆಗಳು, ದೇಹದ ಯಾವುದೇ ಭಾಗದಲ್ಲಿ ತಿಳಿಬಿಳಿ ಅಥವಾ ತಾಮ್ರ ಬಣ್ಣದ ಒಂದು, ಹಲವಾರು ಮಚ್ಚೆಗಳು ಈ ಮಚ್ಚೆಗಳ ಮೇಲೆ ಸ್ಪರ್ಶಜ್ಞಾನ ಇರದೇ ಇರುವುದು ಇಂತಹ ಯಾವುದೇ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ನಿಮ್ಮ ಹತ್ತಿರದ ಆಸ್ಪತ್ರೆಗಳಿಗೆ ಭೇಟಿ ನೀಡಿ ಚಿಕಿತ್ಸೆಗೆ ಮುಂದಾಗಬೇಕು. ಕುಷ್ಠರೋಗವನ್ನು ಪತ್ತೆ ಹಚ್ಚಲು ಹಲವು ವಿಧಾನಗಳಿದ್ದು, ಆಂದೋಲನದ ಮೂಲಕ ಪ್ರತಿ ಮನೆಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಾಗುವುದು ಎಂದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ರಾಧಿಕಾ.ಕೆ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ 76 ಕುಷ್ಠರೋಗ ಪ್ರಕರಣಗಳಿಗೆ ಚಿಕಿತ್ಸೆ ನೀಡುತ್ತಿದ್ದು, ಹೆಚ್ಚಿನ ಪ್ರಕರಣಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಮಾಡಿ ಚಿಕಿತ್ಸೆ ನೀಡಿದ್ದಾರೆ. ಇದರಿಂದ ಮುಂದೆ ಉಂಟಾಗುವ ಅಂಗವೈಕಲ್ಯತೆಯನ್ನು ತಡೆಗಟ್ಟಲು ಇತ್ತೀಚಿನ ವರ್ಷಗಳಲ್ಲಿ ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಅಂಗವೈಕಲ್ಯವನ್ನು ತಡೆಗಟ್ಟುವತ್ತ ಹೆಚ್ಚಿನ ಗಮನ ನೀಡಲಾಗಿದೆ. ಸಾಂಕ್ರಾಮಿಕ ರೋಗಗಳಲ್ಲಿ, ರೋಗದ ಹೊರೆಯನ್ನು ಕಡಿಮೆ ಮಾಡಲು ವ್ಯಾಪಕ ಪ್ರಯತ್ನಗಳ ಹೊರತಾಗಿಯೂ, ಕುಷ್ಠರೋಗವು ಜಗತ್ತಿನಲ್ಲಿ ಬಾಹ್ಯ ನರರೋಗ ಮತ್ತು ಅಂಗವೈಕಲ್ಯಕ್ಕೆ ಪ್ರಮುಖ ಕಾರಣವಾಗಿದೆ. ಕುಷ್ಠರೋಗದಿಂದಾಗಿ ರೋಗದ ಹೊರೆಯನ್ನು ಮತ್ತಷ್ಟು ಕಡಿಮೆ ಮಾಡಲು ವರ್ಧಿತ ಜಾಗತಿಕ ಕಾರ್ಯತಂತ್ರವನ್ನು ಪ್ರಾರಂಭಿಸಿದೆ ಎಂದರು.

ಬಳಿಕ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಕುಷ್ಠರೋಗ ಪತ್ತೆಹಚ್ಚುವ ಆಂದೋಲನದ ಪೋಸ್ಟರ್‌ಮತ್ತು ಕರಪತ್ರಗಳನ್ನು ಬಿಡುಗಡೆಗೊಳಿಸಲಾಯಿತು. ಜಿಲ್ಲಾ ಸರ್ವೇಕ್ಷಣಾಧಿಕಾರಿ

ಆರೋಗ್ಯ ಇಲಾಖೆಯ ಸಮನ್ವಯ ಸಮಿತಿ ಸಭೆಯಲ್ಲಿ ಡಾ. ಶಂಕರನಾಯ್ಕ ಅವರು ಮಾತನಾಡಿದರು.

> **ಜಿಲ್ಲೆಯಲ್ಲಿ 76 ಕುಷ್ಠರೋಗ ಪ್ರಕರಣಗಳಿಗೆ ಚಿಕಿತ್ಸೆ ನೀಡುತ್ತಿದ್ದು, ಹೆಚ್ಚಿನ ಪ್ರಕರಣಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಮಾಡಿ ಚಿಕಿತ್ಸೆ ನೀಡಿದ್ದಾರೆ. ಇದರಿಂದ ಮುಂದೆ ಉಂಟಾಗುವ ಅಂಗವೈಕಲ್ಯತೆಯನ್ನು ತಡೆಗಟ್ಟಲು ಇತ್ತೀಚಿನ ವರ್ಷಗಳಲ್ಲಿ ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಅಂಗವೈಕಲ್ಯವನ್ನು ತಡೆಗಟ್ಟುವತ್ತ ಹೆಚ್ಚಿನ ಗಮನ ನೀಡಲಾಗಿದೆ.**
> -ಡಾ.ರಾಧಿಕಾ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ

ಡಾ.ಷಣ್ಮುಖ ನಾಯ್ಕ ಮಾತನಾಡಿ, ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲಾ ಜಿಲ್ಲೆಗಳಲ್ಲಿ 60 ದಿನಗಳ ತಂಬಾಕುಮುಕ್ತ ಯುವ ಅಭಿಯಾನ 3.0 ಅನುಷ್ಠಾನಗೊಳಿಸಲಾಗಿದೆ. ತಂಬಾಕು ಬಳಕೆಯಿಂದ ದೇಶದಲ್ಲಿ ವಾರ್ಷಿಕವಾಗಿ 13.5 ಲಕ್ಷ ಸಾವುಗಳು ಸಂಭವಿಸುತ್ತಿದೆ. ಮಕ್ಕಳು ಹದಿಹರೆಯದಲ್ಲೇ ತಂಬಾಕು ಸೇವನೆ ಮಾಡುವ ಪ್ರಮಾಣ ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ. ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆ 2003 ತಿದ್ದುಪಡಿಯಾಗಿದ್ದು, ಕಾಯ್ದೆಯ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳನ್ನು ಬಳಕೆ ಮಾಡುವಂತಿಲ್ಲ, ಶಿಕ್ಷಣ ಸಂಸ್ಥೆಗಳ ಅವರಣದ 100 ಮೀಟರ್‌ಒಳಗೆ ತಂಬಾಕು ಉತ್ಪನ್ನಗಳ ಮಾರಾಟ ಶಿಕ್ಷಾರ್ಹ ಅಪರಾಧವಾಗಿದೆ. ಶಿಕ್ಷಣ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ತಂಬಾಕಿನ ಬಳಕೆಯಿಂದ ಆಗುವ ದುಷ್ಪರಿಣಾಮದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದರು.

ಬಳ್ಳಾರಿ ಜಿಲ್ಲಾ ಸೇವಾ ವೈದ್ಯಕೀಯ ಅಧಿಕಾರಿ ಡಾ. ಶ್ರೀಧರ.ಬಿ ಮಾತನಾಡಿ, ಭಾರತ ಸರ್ಕಾರವು ಡಿ.26 ಕ್ಕೆ ದಡಾರ ಮತ್ತು ರುಬೆಲ್ಲಾವನ್ನು ಮುಕ್ತಾಯಗೊಳಿಸಲು ಗುರಿಯನ್ನು ಹೊಂದಲಾಗಿದೆ. ಹಾಗಾಗಿ ಎಲ್ಲಾ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕಿದೆ. ದಡಾರ ಮತ್ತು ರುಬೆಲ್ಲಾ ವೈರಾಣುವಿನಿಂದ ಬರುವ ಕಾಯಿಲೆಯಾಗಿದ್ದು, ಕೆಮ್ಮು ಮತ್ತು ಸೀನುವುದರ ಮೂಲಕ ಇತರರಿಗೆ ಹರಡುತ್ತದೆ. ದಡಾರದಿಂದ ನ್ಯೂಮೋನಿಯಾ, ಅತಿಸಾರ ಭೇದಿ, ಮೆದುಳಿನ ಸೋಂಕಿನಂತಹ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಹಾಗೆಯೇ ತುರಿಕೆ, ವಿಪರೀತ ಜ್ವರ, ಕೆಮ್ಮು, ನೆಗಡಿ ಮತ್ತು ಕೆಂಗಣ್ಣು ದಡಾರದ ಮುಖ್ಯ ಲಕ್ಷಣಗಳಾಗಿವೆ. ಇದು ಬಾರದಂತೆ ಎಚ್ಚರಿಕೆ ವಹಿಸಲು ಜನಜಾಗೃತಿ ಮೂಡಿಸುವ ಅಗತ್ಯವಿದೆ. ರುಬೆಲ್ಲಾ ರೋಗವು ಗರ್ಭಿಣಿಯರಲ್ಲಿ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಗ್ಲೂಕೋಮ, ಕಣ್ಣಿನ ಪೊರೆ, ಕಿವುಡುತನ, ಮೆದಳು ಜ್ವರ, ಮಾನಸಿಕ ಅಸ್ವಸ್ಥತೆ, ಬುದ್ಧಿ ಮಾಂದ್ಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಆದ್ದರಿಂದ ವಿಶೇಷ ಗಮನ ಹರಿಸಿ ವೈದ್ಯರು ಕಾಳಜಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಈ ವೇಳೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೆ.ತಿಮ್ಮಪ್ಪ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಜಂಬಯ್ಯ, ಜಿಲ್ಲಾ ವೈದ್ಯಾಧಿಕಾರಿ ಡಾ.ಹರಿಪ್ರಸಾದ್, ಡಾ.ಭಾಸ್ಕರ್‌ಸೇರಿದಂತೆ ತಾಲೂಕು ವೈದ್ಯಾಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ತಾಯಿ, ಶಿಶು ಮರಣ ನಿಯಂತ್ರಣಕ್ಕೆ ಸೂಕ್ತ ಕ್ರಮವಹಿಸಿ: ಡಿಸಿ ಸೂಚನೆ

ಹೊಸಪೇಟೆ: ಜಿಲ್ಲಾ ವ್ಯಾಪ್ತಿಯ ಎಲ್ಲಾ ಆಸ್ಪತ್ರೆ ಗಳಲ್ಲಿ ತಾಯಿ ಮತ್ತು ಶಿಶು ಮರಣ ಪ್ರಕರಣ ಗಳು ಹೆಚ್ಚಳವಾಗದಂತೆ ವೈದ್ಯಾಧಿಕಾರಿಗಳು ಸೂಕ್ತ ಕ್ರಮವಹಿಸಿ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ.ಎಸ್. ಮನ್ನಿಕೇರಿ ಸೂಚಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಕವಿತಾ.ಎಸ್. ಮನ್ನಿಕೇರಿ ಅವರು ಮಾತನಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ತಾಯಂದಿರ, ಶಿಶು ಮತ್ತು ಮಕ್ಕಳ ಮರಣ ಲೆಕ್ಕಪರಿಶೋಧನೆ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಎಲ್ಲಾ ಆಸ್ಪತ್ರೆಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆ ನೀಡುವಲ್ಲಿ ವೈದ್ಯರು ಸಮಯಕ್ಕೆ ಸರಿಯಾಗಿ ಆರೋಗ್ಯ ಕೇಂದ್ರದಲ್ಲಿದ್ದು ರೋಗಿಗಳ ತಪಾಸಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ತಾಯಂದಿರು ಮತ್ತು ಶಿಶು, ಮಕ್ಕಳ ಸಾವು ಪ್ರಕರಣಗಳು ಹೆಚ್ಚಾಗದಂತೆ ಸೂಕ್ತ ಕ್ರಮ ವಹಿಸಲು ಜಿಲ್ಲಾಕೇಂದ್ರದಲ್ಲಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಎಲ್ಲಾ ವೈದ್ಯಾಧಿಕಾರಿಗಳು ಜಿಲ್ಲಾ ಮತ್ತು ತಾಲೂಕು ಮಟ್ಟದ ಸಭೆಗಳನ್ನು ಪ್ರತಿ ಶನಿವಾರ ಆಯೋಜಿಸಿ ಕುಂದು ಕೊರತೆಗಳಿಗೆ ಪರಿಹಾರ ಕಂಡುಕೊಳ್ಳಲು ಸೂಚಿಸಿದರು. ಈ ವಿಚಾರದಲ್ಲಿ ವೈದ್ಯರು ನಿರ್ಲಕ್ಷ್ಯ ವಹಿಸಿದ್ದಲ್ಲಿ ಕಾನೂನು ಕ್ರಮ ವಹಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಗರ್ಭಿಣಿ ಮಹಿಳೆಯರಿಗೆ ತುರ್ತು ಸೇವೆ ಅಗತ್ಯವಿದ್ದಲ್ಲಿ ಅಂತವರ ಮನೆಗಳಿಗೆ ತಾಲೂಕು ವೈದ್ಯಾಧಿಕಾರಿಗಳು ಮತ್ತು ಮೇಲ್ವಿಚಾರಣ ಸಿಬ್ಬಂದಿಗಳು ಭೇಟಿ ನೀಡಿ ಅಗತ್ಯ ಚಿಕಿತ್ಸೆ ನೀಡಲು ಮುಂದಾಗಬೇಕು. ಗುಣಮಟ್ಟದ ಸೇವೆ ಒದಗಿಸಲು ಲಭ್ಯವಿರುವ ನಿಧಿಯ ಬಳಕೆ ಮಾಡಿಕೊಳ್ಳಬೇಕು. ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ವೇಳೆ ಗರ್ಭಿಣಿ ಮಹಿಳೆಯರಿಗೆ ಉತ್ತಮ ಆರೋಗ್ಯ ಸಲಹೆಗಳು ಸೇರಿದಂತೆ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಿಸಬೇಕು. ಆಯುಷ್ ಇಲಾಖೆಯಿಂದ ಗರ್ಭಿಣಿ ಮತ್ತು ಬಾಣಂತಿಯರ ತಪಾಸಣೆ, ಸುರಕ್ಷಿತ ಹೆರಿಗೆ ಹಾಗೂ ಪೌಷ್ಠಿಕಾಂಶದ ಬಗ್ಗೆ ಆಪ್ತ ಸಮಲೋಚನೆ ನಡೆಸಬೇಕು. ಸಾಮಾನ್ಯವಾಗಿ ರಕ್ತಹೀನತೆ, ರಕ್ತಸ್ರಾವ, ತಾಯಿ ಮರಣ ಪ್ರಮಾಣಕ್ಕೆ ಪ್ರಮುಖ ಅಂಶವಾಗಿದೆ. ಇದರ ಬಗ್ಗೆ ಆರೋಗ್ಯ ಇಲಾಖೆಯವರು ಹೆಚ್ಚು ಆದ್ಯತೆ ನೀಡಬೇಕು ಎಂದರು.

ಈ ವೇಳೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೆ.ತಿಮ್ಮಪ್ಪ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಲ್.ಆರ್.ಶಂಕರನಾಯ್ಕ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಜಂಬಯ್ಯ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ ನಾಯ್ಕ, ಜಿಲ್ಲಾ ವೈದ್ಯಾಧಿಕಾರಿ ಡಾ.ಹರಿಪ್ರಸಾದ್, ಡಾ.ಭಾಸ್ಕರ್,ಡಾ.ರಾಧಿಕಾ ಸೇರಿದಂತೆ ತಾಲೂಕು ವೈದ್ಯಾಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಇದ್ದರು.

ಹದಗೆಟ್ಟ ರಸ್ತೆ, ನೆಟ್ಟಿಗರ ಆಕ್ರೋಶ

ಲಿಂಗಸೂಗೂರು: ತಗ್ಗು ದಿಣ್ಣೆ ಗಳಿಂದ ಕೂಡಿ, ತಿರುಗಾಡಲು ಕಷ್ಟಕರ ಪರಿಸ್ಥಿತಿ ನಿರ್ಮಾಣ ಮಾಡಿದ ಪಟ್ಟಣದ ರಸ್ತೆಗಳ ಅಭಿವೃದ್ಧಿ ಪಡಿಸುವಂತೆ ಸಾಮಾಜಿಕ ಜಾಲತಾಣದಲ್ಲಿ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಬಸ್ ನಿಲ್ದಾಣದ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಎದುರಲ್ಲಿನ ರಸ್ತೆಗಳು ಪುರಸಭೆಯ ವ್ಯಾಪ್ತಿಲೇ ಬರತ್ತವೆ. ಚೌದ್ರಿ, ಮಕ್ಕಳ ಆಸ್ಪತ್ರೆ, ಮತ್ತು ಭೀಮಾಂಬಿಕ ಪ್ರಿಂಟಿಂಗ್ ಪ್ರೆಸ್ ಇರುವ ಸಾರ್ವಜನಿಕ ರಸ್ತೆ ಸುಮಾರು 8-9 ವರ್ಷಗಳಿಂದಾನೂ ಈ ರಸ್ತೆಗೆ ಒಂದು ಹಿಡಿ ಮರಮ್ ಹಾಕುವಂಥ ಸೌಜನ್ಯ ಯಾರೂ ತೋರಿಸಿಲ್ಲ.

ಸುಮಾರು 8-9ವರ್ಷಗಳಿಂದ ಈ ರಸ್ತೆಗೆ ಯಾವ ಅದಿಕಾರಿಗಳಾಗಲೀ, ಸಂಬಂಧಿಸಿದ ಪುರಸಭಾ ಸದ್ಯರಾಗಲೀ ಬಂದಿಲ್ಲ ನೋಡಿಲ್ಲ. ರಸ್ತೆಯ ಮಾರ್ಗವಾಗಿ ಇರುವ ಮನೆಯವರು ತಮ್ಮ ಮನೆಯ ಕಾರ್ಯಕ್ರಮಗಳಿದ್ದಾಗ ತಮ್ಮ ಮನೆಯ ಮುಂದೆ ರಸ್ತೆ ಸರಿಪಡಿಸ್ಕೊಳ್ತಾರೆ ಅಷ್ಟೇ. ಸಂಬಂಧ ಪಟ್ಟವರಿಗೆ ಸ್ವಲ್ಪನೂ ಸಾರ್ವಜನಿಕರ ಕಾಳಜಿ ಇಲ್ಲ ಅನ್ನುವುದಂತೂ ಸತ್ಯ ಎಂದು ಫೇಸ್ ಬುಕ್ ಮುಖಾಂತರ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಪಟ್ಟಣದಲ್ಲಿ ಇತ್ತೀಚೆಗೆ ಜೆ.ಜೆ.ಎಮ್. ಯೋಜನೆಯ ಪೈಪ್ ಲೈನ್ ಬಂದು ಮತ್ತಷ್ಟೂ ರಸ್ತೆ ಹದಗೆಟ್ಟು ಹೋಗಿದೆ. ದಿನದಲ್ಲಿ ಕನಿಷ್ಠ ಒಬ್ಬರಾದ್ರೂ ಬೈಕಿಂದ ಬೀಳ್ತಿದಾರೆ. ಕನಿಷ್ಠ ಕಾಳಜಿ ಇದ್ದರು ಸಂಬಂಧ ಪಟ್ಟ ಅಧಿಕಾರಿಗಳು ಈ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂಬುದು ನಿವಾಸಿಗಳ ಒತ್ತಾಸೆಯಾಗಿದೆ.

ವೆಂಕಟೇಶ ಕೊಲೆ ಪ್ರಕರಣ: ಆರೋಪಿ ರವಿ ಬಂಧನ

ಗಂಗಾವತಿ: ನಗರವನ್ನೇ ಬೆಚ್ಚಿ ಬೀಳಿಸಿದ್ದ ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಕೊಲೆ ಪ್ರಕರಣದ ಪ್ರಮುಖ ಆರೋಪಿ ರವಿಯನ್ನು ಬರೋಬ್ಬರಿ 19 ದಿನದ ನಂತರ ಪೊಲೀಸರು ಬಂಧಿಸಿದ್ದಾರೆ. ರವಿ ಜೊತೆಗೆ ಕೊಲೆಯಲ್ಲಿ ಭಾಗಿ ಯಾಗಿದ್ದ ಆತನ ಸಹಚರ ಗೌಳಿ ಗಂಗಾಧರನನ್ನು ಪೊಲೀಸರು ಬಂಧಿಸಿದ್ದಾರೆ.

ಕಳೆದ ಅಕ್ಟೋಬರ್8 ರಂದು ಮಧ್ಯ ರಾತ್ರಿ ಬರ್ಬರವಾಗಿ ಹತ್ಯೆ ಮಾಡಲಾ ಗಿತ್ತು. ಗಂಗಾವತಿಯ ಕೊಪ್ಪಳ ರಸ್ತೆಯಲ್ಲಿ ವೆಂಕಟೇಶ ಕುರುಬರ ಹೊರಟಿದ್ದ ಬೈಕ್ ಗೆ ಕಾರಿನಿಂದ ಡಿಕ್ಕಿ ಹೊಡೆಸಿ, ಮಾರಕಾಸ್ತ್ರಗಳಿಂದ ಕೊಚ್ಚಿ ಭೀಕರವಾಗಿ ಕೊಲೆ ಮಾಡಲಾಗಿತ್ತು. ಇದು ಹಳೇ ವೈಷಮ್ಯದಿಂದಲೇ ನಡೆದ ಕೊಲೆ ಎಂದು ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ. ಕೊಲೆಯಾದ ವೆಂಕಟೇಶ, ಈ ಹಿಂದೆ ರವಿ ಸಹಚರರಿಂದ ನಡೆದಿದ್ದ ಮಾರಣಾಂತಿಕ ಹಲ್ಲೆ ಪ್ರಕರಣದ ಆರೋಪಿಗಳ ಬಂಧನಕ್ಕೆ ಪೊಲೀಸರಿಗೆ ಸಹಾಯ ಮಾಡಿದ್ದ.

ಈ ಹಿನ್ನೆಲೆ ಪ್ರಮುಖ ಆರೋಪಿ ರವಿ ಮತ್ತು ಆತನ ಗ್ಯಾಂಗ್ ವೆಂಕಟೇಶ ಮೇಲೆ ದ್ವೇಷ ಇಟ್ಟುಕೊಂಡಿತ್ತು ಎನ್ನಲಾಗಿದೆ. ಕೊಲೆಯಾದ ದಿನ ನಾಲ್ವರು ಆರೋಪಿಗಳು ಪೊಲೀಸರಿಗೆ ಶರಣಾಗಿದ್ದರು. ಆದರೆ, ಕೊಲೆಯ ಮಾಸ್ಟರ್‌ಮೈಂಡ್ ಎನ್ನಲಾಗಿದ್ದ ರವಿ ಬರೋಬ್ಬರಿ 19 ದಿನದ ಬಳಿಕ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಕೊಲೆ ನಡೆದ ದಿನದಿಂದ ರವಿ ಬಂಧನಕ್ಕೆ ಮೃತನ ಕುಟುಂಬದಿಂದ ಒತ್ತಾಯ ಕೇಳಿ ಬಂದಿತ್ತು. ರವಿ ಬಂಧನಕ್ಕೆ ಕೊಪ್ಪಳ ಪೊಲೀಸ್ ವರಿಷ್ಠಾಧಿಕಾರಿ ಗಳು ವಿಶೇಷ ತಂಡ ರಚಿಸಿದ್ದರು. ಈ ತಂಡ ರವಿ ಮತ್ತು ಗೌಳಿ ಗಂಗಾಧರ ಬಂಧನಕ್ಕಾಗಿ ಹೊರ ರಾಜ್ಯಗಳಲ್ಲಿಯೂ ಹುಡಕಾಟ ನಡೆಸಿತ್ತು.

ಬಂಧಿತರ ಸಂಖ್ಯೆ 9ಕ್ಕೆ: ಪ್ರಕರಣದ ಹಿನ್ನೆಲೆ ಪೊ ಲೀಸರು ರವಿ ಪತ್ನಿ ಸೇರಿ ಏಳು ಆರೋಪಿಗಳನ್ನು ಈಗಾಗಲೇ ಬಂಧಿಸಿದ್ದರು. ಇದೀಗ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 9 ಜನ ಆರೋಪಿಗಳನ್ನು ಬಂಧಿಸಿದಂತಾಗಿದೆ. ಪ್ರಮುಖ ಆರೋಪಿಯ ಬಂಧನದಿಂದ ವೆಂಕಟೇಶ ಕೊಲೆ ಪ್ರಕರಣ ಮಹತ್ವದ ಹಂತ ತಲುಪಿದೆ. ಬಂಧಿತ ಆರೋಪಿ ಗಳ ವಿಚಾರಣೆ ಮುಂದುವರೆದಿದ್ದು, ಕೊಲೆಯ ಹಿಂದಿನ ಇನ್ನಷ್ಟು ಮಾಹಿತಿ ತಿಳಿಯಬೇಕಿದೆ.

ಕನಿಷ್ಠ ವೇತನ ನೀಡಬೇಕು

ಸುದ್ದಿಗೋಷ್ಠಿಯಲ್ಲಿ ನಾಗರಾಜ ಪೂಜಾರ ಅವರು ಮಾತನಾಡಿದರು.

ರಾಯಚೂರು: ಸಿಂಧನೂರು ನಗರಸಭೆಯಲ್ಲಿ 27 ಜನ ಘನತ್ಯಾಜ್ಯ ವಿಲೇವಾರಿ ಕಾರ್ಯ ನಿರ್ವಹಿಸುತ್ತಿರುವ ಚಾಲಕರು, ಸೂಪರ್‌ವೈಜರ್ ಹಾಗೂ ಸೆಕ್ಯೂರಿಟಿಗಳಿಗೆ ಕಾರ್ಮಿಕ ಕಾಯ್ದಗಳಂತೆ ಕನಿಷ್ಠವೇತನ ಪಾವತಿಸುವಂತೆ ಕಲಬುರಗಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರು ಆದೇಶ ನೀಡಿದ್ದು, ಕೂಡಲೇ ಹಣ ಹಾಗೂ ಪರಿಹಾರವನ್ನು ನೀಡಬೇಕೆಂದು ಎಐಸಿಸಿಟಿಯು ಟ್ರೇಡ್ ಯೂನಿಯನ್ ರಾಜ್ಯ ಸಹ ಕಾರ್ಯದರ್ಶಿ ನಾಗರಾಜ ಪೂಜಾರ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 2016 ರಿಂದ ಸಿಂಧನೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 27 ಜನ ಕಾರ್ಮಿಕರಿಗೆ ಕನಿಷ್ಟ ವೇತನ ನೀಡದೇ ವಂಚಿಸಲಾಗಿತ್ತು. ಕಲಬುರಗಿ ವಿಭಾಗ ಕಾರ್ಮಿಕ ಆಯುಕ್ತರ ಮೊರೆ ಹೋಗಲಾಗಿತ್ತು. ಅರ್ಜಿ ವಿಚಾರಣೆ ನಡೆಸಿರುವ ಆಯುಕ್ತರು ಅ.8 ರಂದು ಆದೇಶ ಹೊರಡಿಸಿದ್ದಾರೆ. 27 ಜನ ಕಾರ್ಮಿಕರಿಗೆ ಕನಿಷ್ಟ ವೇತನ ವ್ಯತ್ಯಾಸ ಹಣ 73 ಲಕ್ಷ 55 ಸಾವಿರ ರೂ ಹಾಗೂ ಪರಿಹಾರವಾಗಿ 1.35 ಲಕ್ಷ ರು. ಪರಿಹಾರ ಸೇರಿ 74.90 ಲಕ್ಷ ಹಣವನ್ನು ನೀಡುವಂತೆ ಆದೇಶಿಸಿದ್ದಾರೆ ಎಂದರು. ಜಿಲ್ಲಾಧಿಕಾರಿಗಳು ಕೂಡಲೇ ಹಣವನ್ನು ತೇವಣಿ ನೀಡುವ ಮೂಲಕ ಪಾವತಿಗೆ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಅಜೀಜ ಜಹಾಗೀರದಾರ, ಅನಿಲ್, ಜಿಲಾನಿ, ಮೌನೇಶ, ಅಂಬರೇಶ ಕರಿಯಪ್ಪ ಉಪಸ್ಥಿತರಿದ್ದರು.

ಸಾಹಿತ್ಯದ ಓದಿನಿಂದ ಶಿಕ್ಷಕರಿಗೆ ಭಾಷೆ ಮೇಲೆ ಹಿಡಿತ ಬರಲಿದೆ

ಕೊಪ್ಪಳ: ಶಿಕ್ಷಕರು ಬಳಸುವ ಭಾಷೆ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಎಲ್ಲ ಶಿಕ್ಷಕರು ಭಾಷೆ ಮತ್ತು ಸಾಹಿತ್ಯವನ್ನು ಅರ್ಥಪೂರ್ಣವಾಗಿ ಬಳಸಬೇಕು ಎಂದು ಚಿಂತಕ ಹಾಗೂ ಶಿಕ್ಷಣ ತಜ್ಞ ಅರವಿಂದ ಚೊಕ್ಕಾಡಿ ಸಲಹೆ ನೀಡಿದರು.

ನಗರದ ಸಾಹಿತ್ಯ ಭವನದಲ್ಲಿ ಕವಿ ಗವಿಸಿದ್ದ ಎನ್. ಬಳ್ಳಾರಿ ಸಾಹಿತ್ಯ, ಸಾಂಸ್ಕೃತಿಕ, ಕಲಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ತಳಮಳ ಪ್ರಕಾಶನ ಆಯೋಜಿಸಿದ್ದ ಕವಿ ಗವಿಸಿದ್ದ ಎನ್. ಬಳ್ಳಾರಿ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

ಹೆಚ್ಚು ಹೆಚ್ಚು ಓದಿನಿಂದ ಶಿಕ್ಷಕರಿಗೆ ಭಾಷೆ ಮತ್ತು ವಿಷಯದ ಮೇಲೆ ಹಿಡಿತ ಬರಲಿದೆ. ಬರಹಗಾರರಲ್ಲಿ ಸಾಹಿತ್ಯ ಪ್ರಜ್ಞೆ ಈಗ ಇಲ್ಲದಂತಾಗಿದೆ. ಕಾವ್ಯ ಸೃಜನಶೀಲತೆಯಿಂದ ಕೂಡಿಸಬೇಕು. ವ್ಯಾಪಕ ಓದು ಹಾಗೂ ತಿಳಿದುಕೊಳ್ಳಬೇಕು ಎನ್ನುವ ಕುತೂಹಲ ಬೆಳಸಿಕೊಳ್ಳದಿದ್ದರೆ ಕಾವ್ಯ ರಚನೆ ಕುಂಠಿತವಾಗುತ್ತದೆ. ಸಾಹಿತ್ಯ ಪ್ರಜ್ಞೆ ಜನರ ಸಾಮಾನ್ಯ ಪ್ರಜ್ಞೆಯಾಗಬೇಕು. ಇಂಥ ಪ್ರಜ್ಞೆ ದೈನಂದಿನ ಬದುಕಿನ ವರ್ತನೆಯಲ್ಲಿ ಪರಿವರ್ತನೆ ತಂದರೆ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯವಾಗುತ್ತದೆ ಎಂದು ಆಶಿಸಿದರು.

ಚಿಂತಕ ಹಾಗೂ ಮಾಜಿ ಶಾಸಕ ವೈಎಸ್ವಿ ದತ್ತಾ ಮಾತನಾಡಿ, ಬಂಡಾಯ ಸಾಹಿತ್ಯದ ಸ್ವರೂಪ ಮನುಷ್ಯ ಸಂಬಂಧಗಳನ್ನು ಬೆಸೆಯುತ್ತದೆ. ರಾಜಕಾರಣಿಗಳು ಅಧಿಕಾರ ಬಂದರೆ ಜನರಿಂದ ದೂರವಿದ್ದು ಅಟ್ಟಕ್ಕೆ ಏರುತ್ತಿದ್ದೇವೆ. ಜನ ಕೇಂದ್ರೀತವಾಗಬೇಕಿದ್ದ ವ್ಯವಸ್ಥೆ ಪ್ರಸ್ತುತ ರಾಜಕಾರಣದಲ್ಲಿ ವ್ಯಕ್ತಿ ಕೇಂದ್ರಿತವಾಗುತ್ತಿದೆ. ಶಾಸಕ, ಸಂಸದ, ವಿಧಾನ ಪರಿಷತ್ ಸದಸ್ಯರು, ಸಚಿವರನ್ನು ಕಂಡು ಜನ ತಂತ್ರಕ್ಕೆ ನಗು ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈಗಿನ ಕೆಟ್ಟ ವ್ಯವಸ್ಥೆಗೆ ಚುನಾವಣಾ ಪದ್ಧತಿ ಮುಖ್ಯ ಕಾರಣ. ಇದು ಬದಲಾಗಬೇಕು. ವ್ಯವಸ್ಥೆ ಸುಧಾರಣೆಯಲ್ಲಿ ಮತದಾರರು ಕೂಡ ಪ್ರಮುಖ ಪಾತ್ರ ವಹಿಸುತ್ತಾರೆ. ನಿಜವಾದ ಅರ್ಥದಲ್ಲಿ ನಮಗೆ ಪ್ರಜಾಪ್ರಭುತ್ವದ ನಿಜವಾದ ವ್ಯಾಖ್ಯಾನ ಮಾಡಿದ್ದು ಬಸವಣ್ಣನವರು ಎಂದು ಅಭಿಪ್ರಾಯಪಟ್ಟರು.

ಕೊಪ್ಪಳದ ಸಾಹಿತ್ಯ ಭವನದಲ್ಲಿ ಕವಿ ಗವಿಸಿದ್ದ ಎನ್. ಬಳ್ಳಾರಿ ಸಾಹಿತ್ಯೋತ್ಸವ ಕಾರ್ಯಕ್ರಮ ಭಾನುವಾರ ನಡೆಯಿತು.

> **ಗವಿಸಿದ್ದ ಎನ್. ಬಳ್ಳಾರಿ ವೇದಿಕೆಯಿಂದ ಪ್ರತಿವರ್ಷವೂ ಸಾಹಿತ್ಯೋತ್ಸವ ನಡೆಸಿಕೊಂಡು ಬರಲಾಗುತ್ತಿದೆ. ಸಾಧ್ಯವಾದಷ್ಟು ಸಾಹಿತ್ಯ ಸೇವೆ ಮಾಡುತ್ತಿದ್ದೇವೆ.**
> **- ಮಹೇಶ ಬಳ್ಳಾರಿ,** ಸಾಹಿತ್ಯೋತ್ಸವದ ಸಂಚಾಲಕ

> **ವಿದ್ಯಾರ್ಥಿಗಳು ಸೇರಿ ಎಲ್ಲರಲ್ಲೂ ಓದುವ ಪ್ರವೃತ್ತಿ ಕಡಿಮೆ ಆಗುತ್ತಿದೆ. ಇದರಿಂದ ಸರಕಾರವೇ ಮೊಬೈಲ್ ಬಿಡಿ, ಪುಸ್ತಕ ಹಿಡಿಯಿರಿ ಎಂದು ಹೇಳುತ್ತಿದ್ದಾರೆ. ಸಮಾಜ ಇಂಥ ಸ್ಥಿತಿಗೆ ತಲುಪಿರುವುದು ದುರ್ದೈವ.**
> **- ವೈಎಸ್ವಿ ದತ್ತಾ,** ಮಾಜಿ ಶಾಸಕ

> **ಸರಕಾರಿ ಪ್ರಾಯೋಜಿತ ಸಾಹಿತ್ಯ ಸಮ್ಮೇಳನಗಳು ಹಗರಣಗಳ ಸರಮಾಲೆ ಆಗುತ್ತಿವೆ. ಇಂಥ ಸಂದರ್ಭದಲ್ಲಿ ಗವಿಸಿದ್ದ ಎನ್. ಬಳ್ಳಾರಿ ಸಾಹಿತ್ಯೋತ್ಸವ ಮಾದರಿ ಆಗಿದೆ.**
> **- ಜಗದೀಶ ಅಂಗಡಿ,** ಲೇಖಕ

ಗೌರವ ಸಮರ್ಪಣೆ: ವರ್ತಕ ಸಿದ್ಧಣ್ಣ ನಾಲವಾಡ, ಗವಿಸಿದ್ಧೇಶ್ವರ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ರಾಜಶೇಖರ ಆಡೂರ, ಪಾರಂಪರಿಕ ಔಷಧಿ ವಿತರಕಿ ದೇವಕಿಬಾಯಿ ಶೇಖರಣ್ಣಾರ ಶಿಲ್ಪಿ, ಸಾಮರ್ಥ್ಯ ಸಂಸ್ಥೆಯ ಫಿಸಿಯೊಥೆರಪಿಸ್ಟ್ ಪ್ರಭಾಕರ ಎಸ್. ಸನಗುಂದಿ, ಕಲಾವಿದ ಮರಿಯಪ್ಪ ಚಾಮಲಾಪುರ ಅವರನ್ನು ಸನ್ಮಾನಿಸಲಾಯಿತು. ಬಸವ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಬಸವರಾಜ ಬಳ್ಳೊಳ್ಳಿ, ಬಳ್ಳಾರಿ ವಿಭಾಗೀಯ ಕಾನೂನು ಅಧಿಕಾರಿ ಬಿ.ಎಸ್. ಪಾಟೀಲ್, ಡಿಡಿಪಿಐ ಸೋಮಶೇಖರಗೌಡ ಪಾಟೀಲ್, ಕವಿಯತ್ರಿ ಮಮತಾ ಅರಸಿಕೆರೆ, ವರ್ತಕ ಪದಮಚಂದ್ ಮೆಹತಾ, ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ಆನಂದ ಗೊಂಡಬಾಳ ಇತರರು ಇದ್ದರು.

2ಎ ಮೀಸಲು ಹೋರಾಟ ನಿಲ್ಲದು

ಗಂಗಾವತಿ: ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗಾಗಿ ಮಾಡಿದ ಹೋರಾಟದಿಂದ ನಾನು ಸಾಕಷ್ಟು ಎದುರಿಸಿದ್ದೇನೆ. ಆದರೆ, ಸಮುದಾಯದ ಚಿಂತನೆ ಮುಂದೆ ನನಗೆ ಯಾವುದೂ ದೊಡ್ಡದಲ್ಲ. ನಮ್ಮವರೇ ನಮಗೆ ತೊಂದರೆ ನೀಡಿದರೂ ಮೀಸಲು ಹೋರಾಟ ಮಾತ್ರ ನಿಲ್ಲಿಸುವುದಿಲ್ಲ. ತೊಂದರೆ ನೀಡಿದವರೇ ಸಮುದಾಯದ ಮುಂದೆ ಬಂದು ನಿಲ್ಲುವ ದಿನಗಳು ದೂರವಿಲ್ಲ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಶ್ರೀಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು. ನಗರದ ಸಿಬಿಎಸ್ ಕಲ್ಯಾಣ ಮಂಟಪದಲ್ಲಿ ಪಂಚಮಸಾಲಿ ಸಂಘದ ತಾಲೂಕು ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತ್ಯುತ್ಸವ ಹಾಗೂ ಪ್ರತಿಭಾ ಪುರಸ್ಕಾರ ಉದ್ಘಾಟಿಸಿ ಮಾತನಾಡಿದರು. ರಾಜ್ಯದಲ್ಲಿನ ಪಂಚಮಸಾಲಿ ಸಮುದಾಯಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸಿಗುವವರೆಗೆ ಹೋರಾಟ ಮುಂದುವರಯಲಿದೆ ಎಂದರು. ಶಾಸಕ ಗಾಲಿ ಜನಾರ್ದನ ರೆಡ್ಡಿ ಮಾತನಾಡಿದರು. ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಸಂಸದ ಕೆ.ರಾಜಶೇಖರ್‌ಹಿಟ್ನಾಳ, ಎಂಎಲ್ಸಿ ಹೇಮಲತಾ ನಾಯಕ, ಮಾಜಿ ಸಂಸದ ಕರಡಿ ಸಂಗಣ್ಣ, ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ, ಜಿ.ವೀರಪ್ಪ, ಮಾಜಿ ಎಂಎಲ್ಸಿ .ಶ್ರೀನಾಥ, ನಗರಸಭೆ ಸದಸ್ಯ ನವೀನ್ ಮಾ.ಪಾಟೀಲ್, ಬಿಜೆಪಿ ಜಿಲ್ಲಾ ಮಾಜಿ ಅ'ಕ್ಷ ಸಿಂಗನಾಳ ವಿರೂಪಾಕ್ಷಪ್ಪ, ಮುಖಂಡರಾದ ಬಸವರಾಜ ಕ್ಯಾವಟರ, ಎಚ್.ಎಸ್.ಗಿರೇಗೌಡ, ತಿಪ್ಪೇರುದ್ರಸ್ವಾಮಿ ಇದ್ದರು.

ಸಮಾಚಾರ ಸಣ್ಣದಲ್ಲ

ನೀರಿನ ಸೆಳೆತಕ್ಕೆ ಸಿಲುಕಿ ಇಬ್ಬರು ಸಾವು

ಮೈಸೂರು: ನೀರಿನಲ್ಲಿ ಮುಳುಗುತ್ತಿದ್ದ ಯುವಕನನ್ನು ರಕ್ಷಿಸಲು ಹೋದ ಸಹೋದರರು ನೀರು ಪಾಲಾದ ಘಟನೆ ಮೈಸೂರಿನ ಹೊರವಲಯದ ವರುಣ ನಾಲೆಯಲ್ಲಿ ನಡೆದಿದೆ. ಮೈಸೂರು ತಾಲೂಕಿನ ಬಡಗಲಹುಂಡಿಯಲ್ಲಿ ಘಟನೆ. ಬಡಗಲಹುಂಡಿ ಗ್ರಾಮದ ರಮೇಶ್ ಎಂಬುವರ ಪುತ್ರ ನವ ವಿವಾಹಿತ ನಂದನ್ (25), ಸಹೋದರನ ಪುತ್ರ ರಾಕೇಶ್ (20) ಸಾವನ್ನಪ್ಪಿದವರು. ನಿನ್ನೆ ಸಂಜೆ ವರುಣ ನಾಲೆಯಲ್ಲಿ ಈಜಲು ತೆರಳಿದ್ದ ಬಾಲಕ ಮಂಜು ನೀರಿನಲ್ಲಿ ಮುಳುಗುತ್ತಿದ್ದುದನ್ನು ಗೊಬ್ಬರ ತೆಗೆದುಕೊಂಡು ನಾಲೆಯ ಮೇಲ್ಭಾಗದಲ್ಲಿ ಹೋಗುತ್ತಿದ್ದ ಸಹೋದರರು ಕಂಡು ಕೂಡಲೇ ರಕ್ಷಿಸಿದ್ದಾರೆ. ಆದರೆ, ಈ ವೇಳೆ ನೀರಿನ ಸೆಳೆತಕ್ಕೆ ಸಿಲುಕಿ ನಂದನ್, ರಾಕೇಶ್ ನೀರುಪಾಲಾಗಿದ್ದಾರೆ. ಮೃತ ನಂದನ್, ರಾಕೇಶ್ ಇಬ್ಬರೂ ಸಹೋದರರ ಮಕ್ಕಳು. ಚನ್ನಪಟ್ಟಣ ಮೂಲದ ಯುವತಿಯನ್ನು ಪ್ರೀತಿಸಿ ಹದಿನೈದು ದಿನಗಳ ಹಿಂದಷ್ಟೇ ನಂದನ್ ಮದುವೆಯಾಗಿದ್ದರು. ಘಟನೆ ಕುರಿತು ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು: ಹುಲಿ ದಾಳಿಗೆ ದನಗಾಹಿ ಸಾವು

ಮೈಸೂರು: ದನ ಮೇಯುಸುತ್ತಿದ್ದ ವ್ಯಕ್ತಿ ಮೇಲೆ ಹುಲಿ ದಾಳಿ ನಡೆಸಿದ ಘಟನೆ ಸರಗೂರು ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ನಡೆದಿದೆ. ಪರಿಣಾಮ, ಗ್ರಾಮದ ರಾಜಶೇಖರ್ (60) ಎಂಬವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ದನ ಮೇಯಿಸು ತ್ತಿದ್ದ ವೇಳೆ ಹಿಂಭಾಗದಿಂದ ಬಂದು ದಾಳಿ ಮಾಡಿ ರಾಜಶೇಖರ್ ಅವರನ್ನು ಎಳೆದೊಯ್ದಿದೆ. ಈ ವೇಳೆ ಸ್ಥಳೀಯರು ಕಿರುಚಾಡಿದಾಗ ಹುಲಿ ರಾಜಶೇಖರ ನನ್ನು ಬಿಟ್ಟು ಪರಾರಿಯಾಗಿದೆ. ಆದರೆ, ಅಷ್ಟರ ವೇಳೆಗೆ ಆತ ಅಸುನೀಗಿದ್ದಾರೆ. ಹುಲಿ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿ ಪ್ರತಿಭಟಿಸಿದರು. ಘಟನಾ ಸ್ಥಳದಲ್ಲಿ ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಕಳೆದ ಹದಿನೈದು ದಿನಗಳ ಅಂತರದಲ್ಲಿ ಎಚ್.ಡಿ.ಕೋಟೆ ತಾಲೂಕಿನಲ್ಲಿ ನಡೆದ ಎರಡನೇ ಘಟನೆ ಇದಾಗಿದೆ.

ಬೆಂಗಳೂರು-ಮಂಗ್ಳೂರು ಹಲವು ರೈಲುಗಳು ರದ್ದು

ಬೆಂಗಳೂರು: ಸಕಲೇಶಪುರ ಮತ್ತು ಸುಬ್ರಹ್ಮಣ್ಯ ರೋಡ್ (ಘಾಟ್ ಸೆಕ್ಷನ್) ನಡುವಿನ ರೈಲ್ವೆ ವಿದ್ಯುದ್ದೀಕರಣ ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ ನೈರುತ್ಯ ರೈಲ್ವೆಯು ನವೆಂಬರ್ 2 ರಿಂದ ಡಿಸೆಂಬರ್

15ರವರೆಗೆ ಪ್ರತಿದಿನ ನಾಲ್ಕು ಗಂಟೆಗಳ ಕಾಲ ಮಾರ್ಗ ವನ್ನು ಬಂದ್ ಮಾಡುತ್ತಿದೆ. ಈ ಕಾರಣದಿಂದಾಗಿ ಮಂಗಳೂರು-ಬೆಂಗಳೂರು ನಡುವೆ ಸಂಚರಿಸುವ ಹಲವು ರೈಲುಗಳು ರದ್ದಾಗಲಿವೆ. ರೈಲು ಸಂಖ್ಯೆ 16539 ಯಶವಂತಪುರ -ಮಂಗಳೂರು ಜಂಕ್ಷನ್ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ನ.8 ರಿಂದ ಡಿ.13 ರವರೆಗೆ ರದ್ದುಗೊಳ್ಳಲಿದೆ. ರೈಲು ಸಂಖ್ಯೆ 16540 ಮಂಗಳೂರು ಜಂಕ್ಷನ್ ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ನ.9 ರಿಂದ ನ.ರವರೆಗೆ ರದ್ದುಗೊಳ್ಳಲಿದೆ. ರೈಲು ಸಂಖ್ಯೆ 16575 ಯಶವಂತಪುರ-ಮಂಗಳೂರು ಜಂಕ್ಷನ್ ಗೋಮಟೇಶ್ವರ ವೀಕ್ಲಿ ಎಕ್ಸ್‌ಪ್ರೆಸ್ ನ.2 ರಿಂದ ನ.14 ರವರೆಗೆ ರದ್ದುಗೊಳ್ಳಲಿದೆ. ರೈಲು ಸಂಖ್ಯೆ 16576 ಮಂಗಳೂರು ಜಂಕ್ಷನ್ ಯಶವಂತಪುರ ವೀಕ್ಲಿ ಎಕ್ಸ್‌ಪ್ರೆಸ್ ನ.3 ರಿಂದ ನ.15ರವರೆಗೆ ರದ್ದುಗೊಳ್ಳಲಿದೆ. ರೈಲು ಸಂಖ್ಯೆ 16515 ಯಶವಂತಪುರ ಕಾರವಾರ ವೀಕ್ಲಿ ಎಕ್ಸ್‌ಪ್ರೆಸ್ ನ.3ರಿಂದ ನ.15ರವರೆಗೆ ರದ್ದುಗೊಳ್ಳಲಿದೆ. ರೈಲು ಸಂಖ್ಯೆ 16516 ಕಾರವಾರ ಯಶವಂತಪುರ ಎಕ್ಸ್‌ಪ್ರೆಸ್ ನ.4 ರಿಂದ ಡಿ.16ರವರೆಗೆ ರದ್ದುಗೊಳ್ಳಲಿದೆ.

ಬಸ್ ಸುರಕ್ಷತೆಗೆ ನಿಗಾ

← ಮೊದಲಪುಟದಿಂದ

ನಿರ್ದಾಕ್ಷಿಣ್ಯ ಕ್ರಮಕ್ಕೆ ಸೂಚನೆ: ಯಾವುದೇ ನ್ಯೂನತೆಗಳು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕು. ಪ್ರಯಾಣಿಕರ ಸುರಕ್ಷತೆ ನಮ್ಮ ಪ್ರಥಮ ಆದ್ಯತೆ. ಪ್ರಾಣಹಾನಿಯಾದರೆ ಯಾವುದೇ ರೀತಿ ಯಿಂದಲೂ ನಷ್ಟ ಭರಿಸಲು ಸಾಧ್ಯವಿಲ್ಲ. ಈ ಕೂಡಲೇ ಬಸ್‌ಗಳಲ್ಲಿನ ಸುರಕ್ಷತೆ ಪರಿಶೀಲನೆಗೆ ತಂಡಗಳನ್ನು ರಚಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೆಎಸ್ ಆರ್‌ಟಿಸಿ, ಬಿಎಂಟಿಸಿ, ವಾಯುವ್ಯ ರಸ್ತೆ ಸಾರಿಗೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಗಳಿಗೆ ಮತ್ತು ಸಾರಿಗೆ ಇಲಾಖೆಯ ಸುರಕ್ಷತಾ ವಿಭಾಗದ ಆಯುಕ್ತರಿಗೆ ಸಚಿವರು ಸೂಚನೆ ನೀಡಿದ್ದಾರೆ.

ಭಾರತೀಯ ಕಾಫಿ ಲೋಕಪ್ರಿಯ

ಮನ್‌ಕಿ ಬಾತ್‌ನಲ್ಲಿ ಕೊಡಗಿನ ಕಾಫಿ ಬಗ್ಗೆ ಮೋದಿ ಪ್ರಸ್ತಾಪ | ಕಾಫಿ ಉದ್ಯಮಕ್ಕೆ ಉತ್ತೇಜನ ನಿರೀಕ್ಷೆ

ಅನಿಲ್ ಎಚ್.ಟಿ., ಮಡಿಕೇರಿ

ಪ್ರಧಾನಿ ಮೋದಿ ಅವರ ತಿಂಗಳಾಂತ್ಯದ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದ 127 ನೇ ಸಂಚಿಕೆಯಲ್ಲಿ ಈ ಬಾರಿ ಕೊಡಗೂ ಸೇರಿದಂತೆ ಕಾಫಿ ಉದ್ಯಮದ ಬಗ್ಗೆ ಪ್ರಸ್ತಾಪ ಮಾಡಿರುವುದು ಕಾಫಿ ಉದ್ಯಮಿಗಳ, ಕಾಫಿ ಬೆಳೆಗಾರರ ಸಂತೋಷಕ್ಕೆ ಕಾರಣವಾಗಿದೆ.

ಪ್ರತೀ ತಿಂಗಳಾಂತ್ಯದ ಸಂಚಿಕೆಯಲ್ಲಿಯೂ ಪ್ರಧಾನಿ ಮೋದಿ ವಿಭಿನ್ನ ವಿಚಾರಗಳ ಬಗೆಗೆ ತಮ್ಮ ಅಭಿಪ್ರಾಯ ಹಂಚಿಕೊಳ್ಳುವುದ ರೊಂದಿಗೆ ಯಾವುದಾದರು ಒಂದು ವಿಷಯದ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸುತ್ತಾರೆ. ಈ ಭಾನುವಾರ ಪ್ರಸಾರವಾದ ಮನದ ಮಾತು ಹೊಸ ಆವೃತ್ತಿಯಲ್ಲಿ ಕಾಫಿ ಬಗ್ಗೆ ಪ್ರಧಾನಿ ಮಾತನಾಡಿದ್ದಾರೆ. ಇದು ಕಾಫಿ ಉದ್ಯಮದಲ್ಲಿ ನವಸಂಚಲನಕ್ಕೆ ಕಾರಣವಾಗಿದೆ. ಸೂಕ್ತ ಸಮಯದಲ್ಲಿಯೇ ಮೋದಿಯವರು ಕಾಫಿ ಬಗ್ಗೆ ಪ್ರಸ್ತಾಪಿಸಿ ಕಾಫಿಯನ್ನು ಲೋಕಪ್ರಿಯವಾಗಿಸುವಲ್ಲಿ ಹೊಸ ಹೆಜ್ಜೆ ಇರಿಸಿದ್ದಾರೆ ಎಂಬ ಮಾತುಗಳು ಕಾಫಿ ಪ್ರೇಮಿಗಳಿಂದ ವ್ಯಕ್ತವಾಗಿದೆ.

ಪ್ರಧಾನಿ ಮೋದಿ ಹೇಳಿದ್ದೇನು?: ಪ್ರೀತಿಯ ದೇಶವಾಸಿಗಳೇ.., ಟೀ ಜತೆ ನನಗಿರುವ ಬೆಸುಗೆ ನಿಮಗೆಲ್ಲಾ ತಿಳಿದಿದೆ. ಆದರೆ ನಾನಿವತ್ತು ಮನ್ ಕೀ ಬಾತ್ ನಲ್ಲಿ ಕಾಫಿ ಬಗ್ಗೆ ಮಾತನಾಡುತ್ತೇನೆ. ಕಳೆದ ವರ್ಷ ನಾನು ಅರಕು ಕಾಫಿ ಬಗ್ಗೆ ಮಾತನಾಡಿದ್ದು ನಿಮಗೆ ನೆನಪಿರಬಹುದು. ಕೆಲವು ಸಮಯದ ಹಿಂದೆ ಒರಿಸ್ಸಾದ ಕೆಲವರು ಕೋರಪುಟ್ ಕಾಫಿ ಬಗ್ಗೆ ಅಭಿಪ್ರಾಯ ಹಂಚಿಕೊಂಡಿದ್ದರು. ಕೊರಪುಟ್ ಕಾಫಿ ಬಹಳ ಸ್ವಾದಿಷ್ಟವಾಗಿದೆ ಎಂದು ಕೇಳಿತಿಳಿದಿದ್ದೇನೆ. ಸ್ವಾದಿಷ್ಟತೆ ಮಾತ್ರವಲ್ಲ ಕಾಫಿ ಅನೇಕರಿಗೆ ಉಪಕಾರಿ ಕೂಡ. ಅನೇಕ ಮಹಿಳೆಯರು ಕಾಫಿ ಬೆಳೆಯುವ ಮೂಲಕ ಕಾಫಿಕೃಷಿ ನೆಚ್ಚಿಕೊಂಡಿದ್ದಾರೆ.

ಭಾರತೀಯ ಕಾಫಿ ವಿಶ್ವದಾದ್ಯಂತ ಬಹಳ ಪ್ರಸಿದ್ದಿಯಾಗಿದೆ. ಕರ್ನಾಟಕದ ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳು. ಹಾಗೇ ತಮಿಳುನಾಡಿನ ಅಣ್ಣಾಮಲೈ, ಬಿಳಿಗಿರಿ ಸೇರಿದಂತೆ ಕೆಲವು ಜಿಲ್ಲೆಗಳು. ಕೇರಳದ ವೈನಾಡು, ಮಲಬಾರ್ ಪ್ರದೇಶಗಳಲ್ಲಿ ಕಾಫಿ ಬೆಳವಣಿಗೆ ಕಂಡಿದೆ. ಭಾರತದ ಈಶಾನ್ಯ ರಾಜ್ಯಗಳಲ್ಲಿಯೂ ಉತ್ತಮವಾಗಿದೆ ಎಂದು ಕೇಳಿದ್ದೇನೆ. ಇದು ಭಾರತೀಯ ಕಾಫಿ ಉದ್ಯಮದ ಬೆಳವಣಿಗೆಗೆ ಮತ್ತಷ್ಟು ಪುಷ್ಟಿ ನೀಡುತ್ತಿದೆ. ಹೀಗಾಗಿಯೇ ಕಾಫಿ ಪ್ರಿಯರು ಹೇಳುವಂತೆ.. ಕಾಫಿಯ ಸ್ವಾದ ಎಂದರೆ ಅದು ಭಾರತದ ಕಾಫಿ! ಭಾರತದಲ್ಲಿ ಬೆಳೆದ ಕಾಫಿ ವಿಶ್ವವ್ಯಾಪಿ ಪ್ರಿಯವಾಗಿದೆ ಎಂದು ಶ್ಲಾಘಿಸಿದ್ದಾರೆ.

ಕಾಫಿ ಕ್ಷೇತ್ರದ ಭರವಸೆ

ಪ್ರಧಾನಿ ಮೋದಿಯವರು ಭಾರತೀಯ ಕಾಫಿ ಸಂಬಂಧಿತ ಮಾತನಾಡಿದ್ದು ಕಾಫಿ ಉದ್ಯಮರಂಗದಲ್ಲಿ ಹೊಸ ಉತ್ಸಾಹ ತಂದಿದೆ. ಸಾಮಾನ್ಯವಾಗಿ ಮೋದಿಯವರು ತಮ್ಮ ಜನಪ್ರಿಯ ಮನ್ ಕೀ ಬಾತ್ ನಲ್ಲಿ ಪ್ರಸ್ತಾಪಿಸಿದ ವಿಚಾರಧಾರೆಗಳು ಜಗತ್ತಿನಾದ್ಯಂತ ಗಮನ ಸೆಳೆಯುತ್ತದೆ. ಮೋದಿಯವರು ಯಾವುದೇ ವಿಚಾರ ತಿಳಿಸಿದರೂ ಅದ ಭಾರತದ ಬ್ರಾಂಡ್ ಎನಿಸಿಕೊಳ್ಳುತ್ತದೆ. ಹೀಗಾಗಿ ಕಾಫಿ ವಿಚಾರದಿಂದಾಗಿ ಭವಿಷ್ಯದಲ್ಲಿ ಭಾರತೀಯ ಕಾಫಿಯೂ ಜಗತ್ತಿನಾದ್ಯಂತ ಮಾರುಕಟ್ಟೆಯಲ್ಲಿ ಸಾಕಷ್ಟು ಬೇಡಿಕೆ ಪಡೆಯುವ ನಿರೀಕ್ಷೆ ಇದೆ. ಹಾಗೇ ಭಾರತದಲ್ಲಿಯೂ ಕಾಫಿ ಸೇವಿಸುವವರ ಸಂಖ್ಯೆ ವೃದ್ಧಿಯಾಗುವ ಸಂಭವ ಹೆಚ್ಚಾಗಿದೆ.

ಪ್ರಧಾನಿಯವರ ಮಾತು ಕಾಫಿ ಉತ್ಪಾದನಾ ವಲಯಕ್ಕೆ ಪ್ರೇರಣೆ. ಬಾಳೆಹೊನ್ನೂರು ಕಾಫಿ ಸಂಶೋಧನಾ ಕೇಂದ್ರದ ಶತಮಾನೋತ್ಸವ ಸಂದರ್ಭ ಈ ಪ್ರೇರಣೆಯ ನುಡಿಗಳು ನಮಗೆ ಮುಂದಿನ 100 ವರ್ಷಕ್ಕೆ ಸೂಕ್ತ ಸಿದ್ಧತೆ ಕೈಗೊಳ್ಳಲು ಸಹಕಾರಿಯಾಗಿದೆ. 7 ಬೀನ್ - 7 ಲಕ್ಷ ಟನ್ ಎಂಬ ವಿನೂತನ ಯೋಜನೆ ಹಮ್ಮಿಕೊಂಡಿದ್ದೇವೆ.

-ದಿನೇಶ್ ದೇವವಂದ ಕಾಫಿ ಮಂಡಳಿ ಅಧ್ಯಕ್ಷ

ದೇಶದಲ್ಲಿ ಕಾಫಿ ಉತ್ಪಾದನೆ ಹೆಚ್ಚಾಗುತ್ತಲೇ ಇದೆ. ಸೂಕ್ತ ಬೆಲೆ ಕೂಡ ಬೆಳೆಗಾರರಿಗೆ ದೊರಕಿದೆ. ಭಾರತೀಯ ಕಾಫಿ ಗುಣಮಟ್ಟದ ಬಗ್ಗೆಯೂ ಜಾಗತಿಕವಾಗಿ ಸೂಕ್ತ ಸ್ಥಾನಮಾನ ದೊರಕಿದೆ. ಭಾರತದ ಕಾಫಿಗೂ ಬೇಡಿಕೆ ದೊರಕುತ್ತಿದೆ. ಪ್ರಧಾನಿಯವರು ಕಾಫಿ ಬಗ್ಗೆ ಹೇಳಿರುವ ಮೆಚ್ಚುಗೆಯ ಮಾತುಗಳು ನಮ್ಮ ಮನಸ್ಥೈರ್ಯ ಹೆಚ್ಚಿಸುವಂತಿದೆ.

-ಕೆ.ಕೆ.ವಿಶ್ವನಾಥ್
ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್ ನಿರ್ದೇಶಕ

ಮನ್ ಕಿ ಬಾತ್‌ನಲ್ಲಿ ಕಾಫಿ ಘಮ

← ಮೊದಲಪುಟದಿಂದ

ಅಥವಾ ಕೇರಳದ ವಯ ನಾಡ್, ತಿರುವಾಂಕೂರು ಮತ್ತು ಮಲಬಾರ್ ಪ್ರದೇಶ ಗಳಾಗಿರಬಹುದು. ದೇಶದ ವಿವಿಧೆಡೆ ಬೆಳೆಯುವ ಕಾಫಿಯ ವೈವಿಧ್ಯತೆ ನಿಜಕ್ಕೂ ಗಮನಾರ್ಹ ವಾಗಿದೆ' ಎಂದು ಪ್ರಧಾನಿ ಹೇಳಿದರು.

ಇತ್ತೀಚೆಗೆ ಕೊರಾಪುಟ್ (ಒಡಿಶಾ) ಕಾಫಿ ಕೂಡ ಜನಪ್ರಿಯತೆ ಯನ್ನು ಗಳಿಸುತ್ತಿದೆ. ಕೆಲವರು, ಕಾಫಿ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಲಾಭದಾಯಕ ಕಾರ್ಪೊರೇಟ್ ಉದ್ಯೋಗಗಳನ್ನು ತೊರೆದಿದ್ದಾರೆ. ಕೆಲಸ ಬಿಟ್ಟು ಕಾಫಿ ಬೆಳೆಯಲು ಮುಂದಾದವರು ಯಶಸ್ಸು ಗಳಿಸಿದ್ದಾರೆ. ಹಲವು ಮಹಿಳೆಯರ ಜೀವನ ಸಹ ಇದರಿಂದ ಹಸನಾಗಿದೆ' ಎಂದು ಮೋದಿ ಕೊಂಡಾಡಿದ್ದಾರೆ.

ಬೆಂಗಳೂರಿನ ಉಲ್ಲೇಖ: ಬೆಂಗಳೂರನ್ನು ಕೆರೆಗಳ ನಗರ ಎಂದು ಕರೆಯಲಾಗುತ್ತದೆ. ಬೆಂಗಳೂರಿನ ಇಂಜಿನಿಯರ್ ಆಗಿರುವ ಕಪಿಲ್ ಶರ್ಮಾ ಅವರು ಕೆರೆಗಳಿಗೆ ಹೊಸ ಜೀವ ನೀಡುವ ಅಭಿಯಾನವನ್ನು ಪ್ರಾರಂಭಿಸಿದ್ದು, ಅವರ ತಂಡವು ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ 40 ಬಾವಿಗಳು ಮತ್ತು 6 ಕೆರೆಗಳನ್ನು ಪುನರುಜ್ಜೀವನ ಗೊಳಿಸಿದ್ದಲ್ಲದೆ, ಮರ ನೆಡುವ ಅಭಿಯಾನದಲ್ಲೂ ತೊಡಗಿಸಿಕೊಂಡಿದೆ. ದೃಢ ನಿಶ್ಚಯವಿದ್ದಾಗ ಬದಲಾವಣೆ ಖಂಡಿತ ಬರುತ್ತದೆ ಎಂಬುದನ್ನು ಇವರು ತೋರಿಸಿಕೊಟ್ಟಿದ್ದಾರೆ ಎಂದು ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ವಿಜಯೇಂದ್ರ ಸಿಎಂ ಆಗಲ್ಲ ನಾನು ಸಿಎಂ

ಶಾಸಕ ಬಸನಗೌಡ ಪಾಟೀಲ ಯತ್ನಾಳ್

ವಿಜಯಪುರ: ರಾಜ್ಯ ಸರಕಾರ ಅಧೋಗತಿಗೆ ತಲುಪಿದೆ. ಅವರು ಏನು ಮಾಡುತ್ತಾರೋ ಮಾಡಲಿ, ಮುಂದೆ ನಾವೇ ಅಧಿಕಾರಕ್ಕೆ ಬರುತ್ತೇವೆ. ವಿಜಯೇಂದ್ರ ಮುಖ್ಯಮಂತ್ರಿಯಾಗುವುದಿಲ್ಲ, ನಾನೇ ಮುಖ್ಯಮಂತ್ರಿಯಾಗುವೆ ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ವಿಜಯೇಂದ್ರ ದೊಡ್ಡ ಭ್ರಷ್ಟಾಚಾರ ಮಾಡಿದರೂ ಆತನನ್ನು ಕೆಲವು ವಾಹಿನಿಗಳು ಹೊಗಳುತ್ತವೆ, ರೈತ ನಾಯಕ, ಜನನಾಯಕ ಎಂದು ಹೇಳುತ್ತವೆ. ಈ ಎಲ್ಲ ವಾಹಿನಿಗಳ ಪಟ್ಟಿ ಮಾಡಿ ಇಟ್ಟುಕೊಂಡಿದ್ದೇನೆ. ನಾನು ಮುಖ್ಯಮಂತ್ರಿಯಾದರೆ ಈ ವಾಹಿನಿಯವರ ಮುಖ ಸಹ ನೋಡುವುದಿಲ್ಲ, ನೇರವಾಗಿಯೇ ಗೆಟ್ ಔಟ್ ಎನ್ನುವೆ ಎಂದರು.

ಮುಖ್ಯಮಂತ್ರಿ ಬದಲಾವಣೆ ವಿಷಯವಾಗಿ ಮುಖ್ಯಮಂತ್ರಿ ಪುತ್ರ ಯತೀಂದ್ರ ಹೇಳಿಕೆ ಮಹತ್ವದ್ದೇ, ಏಕೆಂದರೆ ಆತ ಹಾಗೂ ಸಚಿವ ಭೈರತಿ ಸುರೇಶ ಇಬ್ಬರೂ ಕಲೆಕ್ಷನ್ ಮಾಸ್ಟರ್‌ಗಳು, ಅವರು ಹೇಳಿದ್ದರಲ್ಲಿಯೇ ಸತ್ಯವಿದೆ. ಒಂದು ವೇಳೆ ಯತೀಂದ್ರ ಹೇಳಿಕೆ ಸುಳ್ಳಾದರೆ ಮುಖ್ಯಮಂತ್ರಿಗಳು ಕೂಡಲೇ ನನ್ನ ಮಗ ಹುಚ್ಚ, ಆತನ ಮಾತಿಗೆ ಅರ್ಥಕೊಡಬೇಡಿ ಎಂದು ಮುಖ್ಯಮಂತ್ರಿಗಳು ಬಹಿರಂಗವಾಗಿ ಪತ್ರಿಕೆಗಳಿಗೆ ಪ್ರಕಟಣೆ ಕೊಡಲಿ ಎಂದರು.

ಸಾಣೇಹಳ್ಳಿ, ನಿಜಗುಣಾನಂದ ಶ್ರೀಗಳನ್ನು ಜೈಲಿಗೆ ಹಾಕಿ: ಹಿಂದೂ ದೇವಾನುದೇವತೆಗಳಿಗೆ ಅಪಮಾನ, ಅಗೌರವ ತೋರುವ ನಿಜಗುಣಾ ನಂದ ಸ್ವಾಮೀಜಿ, ಹಾಗೂ ಸಾಣೇಹಳ್ಳಿ ಶ್ರೀಗಳನ್ನು ಮೊದಲು ಜೈಲಿಗೆ ಹಾಕಬೇಕು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಒತ್ತಾಯಿ ಸಿದರು. ನಿಜಗುಣಾನಂದ ಸ್ವಾಮೀಜಿ ಹಿಂದೂ ದೇವತೆಗಳ ಬಗ್ಗೆ ನಾಲಿಗೆ ಹರಿಬಿಡುತ್ತಾನೆ, ಲಕ್ಷ್ಮೀದೇವಿಯ ಬಗ್ಗೆ ಅಗೌರವ ತೋರುವ ಮಾತನಾಡಿದ್ದಾನೆ. ಹಿಂದೂ ಸಂಸ್ಕೃತಿಯನ್ನು ಅಗೌರವದಿಂದ ಕಾಣುವ ಇಬ್ಬರನ್ನು ಜೈಲಿಗೆ ಹಾಕಬೇಕು ಎಂದು ಒತ್ತಾಯಿಸಿದರು.

ಎಂಬಿಪಾ ನಾಟಕ ಕಂಪನಿ ಬಂದ್ ಆಗಲಿ: ಧರ್ಮ ಒಡೆಯುವ ಕಾರ್ಯ, ಕನ್ಹೇರಿ ಶ್ರೀ ಗಳಿಗೆ ಅಗೌರವ ತೋರುತ್ತಿರುವ ಈ ನಿಮ್ಮ ನಾಟಕ ಕಂಪನಿ ಬಂದ್ ಮಾಡಿ. ಸುಮ್ಮನೆ ಮುಖ ಮುಚ್ಚಿಕೊಂಡು ಇರಬೇಕು ಅಷ್ಟೇ. ಇದೇ ರೀತಿ ನಿಮ್ಮ ನಾಟಕ ಮುಂದುವರೆಸಿದರೆ ಹಿಂದೂಗಳು ನಿಮಗೆ ಬುದ್ಧಿ ಕಲಿಸಬೇಕಾಗುತ್ತದೆ ಎಂದು ಬಸನಗೌಡ ಪಾಟೀಲ ಯತ್ನಾಳ ಸಚಿವಎಂ.ಬಿ.ಪಾಟೀಲ್‌ಗೆ ಎಚ್ಚರಿಕೆ ನೀಡಿದ್ದಾರೆ. ಕನ್ಹೇರಿ ಶ್ರೀಗಳ ವಿಷಯದಲ್ಲಿ, ಲಿಂಗಾಯತ ಧರ್ಮದ ಪ್ರತ್ಯೇಕ ವಿಚಾರದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಹೆಸರನ್ನು ತರಬೇಡಿ ಎಂದರು.

ಹಲವರ ಭವಿಷ್ಯ ಬರೆಯಲಿರುವ ಬಿಹಾರ ಕದನ

← ಮೊದಲಪುಟದಿಂದ

ಈ ಚುನಾವಣೆಯನ್ನು ಐದು ದೃಷ್ಟಿಕೋನಗಳಿಂದ ನೋಡಬಹುದು. ಕೇಂದ್ರದಲ್ಲಿ ನಿಶ್ಚಿಂತೆಯಿಂದ ಅಧಿಕಾರ ನಡೆಸಬೇಕೆಂದರೆ ಮೋದಿ-ಶಾಗೆ ಬಿಹಾರ ಗೆಲ್ಲಲೇಬೇಕು. ಸಿಎಂ ನಿತೀಶ್ ಕುಮಾರ್ ಮತ್ತವರ ಜೆಡಿಯುಗೆ ಈ ಚುನಾವಣೆ ಅಕ್ಷರಶಃ ರಾಜಕೀಯ ಅಸಿತ್ವ ಉಳಿಸಿಕೊಳ್ಳುವ ನಿರ್ಣಾಯಕ ಹೋರಾಟವಾಗಲಿದೆ. ಗೆದ್ದರೆ ನೆಮ್ಮದಿ, ಇಲ್ಲವಾದಲ್ಲಿ ಭವಿಷ್ಯ ಅಯೋಮಯ. ಅದೇ ರೀತಿ, ಅಧಿಕಾರದಿಂದ ದೂರ ಇದ್ದು, ಆಡಳಿತದ ಮೇಲೆ ಹತೋಟಿ ಕಳೆದುಕೊಂಡ ಆರ್‌ಜೆಡಿಗೆ ಬಿಹಾರದಲ್ಲಿ ತೇಜಸ್ವಿ ಯಾದವ್ ನಾಯಕತ್ವಕ್ಕೆ ಬೂಸ್ಟ್ ನೀಡಲು ಮತ್ತು ಲಾಲೂ ಕುಟುಂಬದ ಪ್ರಭಾವ ಉಳಿಸಿಕೊಳ್ಳಲು ಈ ಫಲಿತಾಂಶ ಮದ್ದಾಗ ಬಲ್ಲದು. 35 ವರ್ಷಗಳಿಂದ ಬಿಹಾರ ಮತದಾರನ ಅವಗಣನೆಗೆ ಒಳಗಾಗಿರುವ ಕಾಂಗ್ರೆಸ್, ಇಲ್ಲಿ ನಿರೀಕ್ಷೆಗೂ ಮೀರಿದ ಫಲಿತಾಂಶ ಕಂಡುಕೊಂಡರೆ, ರಾಷ್ಟ್ರಮಟ್ಟದಲ್ಲಿ ಇಂಡಿ ಒಕ್ಕೂಟದ ನಾಯಕತ್ವ ವಹಿಸಿಕೊಳ್ಳಲು ಪ್ರಾದೇಶಿಕ ಪಕ್ಷಗಳೊಂದಿಗೆ ಚೌಕಾಸಿ ಮಾಡಬಹುದು. ಚುನಾವಣಾ

ರಣನೀತಿಕಾರನನ್ನು ರಾಜಕಾರಣಿಯಾಗಿ ಬಿಹಾರದ ಜನ ಸ್ವೀಕರಿಸಿದರೆ, ಹೊಸ ಜನ ಸುರಾಜ್ ಪಕ್ಷದ ನಾಯಕ ಪ್ರಶಾಂತ್ ಕಿಶೋರ್ ತಮ್ಮ ಪಕ್ಷದ ಬಾಹುಗಳನ್ನು ಬೇರೆಡೆಗೆ ವಿಸ್ತರಿಸಲು ಇದು ನಾಂದಿ ಹಾಡಬಹುದು. ಬಿಹಾರ ಜನರೇ ಒಪ್ಪದಿದ್ದರೆ, ಅವರ ಭವಿಷ್ಯ ಕಷ್ಟ ಎನಿಸಲಿದೆ. ಜೆಡಿಯುವನ್ನು ಮಕಾಡೆ ಮಲಗಿಸಿ, ಆ ಸ್ಥಾನವನ್ನು ತಾನು ಅಕ್ರಮಿಸಿಕೊಳ್ಳಬೇಕು ಎಂಬ ಹಪಹಪಿಕೆಯಲ್ಲಿರುವ ಚಿರಾಗ್ ಪಾಸ್ವಾನ್‌ಗೂ, ಸಿಎಂ ಕುರ್ಚಿಗೆ ಚೌಕಾಶಿ ಮಾಡಲು ಇದು ಉತ್ತಮ ಅವಕಾಶ ಆಗಬಲ್ಲದು.

ತೇಜಸ್ವಿ ಯಾದವ್ ಇಂಡಿ ಒಕ್ಕೂಟದ ಸಿಎಂ ಅಭ್ಯರ್ಥಿ. ವಿಕಾಸ್‌ಶೀಲ್ ಇನ್ಸಾನ್ ಪಾರ್ಟಿಯ ಮುಖೇಶ್ ಸಹಾನಿ ಅವರನ್ನೂ ಡಿಸಿಎಂ ಅಭ್ಯರ್ಥಿ ಎಂದು ಅಧಿಕೃತವಾಗಿ ಘೋಷಿಸಲಾಗಿದೆ. ಎನ್‌ಡಿಎ ಮೈತ್ರಿಕೂಟ ನಿತೀಶ್ ಕುಮಾರ್ ನಾಯಕತ್ವದಲ್ಲಿ ಚುನಾವಣೆ ಎದುರಿಸುತ್ತಿದ್ದರೂ, ಅವರು ಮುಂದಿನ ಸಿಎಂ ಆಗಲಿದ್ದಾರೆ ಎಂದು ಬಿಜೆಪಿ ತಪ್ಪಿಯೂ ಹೇಳುತ್ತಿಲ್ಲ. ಹೀಗಾಗಿ, ಬಿಜೆಪಿ ಮತ್ತು ಚಿರಾಗ್ ಪಾಸ್ವಾನ್‌ರ ಎಲ್‌ಜೆಪಿಯ ಒಳ ಲೆಕ್ಕಾಚಾರವೇನು ಎಂಬುದು ಬಹುಚರ್ಚಿತ ವಿಷಯ. ಸದ್ಯ ಬಿಜೆಪಿಗಂತೂ ಮೋದಿಯೇ ಆಧಾರ. ಹಾಗೇ ಡಬಲ್ ಎಂಜಿನ್ ಸರಕಾರದ ಲಾಭಗಳನ್ನು ಮುಂದಿಟ್ಟುಕೊಂಡು ಜನರಲ್ಲಿ ಮತ ಕೇಳಲಾಗುತ್ತಿದೆ.

ಪಿಕೆ ಪ್ರಭಾವಳಿ: 1995ರ ನಂತರದ ಚುನಾವಣೆಗಳಲ್ಲಿ ಆರ್.ಜೆ.ಡಿ., ಜೆಡಿಯು, ಬಿಜೆಪಿ ಮತ್ತು ಪಾಸ್ವಾನ್ ಕುಟುಂಬದ ಎಲ್.ಜೆ.ಪಿ. ಪಕ್ಷಗಳು ಹೆಚ್ಚು ಸದ್ದು ಮಾಡುತ್ತಿದ್ದವು. ಜೀತನ್ ರಾಮ್ ಮಾಂಜಿಯ ಹಿಂದೂಸ್ತಾನಿ ಅವಾಮಿ ಮೋರ್ಚಾ ಮತ್ತು ಉಪೇಂದ್ರ ಖುಶ್ವಾಹರ ಆರ್.ಎಲ್.ಎಸ್.ಪಿ. ಪಕ್ಷಗಳು ಬೆರಳೆಣಿಕೆ ಸೀಟುಗಳಿಗಷ್ಟೇ ಸೀಮಿತವಾಗಿ ಹೋರಾಟ ಮಾಡುತ್ತಿದ್ದವು. ಆದರೆ, ಈ ಬಾರಿ 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು 2015ರಲ್ಲಿ ನಿತೀಶ್ ಕುಮಾರ್ ಅವರ ಚುನಾವಣಾ ರಣನೀತಿಕಾರನಾಗಿ ಕೆಲಸ ಮಾಡಿದ್ದ ಪ್ರಶಾಂತ್ ಕಿಶೋರ್ (ಪಿಕೆ) ಜನ ಸುರಾಜ್ ಪಕ್ಷದ ಮೂಲಕ ಎಂಟ್ರಿ ಕೊಟ್ಟಿದ್ದು, ರಾಜ್ಯಾದ್ಯಂತ ಸಂಚಲನ ಎಬ್ಬಿಸಿದ್ದಾರೆ. ಹೇಳಿ ಕೇಳಿ ಇದು ಡಿಜಿಟಲ್ ಮೀಡಿಯಾ ಯುಗ. ನಗರ, ಪಟ್ಟಣ, ಗ್ರಾಮ ಗ್ರಾಮಗಳಿಗೆ ಭೇಟಿ ನೀಡುವುದಲ್ಲದೆ, ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಹರಿತದ ಮಾತುಗಳಿಂದ ಪ್ರಶಾಂತ್ ಕಿಶೋರ್ ಜನರ ಗಮನಸೆಳೆಯುತ್ತಿದ್ದಾರೆ. ಅವರ ಟಿವಿ ಮತ್ತು ಯುಟ್ಯೂಬ್ ಸಂದರ್ಶನಗಳೇ ಹೆಚ್ಚೆಚ್ಚು ಟ್ರೆಂಡ್ ಆಗುತ್ತಿವೆ. ಆದರೆ ಇವೆಲ್ಲ ವೋಟುಗಳಾಗಿ ಪರಿವರ್ತನೆಯಾದರಷ್ಟೇ ಲಾಭ. ಜನ್ ಸುರಾಜ್ ಹೊಸ ಪಕ್ಷವಾಗಿರುವುದರಿಂದ ಮತ್ತು ಅವರ ವಿರುದ್ಧ ಭ್ರಷ್ಟಾಚಾರ ಅಥವಾ ದುರಾಡಳಿತದ ಆರೋಪ ಮಾಡಲು ವಿಷಯಗಳು ಸಿಗದಿರುವುದೂ ಆರ್.ಜೆ.ಡಿ., ಬಿಜೆಪಿ ಮತ್ತು ಜೆಡಿಯು ತಲೆನೋವನ್ನು ಹೆಚ್ಚಿಸಿದೆ. ಹಾಗಂತ ಈ ಮೂರು ಪಕ್ಷಗಳ ಸಂಘಟನೆಯ ವ್ಯಾಪ್ತಿ ದೊಡ್ಡದಿರುವುದರಿಂದ ಜನ ಸುರಾಜ್ ಗೆ ಇವುಗಳ ಸಂಘಟನಾ ಶಕ್ತಿ ಬಲಹೀನಗೊಳಿಸಿ ಮುನ್ನುಗ್ಗುವುದು ಸುಲಭ ಸಾಧ್ಯವಲ್ಲ. ಆದರೆ ಯುವಕರು ಪ್ರಶಾಂತ್ ಕಿಶೋರ್‌ರನ್ನು ಭರವಸೆಯ ಕಂಗಳಿಂದ ನೋಡುತ್ತಿರುವುದು ಸಹಜವಾಗಿಯೇ ಎದುರಾಳಿಗಳನ್ನು ಚಿಂತೆಗೆ ತಳ್ಳಿದೆ. ಸ್ವಚ್ಛ ರಾಜಕಾರಣ, ಬಿಹಾರಿ ಅಸ್ಮಿತೆ, ವಲಸೆ ನಿವಾರಣೆ, ಉದ್ಯೋಗ ಸೃಷ್ಟಿ ಹಾಗೂ ಅಭಿವೃದ್ಧಿ ಬಗ್ಗೆ ವಿಸ್ತೃತವಾಗಿ ಮಾತನಾಡುತ್ತಿರುವ ಪಿಕೆ ಯಾರ ಮತಗಳನ್ನು ಕಟ್ ಮಾಡುತ್ತಾರೆ ಎನ್ನುವುದು ಕುತೂಹಲಕರ.

ಲಾಲೂ-ಆಲೂ: ಲಾಲೂ ಪ್ರಸಾದ್ ಯಾದವ್‌ಗೆ ಈಗಲೂ ಯಾದವ-ಮುಸ್ಲಿಂ ಮತಗಳ ಶಕ್ತಿ ಬೆನ್ನಿಗಿದೆ. ಮೇವು ಹಗರಣದಲ್ಲಿ ಅಪರಾಧಿಯಾಗಿ ಜೈಲು ಸೇರಿ ಹೈರಾಣಾದರೂ, ಲಾಲೂ ಇಲ್ಲದ ಬಿಹಾರ ರಾಜಕೀಯ ಇಲ್ಲ. 'ಜಬ್ ತಕ್ ಸಮೋಸೆ ಮೇ ರಹೇಗಾ ಆಲೂ, ತಬ್ ತಕ್ ರಹೇಗಾ ಬಿಹಾರ್ ಮೇ ಲಾಲೂ' ಎನ್ನುವುದು ಬಿಹಾರದಲ್ಲಿ ಮನೆ ಮಾತು. ತನಗೆ ಸ್ಪರ್ಧಿಸುವ ಅವಕಾಶ ಇಲ್ಲದಿದ್ದರೂ ಪುತ್ರ ತೇಜಸ್ವಿ ಯಾದವ್ ರನ್ನು ಮುಂದಿಟ್ಟು ಆಡಳಿತದ ಮೇಲೆ ಕಂಟ್ರೋಲ್ ಇಟ್ಟುಕೊಳ್ಳುವ ಯತ್ನ ಮಾಡುತ್ತಲೇ ಇರುತ್ತಾರೆ. ಆದರೆ, ಆಡಳಿತದಲ್ಲಿ ಲಾಲೂ ವಿಪರೀತ ಹಸ್ತಕ್ಷೇಪದಿಂದಲೇ ನಿತೀಶ್‌ಗೆ ಕಿರಿಕಿರಿಯಾಗಿ, ಲಾಲೂವಿಗಿಂತ ಬಿಜೆಪಿಯೇ ವಾಸಿ ಎಂದು ಎರಡೆರಡು ಬಾರಿ ಬಿಜೆಪಿಯನ್ನು ಮರು-ಮದುವೆಯಾದರು. 2015ರಲ್ಲಿ ಲಾಲು-ನಿತೀಶ್ ಒಗ್ಗೂಡಿ, ಬಿಜೆಪಿ ಸೋಲಿಸಲು ಮೈತ್ರಿ ಮಾಡಿಕೊಂಡಿದ್ದರು. 1995ರಿಂದ ಲಾಲು ವಿರುದ್ಧ ಕತ್ತಿ ಮಸೆದು, ನಂತರ 2005ರಲ್ಲಿ ಅಧಿಕಾರದ ಕುರ್ಚಿ ಏರಿದ ನಿತೀಶ್, ಕೊನೆಗೆ ಅದೇ ಲಾಲೂವನ್ನು ಅಪ್ಪಿಕೊಂಡು ಮುದ್ದಾಡಿದ ಅಸಾಮಾನ್ಯ ಬೆಳವಣಿಗೆಗೆ ಬಿಹಾರ ಸಾಕ್ಷಿಯಾಗಿತ್ತು. ಮೋದಿ ಮೇಲಿನ ಮುನಿಸು ನಿತೀಶ್‌ರನ್ನು ಲಾಲೂ ಸಖ್ಯದ ಕಡೆ ವಾಲಿಸಿತ್ತು. 2014ರ ಲೋಕಸಭೆ ಫಲಿತಾಂಶದ ಮೂಲಕ ಮೋದಿ ಎಬ್ಬಿಸಿದ್ದ ಬಿರುಗಾಳಿಗೆ ಈ ಲಾಲೂ-ನಿತೀಶ್ ಮೈತ್ರಿ ಕೊಚ್ಚಿ ಹೋಗಲಿದೆ ಎಂದು ಸಮೀಕ್ಷೆಗಳೆಲ್ಲವೂ ಊಹಿಸಿದ್ದವು. ಆದರೆ, ಚುನಾವಣೆ ಪ್ರಚಾರ ನಡೆಯುತ್ತಿದ್ದ ವೇಳೆ ಆರ್.ಎಸ್.ಎಸ್ ಮುಖ್ಯಸ್ಥ ಡಾ. ಮೋಹನ್ ಭಾಗವತ್ ಅವರು ಮೀಸಲಾತಿ ನೀತಿಯ ಮರು ವಿಮರ್ಶೆ ಅಗತ್ಯ ಎಂಬ ಹೇಳಿಕೆ ನೀಡಿದ್ದನ್ನೇ ಬ್ರಹ್ಮಾಸ್ತ್ರವನ್ನಾಗಿ ಬಳಸಿಕೊಂಡ ಲಾಲೂ-ನಿತೀಶ್, ತಮ್ಮ ಪ್ರಚಾರಗಳ ಉದ್ದಕ್ಕೂ ಬಿಜೆಪಿಯನ್ನು ಈ ವಿಷಯದಲ್ಲೇ ಮೂಲೆಗುಂಪು ಮಾಡಿದರು. ಬಿಜೆಪಿ-ಆರ್‌ಎಸ್‌ಎಸ್ ಎಂದಿಗೂ ಮೀಸಲಾತಿ ವಿರೋಧಿ, ಅವರಿಗೆ ಹಿಂದುಳಿದ ವರ್ಗಗಳ ಏಳಿಗೆ ಬೇಕಾಗಿಲ್ಲ. ಇದು ಬ್ರಾಹ್ಮಣ ಮತ್ತು ಪುರೋಹಿತಶಾಹಿ ಮನಸ್ಥಿತಿ ಎಂದು ಲಾಲು ಕಂಡ-ಕಂಡಲ್ಲೆಲ್ಲಾ ಕಿಡಿಕಾರಿದರು. ನಿತೀಶ್ ಕೂಡ ದನಿಗೂಡಿಸಿ ಹಿಂದುಳಿದವರು, ದಲಿತರು, ಮುಸ್ಲಿಂಮರು ಒಗ್ಗೂಡಿ ಬಿಜೆಪಿ ಸೋಲಿಸಬೇಕು ಎಂದು ಕರೆಕೊಟ್ಟರು. ಭಾಗವತರ ಹೇಳಿಕೆ ಅಂದು ಬಿಜೆಪಿಗೆ ನುಂಗಲಾರದ ತುತ್ತಾಗಿತ್ತು. ನಂತರದಲ್ಲಿ, ಸಂಘ ಅಥವಾ ಬಿಜೆಪಿ ಎಷ್ಟೇ ಸ್ಪಷ್ಟೀಕರಣ ನೀಡಿದರೂ, ಪ್ರಯೋಜನಕ್ಕೆ ಬಂದಿರಲಿಲ್ಲ. ಜಾತಿ ರಾಜಕೀಯವೇ ಜೀವಾಳ ಎನಿಸಿರುವ ರಾಜ್ಯವೊಂದರ ಚುನಾವಣೆ ಸಂದರ್ಭದಲ್ಲಿ ಮೀಸಲಾತಿ ಎಂಬ ಜೇನುಗೂಡಿಗೆ ಕೈ ಹಾಕಿದರೆ ಏನಾಗುತ್ತದೆ ಎಂಬ ಅರಿವು ಬಿಜೆಪಿ ಮತ್ತು ಸಂಘದ ಇಬ್ಬರಿಗೂ ಬಂದಿತ್ತು.

ಜಾತಿ-ಧರ್ಮ ಸಮರ ಲೆಕ್ಕಾಚಾರ

ತಾನು ಹಿಂದುಳಿದವ, ಬ್ರಾಹ್ಮಣವಾದಿಗಳು ನನ್ನನ್ನು ತುಳಿಯುತ್ತಿದ್ದಾರೆ ಎಂದು ಮೇವು ಹಗರಣದಲ್ಲಿ ಸಿಲುಕಿದ್ದಾಗಲೂ ಲಾಲೂ ಯಾದವ್, ಇದು ಮೇಲ್ಜಾತಿಯವರ ಪಿತೂರಿ ಎಂಬ ನರೇಟಿವ್ ರೂಪಿಸಲು ಯತ್ನಿಸಿದ್ದರು. 1997ರಲ್ಲಿ ಮೇವು ಹಗರಣದ ತನಿಖೆಯ ಅಧಿಕೃತ ಆರಂಭಕ್ಕೆ ಕೊಲ್ಕತ್ತಾ ಮೂಲದ ಯು.ಎನ್. ಬಿಸ್ವಾಸ್ ಎಂಬ ಸಿಬಿಐ ನಿರ್ದೇಶಕರು ಬಂದಿದ್ದರು. ಸಿಬಿಐ ತನಿಖೆಗೆ ಕೋರ್ಟ್ ಆದೇಶ ನೀಡಿದ್ದಕ್ಕೆ ಅದಾಗಲೇ ಲಾಲೂ ಕೆಂಡಾಮಂಡಲಗೊಂಡಿದ್ದರು. ತನಿಖೆಯ ಒಂದು ಸಂದರ್ಭದಲ್ಲಿ ಬಿಸ್ವಾಸ್ ಜತೆ ಮಾತಾಡಿದ ಲಾಲೂ, ''ನೋಡಿ ಬಿಸ್ವಾಸ್ ನೀವು ಬಂಗಾಳದ ಹಿಂದುಳಿದ ಜಾತಿಗೆ ಸೇರಿದವರು. ನಾನು ಬಿಹಾರದಲ್ಲಿ ಹಿಂದುಳಿದ ಜಾತಿಯವನು. ಈ ಮೇಲ್ಜಾತಿಯವರ ಪಿತೂರಿಯವರ ಪಿತೂರಿಯನ್ನೂ ನಾವಿಬ್ಬರೂ ಒಟ್ಟಾಗಿ ಸೇರಿ ಏಕೆ ಬಯಲು ಮಾಡಬಾರದು? ಸಣ್ಣ ಪುಟ್ಟ ಲೂಟಿ ನಡೆದಿದೆ. ಆದರೆ, ಇದು ನನ್ನ ಗಮನಕ್ಕೆ ಬಾರದೆ ನಡೆದಿದೆ. ಇದನ್ನು ನಾವು ಬಯಲು ಮಾಡೋಣ, ಮೇಲ್ಜಾತಿಯವರ ಕುತಂತ್ರವನ್ನು ಜನರ ಮುಂದಿಡೋಣ'' ಎಂದು ತಿಳಿಸಿದ್ದರು. ಆದರೆ, ಇದಕ್ಕೆ ಕಿವಿಗೊಡದ ಖಡಕ್ ಅಧಿಕಾರಿ ಬಿಸ್ವಾಸ್, ತನಿಖೆ ಮುಂದುವರಿಸಿದ್ದರು. ತನ್ನ ಮೇಲಿನ ಆರೋಪಗಳನ್ನು ಸುಳ್ಳಾಗಿಸಲು ಲಾಲೂ ಯಾವ ಹಂತಕ್ಕೆ ಹೋಗಲೂ ಅಂದು ಸಿದ್ಧರಿದ್ದರು. ಆದರೆ, ಪರಿಸ್ಥಿತಿಗಳು ಅವರ ಪರ ಇರಲಿಲ್ಲ. ತನ್ನನ್ನು ಹಿಂದುಳಿದ ವರ್ಗಗಳ ಚಾಂಪಿಯನ್ ಎಂದು ಬಿಂಬಿಸಿಕೊಂಡರೂ ಲಾಲೂ ಪಾಳೆಗಾರಿಕೆ ಮನಸ್ಥಿತಿ ಈಗಲೂ ಬದಲಾಗಿಲ್ಲ. ಅಧಿಕಾರಕ್ಕೆ ಬರಲು ಹಿಂದುಳಿದ ಮಂದಿ ಬೇಕು. ಅಧಿಕಾರಕ್ಕೆ ಬಂದ ನಂತರ ಯಾದವರ ಉದ್ಧಾರ ಅಷ್ಟೇ ಎಂದು ಬಿಹಾರದ ಯಾದವೇತರರು ದೂರಿದ್ದಕ್ಕೆ ನಾನು ಹಲವು ಬಾರಿ ಕಿವಿಯಾಗಿದ್ದುಂಟು. ಕಾರ್ಯಕರ್ತರು, ಮುಖಂಡರೊಂದಿಗೆ ಅವರ ಮತ್ತು ಕುಟುಂಬದ ವರ್ತನೆಗಳು ಕೂಡ ಇದನ್ನು ಎತ್ತಿ ತೋರಿಸುತ್ತವೆ. ಹಾಗಂತ ಲಾಲೂ ಮತ್ತು ಕುಟುಂಬವನ್ನು ಬಿಹಾರ ರಾಜಕಾರಣದಿಂದ ದೂರ ಇಡಲು ಸಾಧ್ಯವೇ ಇಲ್ಲ. ಹೇಗೆ ಕಾಂಗ್ರೆಸ್‌ಗೆ ಗಾಂಧಿ ಕುಟುಂಬ ಅನಿವಾರ್ಯವೋ, ಹಾಗೆ ಆರ್.ಜೆ.ಡಿ.ಗೆ ಲಾಲೂ ಅಸ್ತಿತ್ವವೇ ಆಧಾರ.

2015ರಲ್ಲಿ ಲಾಲು ನೀಡಿದ್ದ ಒಂದು ಹೇಳಿಕೆ ಪ್ರಚಾರ ಕಣದಲ್ಲಿ ಗದ್ದಲ ಎಬ್ಬಿಸಿತ್ತು. ಹಿಂದೂಗಳೇನು ದನದ ಮಾಂಸ ತಿನ್ನಲ್ವೇ? ಬಡವರು ಅನಿವಾರ್ಯವಾಗಿ ಗೋಮಾಂಸ ತಿನ್ನಬೇಕು/ತಿನ್ನುತ್ತಾರೆ. ದೇಶದ ಹೊರಗೆಯೂ ಗೋಮಾಂಸ ತಿನ್ನಲಾಗುತ್ತದೆ ಎಂದು ಲಾಲು ನೀಡಿದ್ದ ಹೇಳಿಕೆಯನ್ನೇ ಬಿಜೆಪಿ ಅಸ್ತ್ರ ಮಾಡಿಕೊಂಡಿತ್ತು. ಮೀಸಲಾತಿ ವಿರೋಧಿ ಎಂಬ ಹಣೆಪಟ್ಟಿ ಕಡಿಮೆ ಮಾಡಲು ಬಿಜೆಪಿಯವರು, 'ಹಿಂದೂ ಗಾಯ್ ಖಾತಾ ಹೇ ಕ್ಯಾ' ಎಂಬ ರಾಜಕೀಯ ನಿರೂಪಣೆಯನ್ನು ಜನರ ಮುಂದೆ ತೇಲಿಬಿಟ್ಟಿದ್ದರು. ಆರ್.ಜೆ.ಡಿ.ಯ ಮುಸ್ಲಿಂ ಮತಗಳ ಕ್ರೋಢೀಕರಣಕ್ಕೆ ಪ್ರತಿಯಾಗಿ ಹಿಂದುಗಳ ಒಗ್ಗಟ್ಟಿಗೆ ಕೂಡ ಬಿಜೆಪಿ ಈ ತಂತ್ರ ಅನುಸರಿಸಿತ್ತು. 2015ರ ನವೆಂಬರ್ ಚುನಾವಣೆಯ 5ನೇ ಚರಣದ ಮತದಾನದ ಹಿಂದಿನ ದಿನ ಪತ್ರಿಕೆಯೊಂದರ ಮುಖಪುಟದಲ್ಲಿ ಮಹಿಳೆಯೊಬ್ಬರು ಕರುವೊಂದನ್ನು ಅಪ್ಪಿಕೊಂಡು, ಗೋಭಕ್ಷಣೆ ಕುರಿತ ಮಿತ್ರ ಲಾಲೂ ಹೇಳಿಕೆ ನೀವು ಒಪ್ಪುತ್ತೀರಾ ಎಂದು ಸಿಟ್ಟಿನಿಂದ ಸಿಎಂ ನಿತೀಶ್ ಕುಮಾರ್‌ಗೆ ಬೈಯುತ್ತಿದ್ದ ಚಿತ್ರವೊಂದು ಬಿಜೆಪಿ ಹೆಸರಲ್ಲಿ ಪ್ರಕಟವಾಗಿ, ಭಾರಿ ಕೋಲಾಹಲ ಸೃಷ್ಟಿಯಾಗಿತ್ತು.

ಆರ್‌ಎಸ್‌ಎಸ್ ಸಡ್ಡು

← ಮೊದಲಪುಟದಿಂದ

ಸಂಘದಿಂದ ಈ ಬಗ್ಗೆ ಯಾವುದೇ ನಿರ್ದೇಶನ ವಿಲ್ಲದಿದ್ದರೂ, ಬಲ ಪ್ರದರ್ಶನಕ್ಕೆ ಹೆಚ್ಚು ಜನರು ಸೇರುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಖರ್ಗೆ ಕಿಡಿ: ಚಿತ್ತಾಪುರದಲ್ಲಿ ಪಥ ಸಂಚಲನ ನಡೆಸಿಯೇ ಸಿದ್ಧ ಎನ್ನುವ ಕಲ್ಲಡ್ಕ ಪ್ರಭಾಕರ್ ಭಟ್ ಅವರ ಹೇಳಿಕೆಗೆ ಕಿಡಿಕಾರಿರುವ ಸಚಿವ ಪ್ರಿಯಾಂಕ್ ಖರ್ಗೆ, 'ಕಲ್ಲಡ್ಕ ಪ್ರಭಾಕರ್ ಭಟ್ ಆಗಲಿ, ಅವರಪ್ಪ ಆಗಲಿ ಕಾನೂನು ಎಲ್ಲರಿಗೂ ಒಂದೇ'. ಕಲ್ಲಡ್ಕ ಪ್ರಭಾಕರ್ ಭಟ್ ಯಾರು? ಕೋರ್ಟ್‌ಗಿಂತ ದೊಡ್ಡವರೇ? ಕೋರ್ಟ್ ಅನುಮತಿ ಸಿಗದೇ ಪಥಸಂಚಲನ ಮಾಡಿದರೆ ಸರಕಾರ ವೇನು ಕತ್ತೆ ಕಾಯುತ್ತಿರುತ್ತದೆಯೇ? ಎಂದು ಆಕ್ರೋಶ ಹೊರ ಹಾಕಿದರು.

ಆರ್‌ಎಸ್‌ಎಸ್ ನೋಂದಣಿ ಆಗಿದೆಯೇ ಎಂದು ಕೇಳಿದರೆ ತಪ್ಪೇ? ದಾಖಲೆ ತಂದು ಮುಖದ ಮೇಲೆ ಬಿಸಾಡಲಿ. ಇವರಿಗೆ ದೇಣಿಗೆ ಎಲ್ಲಿಂದ ಬರುತ್ತಿದೆ? ದೇವಾಲಯದ ಹುಂಡಿ ತೆಗೆಯಬೇಕಾದರೂ ತಹಶೀಲ್ದಾರ್ ಬರಬೇಕು, ಎಲ್ಲವನ್ನೂ ಪಾರದರ್ಶಕವಾಗಿ ಮಾಡುತ್ತಾರೆ. ಹೀಗಿರುವಾಗ ಆರ್‌ಎಸ್‌ಎಸ್‌ಗೆ ದೇಣಿಗೆ ಎಲ್ಲಿಂದ ಬರುತ್ತಿದೆ ಎನ್ನುವುದು ತಿಳಿಯ ಬೇಕಲ್ಲವೇ ಎಂದು ಪ್ರಶ್ನಿಸಿದರು.

ಮೌನವಾಗಿರಲು ನಿರ್ದೇಶನ?

ಆರ್‌ಎಸ್‌ಎಸ್ ನಿರ್ಬಂಧಕ್ಕೆ ಸರಕಾರ ಹಲವು ರೀತಿಯ ಕ್ರಮವಹಿಸುತ್ತಿದ್ದರೂ, ಈ ವಿಷಯದಲ್ಲಿ ಬಿಜೆಪಿ ನಾಯಕರು ಮೌನವಹಿಸಿದ್ದಕ್ಕೆ ಕಾರಣವೇನು ಎನ್ನುವ ಗೊಂದಲ ಅನೇಕರಲ್ಲಿತ್ತು. ಆದರೀಗ, ಈ ವಿಷಯದಲ್ಲಿ ಬಿಜೆಪಿ ನಾಯಕರು ಮಧ್ಯ ಪ್ರವೇಶಿಸುವ ಅಗತ್ಯವಿಲ್ಲ. ಸಂಘದ ವಿರುದ್ಧದ ಈ ನಡೆಯನ್ನು ಸಂಘವೇ ಸಮರ್ಥವಾಗಿ ಎದುರಿಸಲಿದೆ. ಆದ್ದರಿಂದ ಈ ವಿಷಯದಲ್ಲಿ ಬಿಜೆಪಿ ನಾಯಕರ ಮಧ್ಯಪ್ರವೇಶ ಬೇಡ ಎಂದು ಸಂಘ ತಿಳಿಸಿದೆ ಎನ್ನಲಾಗಿದೆ.

...ಬೆದರಿಕೆಗೆ ಜಗ್ಗದ ಭಾರತ

← ಮೊದಲಪುಟದಿಂದ

ಜುಲೈನಲ್ಲಿ ದಿನವೊಂದಕ್ಕೆ 15. 9 ಲಕ್ಷ ಬ್ಯಾರೆಲ್, ಆಗಸ್ಟ್‌ನಲ್ಲಿ 16.8 ಲಕ್ಷ ಸೆಪ್ಟೆಂಬರ್‌ನಲ್ಲಿ ದಿನಕ್ಕೆ ಸರಾಸರಿ 15.4 ಲಕ್ಷ ಬ್ಯಾರೆಲ್ ಕಚ್ಚಾತೈಲ ಖರೀದಿಸಲಾಗಿತ್ತು. ಅಕ್ಟೋಬರ್ ತಿಂಗಳ ಆಮದು ದಿನಕ್ಕೆ ಸರಾಸರಿ 18 ಲಕ್ಷ ಬ್ಯಾರೆಲ್‌ಗಳಾಗಿದ್ದು, ಕಡಿತ ಅಥವಾ ನೀತಿ ಬದಲಾವಣೆಯ ಯಾವುದೇ ಲಕ್ಷಣಗಳಿಲ್ಲ ಎಂದು ರಿಟೋಲಿಯಾ ಹೇಳಿದ್ದಾರೆ.

ಇದೇ ವೇಳೆ ಅಮೆರಿಕದ ತೈಲ ಪೂರೈಕೆಯಲ್ಲೂ ಏರಿಕೆ ಕಂಡುಬಂದಿದೆ. ಅಕ್ಟೋಬರ್‌ನಲ್ಲಿ ಅಮೆರಿಕದಿಂದ ದಿನವೊಂದಕ್ಕೆ 65.5 ಸಾವಿರ ಬ್ಯಾರಲ್ ಕಚ್ಚಾ ತೈಲವನ್ನು ಭಾರತ ಆಮದು ಮಾಡಿಕೊಂಡಿದೆ. ಇದು ಸೆಪ್ಟೆಂಬರ್ ತಿಂಗಳಲ್ಲಿ 20.7 ಬ್ಯಾರಲ್‌ಗಳಷ್ಟಿತ್ತು. ಇದೇ ವೇಳೆ ಅಕ್ಟೋಬರ್‌ನಲ್ಲಿ ಸಾಂಪ್ರದಾಯಿಕ ಪೂರೈಕೆದಾರರಾದ ಇರಾಕ್ ಮತ್ತು ಸೌದಿ ಅರೇಬಿಯಾದಿಂದ ಕ್ರಮವಾಗಿ 96.5 ಸಾವಿರ ಮತ್ತು 84.1 ಸಾವಿರ ಬ್ಯಾರಲ್ ಕಚ್ಚಾತೈಲ ಖರೀದಿ ನಡೆದಿದೆ ಎಂದು ಕೆಪ್ಲರ್ ದತ್ತಾಂಶ ಹೇಳಿದೆ.

ರಷ್ಯಾದ ಅಗ್ಗದರದ ತೈಲದ ಕಾರಣ ಭಾರತದ ಕಚ್ಚಾತೈಲ ಆಮದು ಮೊತ್ತ ಕಳೆದ ವರ್ಷದ ಪೂರ್ವಾರ್ಧ (ಏಪ್ರಿಲ್-ಸೆಪ್ಟೆಂಬರ್)ಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷ ಶೇ. 14.7 ರಷ್ಟು ಇಳಿದು 60.7 ಬಿಲಿಯನ್‌ಗೆ ಇಳಿದಿದೆ ಎಂದು ಕೆಪ್ಲರ್ ತಿಳಿಸಿದೆ. ಕಳೆದ ವರ್ಷ ಇದು 71.2 ಬಿಲಿಯನ್ ಡಾಲರ್ ಆಗಿತ್ತು. 2025ರ ಸೆಪ್ಟೆಂಬರ್‌ನಲ್ಲಿ ಭಾರತದ ಕಚ್ಚಾ ತೈಲದ ಸರಾಸರಿ ಬೆಲೆ ಬ್ಯಾರಲ್‌ಗೆ 69.61 ಡಾಲರ್‌ಆಗಿತ್ತು, ಕಳೆದ ವರ್ಷ ಇದರ ಬೆಲೆ ಬ್ಯಾರಲ್‌ಗೆ 73.69 ಡಾಲರ್ ಇತ್ತು.

ಅಸಲಿ ಚಿನ್ನ ಕದ್ದು, ದೇಗುಲಕ್ಕೆ ತಾಮ್ರದ ಬಾಗಿಲು!

- **ಶಬರಿಮಲೆ ಚಿನ್ನ ಕಳ್ಳತನ ಪ್ರಕರಣಕ್ಕೆ ತಿರುವು**
- **2019ರಲ್ಲಿಯೇ ಸಿನಿಮಿಯಾ ರೀತಿ ಚಿನ್ನ ಕಳ್ಳತನಕ್ಕೆ ಉನ್ನಿಕೃಷ್ಣನ್ ಸಂಚು**

ಬೆಂಗಳೂರು: ಕೇರಳದ ಶಬರಿಮಲೆಯಲ್ಲಿ ಚಿನ್ನ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಕ್ಕೊಂದು ಸತ್ಯ ಹೊರಬರುತ್ತಿದೆ. ನಾಲ್ಕೂವರೆ ಕೆಜಿ ಚಿನ್ನ ಕಳ್ಳತನದ ಪ್ರಮುಖ ಆರೋಪಿ ಉನ್ನಿ ಕೃಷ್ಣನ್ ಸಿನಿಮಾ ಮಾದರಿಯಲ್ಲಿ ಪ್ಲಾನ್ ಮಾಡಿರುವುದು ಎಸ್‌ಐಟಿ ತನಿಖೆ ವೇಳೆ ಬಯಲಾಗಿದೆ.

2019ರಲ್ಲೇ ಖತರ್ನಾಕ್ ಪ್ಲಾನ್ ಮಾಡಿದ್ದ ಉನ್ನಿ ಕೃಷ್ಣನ್, ಬಳ್ಳಾರಿ, ಬೆಂಗಳೂರು ಹಾಗೂ ತಮಿಳುನಾಡು ಸೇರಿ ಒಟ್ಟು ಮೂರು ಕಡೆ ಶಬರಿಮಲೆ ದೇವಸ್ಥಾನಕ್ಕೆ ಚಿನ್ನ ಲೇಪಿತ ಬಾಗಿಲು ಮಾಡಿಸಿದ್ದ. 2 ಕಡೆ ಮಾತ್ರ ನಿಜವಾದ ಚಿನ್ನದ ಬಾಗಿಲು ಮಾಡಿಸಿದರೆ, ಇನ್ನೊಂದು ಕಡೆ ತಾಮ್ರ ಹೆಚ್ಚಿರುವ ಬಾಗಿಲು ಸಿದ್ದಪಡಿಸಿ, ಕೊನೆಗೆ ಅಪ್ಪಟ ಚಿನ್ನದ ಬಾಗಿಲುಗಳನ್ನು ತಾನೇ ಇಟ್ಟುಕೊಂಡಿದ್ದ. ಬಳಿಕ ತಾಮ್ರದ ಬಾಗಿಲನ್ನು ದೇಗುಲಕ್ಕೆ ಕೊಟ್ಟು ತನಗೇನೂ ಗೊತ್ತಿಲ್ಲ ಎಂಬಂತೆ ವರ್ತಿಸಿದ್ದ ಎನ್ನುವುದು ಎಸ್‌ಐಟಿ ತನಿಖೆಯಲ್ಲಿ ಬಟಾಬಯಲಾಗಿದೆ.

2 ದಿನದಲ್ಲಿ ವರದಿ ಸಲ್ಲಿಕೆ: ಇನ್ನೂ ಶಬರಿಮಲೆ ಅಯ್ಯಪ್ಪ ಸ್ವಾಮಿ ಚಿನ್ನ ಕದ್ದ ಆರೋಪಿ ಉನ್ನಿಕೃಷ್ಣನ್ ಈಗಾಗಲೇ ಕಂಬಿ ಹಿಂದೆ ತಳ್ಳಲ್ಪಟ್ಟಿದ್ದಾನೆ. ಆದರೆ ಈ ಪ್ರಕರಣದಲ್ಲಿ ಉನ್ನಿಕೃಷ್ಣನ್ ನಂಬಿ ಚಿನ್ನ ಖರೀದಿ ಮಾಡಿದವರ ಪಾಡು ಕಾಗೆಯಂತಾಗಿದೆ. ಇನ್ನೆರಡು ದಿನಗಳಲ್ಲಿ ಕೇರಳ ಎಸ್‌ಐಟಿ ತಂಡ ಕೋರ್ಟ್‌ಗೆ ತನಿಖಾ ವರದಿ ಸಲ್ಲಿಸಲಿದ್ದು, ಇನ್ನಷ್ಟು ಕರಾಳ ಸತ್ಯ ಬಯಲಾಗಲಿದೆ.

ಏನಿದು ತಾಮ್ರದ ಬಾಗಿಲು ಕಹಾನಿ?

ಬಳ್ಳಾರಿಯ ಚಿನ್ನದ ಉದ್ಯಮಿ, ರೊದ್ದಂ ಗೋಲ್ಡ್ ಜ್ಯುವೆಲ್ಲರಿ ಮಾಲೀಕ ಗೋವರ್ಧನ್ ಅವರು 2019ರಲ್ಲಿ ಅಯ್ಯಪ್ಪ ಸ್ವಾಮಿ ದೇಗುಲಕ್ಕೆ ಚಿನ್ನದ ಬಾಗಿಲು ಸಿದ್ಧಪಡಿಸಿ ಕೊಟ್ಟಿದ್ದರು. ಆ ಬಾಗಿಲು ಬಳ್ಳಾರಿಯಲ್ಲಿಯೇ ಸಿದ್ಧವಾಗಿತ್ತು. ಉನ್ನಿಕೃಷ್ಣನ್ ಕೇಳಿದ್ದ ಹಿನ್ನೆಲೆಯಲ್ಲಿ ಚಿನ್ನದ ಉದ್ಯಮಿ ಗೋವರ್ಧನ್ ಚಿನ್ನದ ಬಾಗಿಲು ದಾನ ಮಾಡಿದ್ದರು. ಆದರೆ ಅಸಲಿ ಚಿನ್ನದ ಬಾಗಿಲು ಬದಲಾಗಿದ್ದೇಗೆ ಎನ್ನುವ ಗುಮಾನಿಯಾಗಿ ಉಳಿದಿತ್ತು. ಇನ್ನೂ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಬಳ್ಳಾರಿಯ ಚಿನ್ನದ ಉದ್ಯಮಿ ಗೋವರ್ಧನ್, ನಾನು 2019ರಲ್ಲಿ ಚಿನ್ನದ ಬಾಗಿಲು ರೆಡಿ ಮಾಡಿ ಕೊಟ್ಟಿದ್ದು ನಿಜ. ಆದರೆ ಅದು ಆಮೇಲೆ ಹೇಗೆ ಬದಲಾಯಿತು ಎನ್ನುವುದು ಗೊತ್ತಿಲ್ಲ. ನಾನು ಅಯ್ಯಪ್ಪಸ್ವಾಮಿ ಭಕ್ತ ಆಗಿದ್ದರಿಂದ 2019ರಿಂದಲೇ ನನಗೆ ಉನ್ನಿಕೃಷ್ಣನ್ ಪರಿಚಯ ಆಗಿತ್ತು. ದೇವರ ಚಿನ್ನ ಕದ್ದವರು ಯಾರೇ ಆಗಿದ್ದರೂ ಶಿಕ್ಷೆ ಆಗುತ್ತದೆ. ನನ್ನ ಮೇಲೂ 475 ಗ್ರಾಂ ಚಿನ್ನ ಖರೀದಿಯ ಆರೋಪವಿದ್ದು, ಎಲ್ಲವನ್ನೂ ಎಸ್‌ಐಟಿಗೆ ಹಿಂದಿರುಗಿಸಿ ತನಿಖೆಗೆ ಸಹಕಾರ ಕೊಟ್ಟಿದ್ದೇನೆ. ಆದರೆ ಉನ್ನಿಕೃಷ್ಣನ್ ಇತ್ತೀಚೆಗೆ ಕೊಟ್ಟಿದ್ದು ದೇವರ ಚಿನ್ನ ಎನ್ನುವುದು ಗೊತ್ತಿರಲಿಲ್ಲ ಎಂದು ಹೇಳುವ ಮೂಲಕ ಉನ್ನಿಕೃಷ್ಣನ್ ಚಿನ್ನ ಕೊಟ್ಟಿದ್ದ ಅಸಲಿ ಸತ್ಯವನ್ನು ಒಪ್ಪಿಕೊಂಡಿದ್ದಾರೆ.

ಸಚಿವ ಸಂಪುಟ ಪುನರ್ ರಚನೆ ಎಲ್ಲವೂ ಹೈಕಮಾಂಡ್ ತೀರ್ಮಾನದಂತೆ ನಿರ್ಧಾರ

ಅಹಿಂದ ನಾಯಕತ್ವದ ಬಗ್ಗೆ ಮಾತ್ರ ಯತೀಂದ್ರ ಹೇಳಿಕೆ: ಸತೀಶ್

ಬೆಳಗಾವಿ: ಮೊದಲಿನಿಂದಲೂ ಸಂಪುಟ ಪುನರ್‌ರಚನೆ ಆಗಬೇಕೆಂಬುವುದು ಚರ್ಚೆಯಲ್ಲಿದೆ. ಆದರೆ ಸಂಪುಟ ಪುನರ್ ರಚನೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಸಚಿವರಾಗುವ ಅರ್ಹತೆ ಬಹಳಷ್ಟು ಜನರಿಗಿದೆ. ಆದರೆ ಕೇವಲ 34 ಜನಕ್ಕಷ್ಟೇ ಮಂತ್ರಿಯಾಗಲು ಅವಕಾಶವಿದೆ. ಇನ್ನು ಯಾರನ್ನು ಮಂತ್ರಿ ಸ್ಥಾನದಿಂದ ಕೆಳಗಿಳಿಸಬೇಕು. ಯಾರಿಗೆ ಮಂತ್ರಿ ಸ್ಥಾನ ನೀಡಬೇಕೆಂಬ ನಿರ್ಧಾರ ಹೈಕಮಾಂಡ್ ಮಾಡುತ್ತದೆ. ಈ ಕುರಿತು ನನ್ನನ್ನು ಕೇಳಿದರೆ ನಾನೇನು ಹೇಳಲು ಸಾಧ್ಯವಿಲ್ಲ. ಆ ಅಧಿಕಾರವೂ ನನಗೆ ಇಲ್ಲ ಎಂದರು.

ಯಾರನ್ನು ಮಂತ್ರಿ ಸ್ಥಾನದಿಂದ ಕೆಳಗಿಳಿಸಬೇಕು, ಯಾರಿಗೆ ಮಂತ್ರಿ ಸ್ಥಾನ ನೀಡಬೇಕೆಂಬ ನಿರ್ಧಾರ ಹೈಕಮಾಂಡ್ ಮಾಡುತ್ತದೆ

30 ತಿಂಗಳ ಬಳಿಕ ಸಂಪುಟ ಪುನಾರಚನೆ ಮಾಡಬೇಕು ಅಂತಾ ಚರ್ಚೆಯಲ್ಲಿತ್ತು. ಈ ಚರ್ಚೆ ಈಗ ಅಂತಿಮ ಹಂತಕ್ಕೆ ಬಂದಿದೆ. ದೆಹಲಿ ಮಟ್ಟದಲ್ಲಿ ಚರ್ಚೆ ಆಗಿದ್ದರೂ ಆಗಿರಬಹುದು. ಎಲ್ಲವೂ ಹೈಕಮಾಂಡ್ ತೀರ್ಮಾನದಂತೆ ನಡೆಯುತ್ತದೆ.

ಮೊನ್ನೆ ಸಿಎಂ ಸಿದ್ದರಾಮಯ್ಯ ಮೊದಲ ಬಾರಿ ಬಹಿರಂಗವಾಗಿ ಸಚಿವ ಸಂಪುಟ ಪುನಾರಚನೆ ಕುರಿತು ಹೇಳಿದ್ದಾರೆ ಎಂದ ಅವರು, ಇನ್ನು ಸಚಿವ ಕೃಷ್ಣಬೈರೇಗೌಡ ಸಚಿವ ಸ್ಥಾನ ತ್ಯಾಗದ ಬಗ್ಗೆ ಹೇಳಿಕೆ ನೀಡಿರುವ ವಿಚಾರವಾಗಿ ಪ್ರತಿಕ್ರಿಯಿಸಿ, ಹೈಕಮಾಂಡ್ ಹೇಳಿದರೆ ನಾವು ಕೂಡ ಪಾಲನೆ ಮಾಡಬೇಕಾಗುತ್ತದೆ ಎಂದು ಹೇಳಿದರು.

ಎಂಎಲ್‌ಸಿ ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಕುರಿತು ಮಾತನಾಡಿ, ಯತಿಂದ್ರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ನಂತರ ನಾನು ಅಹಿಂದ ಸಂಘಟನೆಯನ್ನು ಮುನ್ನಡೆಸುತ್ತೇನೆ ಎಂದು ಹೇಳಿದ್ದಾರೆ ಅಷ್ಟೇ, ಅದು ನಿಜವೂ ಇದೆ. ಆದರೆ ಇದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ ಎಂದರು.

ಸಮಾಚಾರ ಸಣ್ಣದಲ್ಲ

ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಪ್ರಕರಣ



ಪುತ್ತೂರು: ಸಾರ್ವಜನಿಕ ಕಾರ್ಯಕ್ರಮದಲ್ಲಿ ದ್ವೇಷ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅ. 20 ರಂದು ಪುತ್ತೂರಿನ ಉಪ್ಪಳಿಗೆಯಲ್ಲಿ ನಡೆದ 'ದೀಪೋತ್ಸವ' ಕಾರ್ಯಕ್ರಮದಲ್ಲಿ ಕಲ್ಲಡ್ಕ ಪ್ರಭಾಕರ ಭಟ್ ಅವರು ಧಾರ್ಮಿಕ ದ್ವೇಷವನ್ನು ಪ್ರಚೋದಿಸುವ, ಮಹಿಳೆಯರ ಘನತೆಗೆ ಧಕ್ಕೆ ತರುವ ಮತ್ತು ಸಾರ್ವಜನಿಕ ಶಾಂತಿಗೆ ಭಂಗ ತರುವ ರೀತಿಯಲ್ಲಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಪುತ್ತೂರು ತಾಲೂಕಿನ ನಿವಾಸಿಯಾಗಿರುವ ಈಶ್ವರಿ ಪದ್ಮುಂಜ ಅವರು ಸಲ್ಲಿಸಿದ ದೂರಿನ ಪ್ರಕಾರ, ಭಟ್ ಅವರು ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಜನಸಂಖ್ಯೆ ಕುರಿತು ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದು, ಇದು ಧಾರ್ಮಿಕ ವೈರತ್ವವನ್ನು ಪ್ರಚೋದಿಸುವ ಸಾಧ್ಯತೆಯಿದೆ ಎಂದು ದೂರಲಾಗಿದೆ. ಈ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಬಿಜೆಪಿ ಮುಖಂಡನ ಕೊಲೆ: ಮತ್ತಿಬ್ಬರ ಸೆರೆ

ಗಂಗಾವತಿ: ಇಲ್ಲಿನ ಬಿಜೆಪಿ ಯುವ ಘಟಕದ ಅಧ್ಯಕ್ಷ ವೆಂಕಟೇಶ ಕುರುಬರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಪ್ರಮುಖ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಕೊನೆಗೂ ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿಗಳನ್ನು ಇಲ್ಲಿನ ಲಿಂಗರಾಜ್ ಕ್ಯಾಂಪಿನ ರವಿ ಬಸವರಾಜ ಹಾಗೂ ಗುಂಡಮ್ಮ ಕ್ಯಾಂಪಿನ ನಿವಾಸಿ ಗಂಗಾಧರ ಗೌಳಿ ಎಂದು ಗುರುತಿಸಲಾಗಿದೆ. ಶನಿವಾರ ರಾತ್ರಿ ಕಲಬುರಗಿಯ ಹೊರ ವಲಯದಲ್ಲಿ ಆರೋಪಿಗಳ ಚಹರೆ ಪತ್ತೆ ಹಚ್ಚಿ, ಪೊಲೀಸರು ಬಲೆ ಬೀಸಿ ಬಂಧಿಸಿದ್ದಾರೆ. ಈ ಮೂಲಕ ಬಿಜೆಪಿ ಯುವ ಮುಖಂಡನ ಕೊಲೆ ಪ್ರಕರಣದಲ್ಲಿ ಒಟ್ಟು ಏಳು ಜನರನ್ನು ಬಂಧಿಸಿದಂತಾಗಿದೆ. ಬಿಜೆಪಿ ಯುವ ಮುಖಂಡನ ಕೊಲೆ ಪ್ರಕರಣದ ಪ್ರಮುಖ ಆರೋಪಿಗಳು ತಲೆಮರೆಸಿಕೊಂಡಿದ್ದರಿಂದ ಗಂಗಾವತಿ ಪೊಲೀಸರಿಗೆ ಈ ಪ್ರಕರಣ ಸವಾಲಾಗಿ ಪರಿಣಮಿಸಿತ್ತು. ಇದರಿಂದ ತೀವ್ರ ತನಿಖೆಗೆ ಕೈಗೊಂಡು, ಪ್ರಕರಣದ ಪ್ರಮುಖ ಆರೋಪಿಗಳನ್ನು ಕೊನೆಗೂ 3 ವಾರಗಳ ಬಳಿಕ ಪೊಲೀಸರು ಬಂಧಿಸಿದ್ದಾರೆ.

ಮೇಕೆ ವಿಚಾರಕ್ಕೆ ತಂದೆಯ ಕೊಲೆ

ಚಾಮರಾಜನಗರ: ಮೇಕೆಗಳನ್ನು ಭಾಗ ಮಾಡುವ ವಿಚಾರಕ್ಕೆ ತಂದೆ ಮಗನ ನಡುವೆ ಗಲಾಟೆ ನಡೆದಿದ್ದು, ತಂದೆಯನ್ನು ಮಗ ಕೊಲೆ ಮಾಡಿರುವ ಘಟನೆ ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಆತೂರು ಗ್ರಾಮದಲ್ಲಿ ನಡೆದಿದೆ. ಗೋಪಿನಾಥಂ ಗ್ರಾಮದ ಶಂಕರನ್ (70) ಹತ್ಯೆಯಾದವರು. ಈತನ 2ನೇ ಮಗ ಗೋವಿಂದರಾಜ್ ಆರೋಪಿ. ಮಗನೇ ಆಯುಧದಿಂದ ಗಾಯಗೊಳಿಸಿ ಕಾವೇರಿ ನದಿಗೆ ತಳ್ಳಿ ಹತ್ಯೆ ಮಾಡಿದ್ದಾನೆ ಎನ್ನಲಾಗಿದೆ. ಶಂಕರನ್ ಮತ್ತು ಗೋವಿಂದರಾಜು ಮೇಕೆ ಸಾಕಿಕೊಂಡಿದ್ದರು. ಮೇಕೆ ಭಾಗ ಮಾಡಿಕೊಳ್ಳುವ ವಿಚಾರಕ್ಕೆ ಗಲಾಟೆ ನಡೆದು ಕೊಲೆಯಾಗಿದೆ, ಈ ಸಂಬಂಧ ಮಲೆಮಹದೇಶ್ವರ ಬೆಟ್ಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಗೋವಿಂದ ರಾಜ್‌ನನ್ನು ಬಂಧಿಸಲಾಗಿದೆ.

ಚಿತ್ತಾಪುರ: ಶಾಂತಿ ಸಭೆಗೆ ನೋಟಿಸ್

ಕಲಬುರಗಿ: ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪಥ ಸಂಚಲನಕ್ಕೆ ಸಂಬಂಧಿಸಿದಂತೆ ಭುಗಿಲೆದ್ದ ವಿವಾದದ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ಮಹತ್ವದ ಹೆಜ್ಜೆ ಇಟ್ಟಿದೆ. ಹೈಕೋರ್ಟ್ ನಿರ್ದೇಶನದಂತೆ ಶಾಂತಿ ಸಭೆ ನಡೆಸಲು ಆರ್.ಎಸ್.ಎಸ್, ದಲಿತ ಪ್ಯಾಂಥರ್ ಮತ್ತು ಭೀಮ್ ಆರ್ಮಿ ಸೇರಿದಂತೆ ಒಟ್ಟು 10 ಸಂಘಟನೆಗಳಿಗೆ ನೋಟಿಸ್ ಜಾರಿ ಮಾಡಿದೆ. ಅ.28ರಂದು ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಾಂತಿ ಸಭೆ ನಿಗದಿಪಡಿಸಲಾಗಿದೆ. ಈ ಸಭೆಯಲ್ಲಿ ಪಾಲ್ಗೊಳ್ಳಲು ಪ್ರತಿ ಸಂಘಟನೆಗೆ ಮೂವರು ಪ್ರತಿನಿಧಿಗಳಿಗೆ ಮಾತ್ರ ಅವಕಾಶ ನೀಡಲಾಗಿದ್ದು, ತಮ್ಮ ಅಭಿಪ್ರಾಯಗಳನ್ನು ಕಡ್ಡಾಯವಾಗಿ ಲಿಖಿತ ರೂಪದಲ್ಲಿ ಸಲ್ಲಿಸಬೇಕು ಎಂದು ಜಿಲ್ಲಾಡಳಿತ ಸೂಚಿಸಿದೆ. ಪಥ ಸಂಚಲನಕ್ಕೆ ಅನುಮತಿ ನಿರಾಕರಿಸಿದ ಜಿಲ್ಲಾಡಳಿತದ ಕ್ರಮವನ್ನು ಪ್ರಶ್ನಿಸಿ ಆರ್‌ಎಸ್‌ಎಸ್ ಹೈಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ ಹೈಕೋರ್ಟ್, ಮೊದಲು ಎಲ್ಲ ಸಂಘಟನೆಗಳೊಂದಿಗೆ ಶಾಂತಿ ಸಭೆ ನಡೆಸಬೇಕು ಮತ್ತು ಸಭೆಯ ವರದಿಯನ್ನು ಅಕ್ಟೋಬರ್ 30ರೊಳಗೆ ಸರಕಾರಕ್ಕೆ ಸಲ್ಲಿಸಬೇಕು ಎಂದು ಜಿಲ್ಲಾಡಳಿತಕ್ಕೆ ಸೂಚನೆ ನೀಡಿತ್ತು.

ವಿಶ್ವವಾಣಿ ಕ್ಲಬ್ ಹೌಸ್
27.10.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಸತ್ಯೇಶ್ ಎನ್. ಬೆಳ್ಳೂರು
ವಿಷಯ
ಅತ್ಯುತ್ತಮ ಬಾಸ್ !

vishwavani.news

ಬಾಗಲಕೋಟೆ, ಹಾಸನ, ಕೋಲಾರ ಸೇರಿ ರಾಜ್ಯದ ಹಲವೆಡೆ ಆರ್‌ಎಸ್‌ಎಸ್ ಶಾಂತಿಯುತ ಪಥ ಸಂಚಲನ

ಗಣವೇಷಧಾರಿಗಳಿಂದ ಶಿಸ್ತುಬದ್ಧ ಹೆಜ್ಜೆ

ಆರ್‌ಎಸ್‌ಎಸ್ ಶತಮಾನೋತ್ಸವ ನಿಮಿತ್ತ ಬಾಗಲಕೋಟೆಯ ಸೂಳೇಬಾವಿಯಲ್ಲಿ ಗಣವೇಷಧಾರಿಗಳಿಂದ ಪಥ ಸಂಚಲನ ನಡೆಯಿತು.

ಬಾಗಲಕೋಟೆ: ಸರಕಾರ ಹಾಗೂ ಆರ್‌ಎಸ್‌ಎಸ್‌ನಡುವೆ ಸಮರ ನಡೆಯುತ್ತಿರುವ ಮಧ್ಯೆಯೇ ರಾಜ್ಯದ ಬಾಗಲಕೋಟೆ, ರಾಯಚೂರು, ಹಾಸನ, ಶಿವಮೊಗ್ಗ, ಮಂಡ್ಯ, ಬೆಳಗಾವಿ, ಕೋಲಾರ, ವಿಜಯಪುರ ಸೇರಿದಂತೆ 17 ಜಿಲ್ಲೆಗಳಲ್ಲಿ ಭಾನುವಾರ ಶಾಂತಿಯುತವಾಗಿ, ಯಶಸ್ವಿಯಾಗಿ ಆರ್‌ಎಸ್‌ಎಸ್ ಪಥ ಸಂಚಲನ ನಡೆದಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವ ಅಂಗವಾಗಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನ ಸೂಳೇಬಾವಿಯಲ್ಲಿ ಮೊದಲ ಬಾರಿ ನಡೆದ ಗಣವೇಷಧಾರಿಗಳ ಪಥ ಸಂಚಲನ ಗಮನ ಸೆಳೆಯಿತು.

ಪಥ ಸಂಚಲನದ ಮಾರ್ಗದುದ್ದಕ್ಕೂ ಕೇಸರಿ ಬಂಟಿಂಗ್ಸ್, ಭಗವಾ ಧ್ವಜಗಳು ರಾರಾಜಿಸಿದವು. ಶಾಂತಿ ಹಾಗೂ ಶಿಸ್ತಿನಿಂದ ನಡೆದ ಪಥ ಸಂಚಲನದಲ್ಲಿ 200ಕ್ಕೂ ಹೆಚ್ಚು ಗಣವೇಷಧಾರಿ ಸ್ವಯಂ ಸೇವಕರು ಭಾಗವಹಿಸಿದ್ದರು. ಗ್ರಾಮದ ಶಾಖಾಂಬರಿ ಕಲ್ಯಾಣ ಮಂಟಪದ ಆವರಣ ದಿಂದ ಹೊರಟ ಪಥ ಸಂಚಲನ ಭಾವೈಕ್ಯತಾ ಮಹಾದ್ವಾರ, ವಿಜಯ ಮಹಾಂತೇಶ ಮಠ, ಎಂಪಿಎಸ್ ಶಾಲೆ, ಗಾಯತ್ರಿ ನಗರ, ಸರಕಾರಿ ಆಸ್ಪತ್ರೆ, ಗುಡೂರ ರಸ್ತೆ ಮಾರ್ಗವಾಗಿ ಸಂಚರಿಸಿ ಪುನ: ಶಾಖಾಂಬರಿ ಕಲ್ಯಾಣ ಮಂಟಪದ ಆವರಣ ತಲುಪಲಿತು.

ಪಥ ಸಂಚಲನದ ಮಾರ್ಗದುದ್ದಕ್ಕೂ ಮಹಿಳೆ ಯರು ತಮ್ಮ ಮನೆ ಮುಂದೆ ಬಣ್ಣ ಬಣ್ಣದ ಆಕರ್ಷಕ ರಂಗೋಲಿ ಬಿಡಿಸಿ ಸ್ವಯಂ ಸೇವಕ ರನ್ನು ಸ್ವಾಗತಿಸಿದರು. ರಸ್ತೆಯಲ್ಲೆಡೆ ಸಾರ್ವಜನಿಕರು ಗಣವೇಷಧಾರಿಗಳಿಗೆ ಹೂಮಳೆ ಗೈದರು. ದೇಶಭಕ್ತರ ಹಾಗೂ ಮಹಾತ್ಮರ ವೇಷ ಧರಿಸಿದ ಚಿಣ್ಣರು ಗಮನ ಸೆಳೆದರು.

ರಾರಾಜಿಸಿದ ಕೇಸರಿ ಧ್ವಜ

ಬಾದಾಮಿ ನಗರದ ಎಲ್ಲ ಕಡೆಗಳಲ್ಲೂ ಕೇಸರಿ ಧ್ವಜಗಳು, ಪ್ರಮುಖ ರಸ್ತೆಗಳ ಮೇಲೆ ಹೆಂಗಳೆಯರು ಬಿಡಿಸಿದ ರಂಗವಲ್ಲಿಯ ಚಿತ್ತಾರಗಳು ಬಡಾವಣೆಗಳ ಮನೆಗಳ ಮುಂದೆ ಹಸಿರು ತೋರಣಗಳೊಂದಿಗೆ ಸ್ವಾಗತ ಕೋರುವ ಕಮಾನುಗಳು ಬಾದಾಮಿಯಲ್ಲಿ ಕಂಡು ಬಂದವು. ನಗರದಲ್ಲಿ ಭಾನುವಾರ ಆರ್.ಎಸ್.ಎಸ್ ಪಥ ಸಂಚಲನದ ಗಣವೇಶಧಾರಿಗಳನ್ನು ಬರಮಾಡಿಕೊಳ್ಳಲು ಸ್ವಯಂ ಪ್ರೇರಿತವಾಗಿ ಯುವಕರು ಹೆಣ್ಣು ಮಕ್ಕಳು ಅಲಂಕಾರ ಮಾಡಿದ್ದರು.

ಗಣವೇಶಧಾರಿಗಳು ಪಥಸಂಚಲನದ ಮಾರ್ಗದ ರಾಮದುರ್ಗ ವರ್ತುಲದಿಂದ ಅಂಬೇಡ್ಕರ್ ವರ್ತುಲದ ಮೂಲಕ ಸಾಗಿ ನೇಕಾರ ಓಣಿ, ಉಳ್ಳಾಗಡ್ಡಿ ಓಣಿ, ಕಿಲ್ಲಾ ಓಣಿ, ತೋಟರ ಗಲ್ಲಿ, ಟಿಪ್ಪು ನಗರ, ಬಸ್ ನಿಲ್ದಾಣ, ಬಸವೇಶ್ವರ ವರ್ತುಲಗಳ ಮೂಲಕ ಪುಲಿಕೇಶಿ ಸಂಸ್ಥೆಯ ಕ್ರೀಡಾಂಗಣದವರೆಗೆ ಪಥ ಸಂಚಲನ ಸಾಗಿತು. ಮಾಜಿ ಶಾಸಕ ಎಂ.ಕೆ ಪಟ್ಟಣಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಹಾಂತೇಶ ಮಮದಾಪೂರ, ಪುರಸಭಾ ಸದಸ್ಯ ಅಶೋಕ ಯಲಿಗಾರ, ಸಿದ್ದಣ್ಣ ಶಿವನಗುತ್ತಿ, ಚಂದ್ರಶೇಖರ ಹಿರೇಮಠ, ಮುತ್ತು ಚಿನಿವಾಲರ, ಮಹೇಶ ಬರಗಿ. ವಕೀಲರಾದ ಗುರುರಾಜ ಜೋಶಿ ಸೇರಿ ಹವಲರಿದ್ದರು.

ಹೊನ್ನಾವರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಡೆಯಿತು.

ಮಳೆ ನಡುವೆ ಭವ್ಯ ಪಥ ಸಂಚಲನ

ಹೊನ್ನಾವರ: ಕೋಮು ಸೂಕ್ಷ್ಮ ಪ್ರದೇಶ ಕರಾವಳಿಯ ಹಲವು ಕಡೆ ಪಥ ಸಂಚಲನ ಯಶಸ್ವಿಯಾಗಿ ನಡೆಯಿತು. ಹೊನ್ನಾವರದಲ್ಲಿ ಪಥ ಸಂಚಲನ ಅತ್ಯಂತ ಆಕರ್ಷಕವಾಗಿ ನಡೆಯಿತು. ಮಳೆಯನ್ನು ಲೆಕ್ಕಿಸದೇ ಸಾವಿರಾರು ಗಣವೇಷಧಾರಿಗಳು ಸಂಭ್ರಮದಿಂದ ಪಾಲ್ಗೊಂಡಿದ್ದರು. ಪಟ್ಟಣದ ಸಂತ ಥೋಮಸ್ ಶಾಲೆಯಿಂದ ಆರಂಭವಾದ ಗಣ ವೇಷಧಾರಿ ಗಳ ಸಂಚಲನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ಶನಿ ದೇವಸ್ಥಾನದ ಎದುರು ಸಂಪನ್ನಗೊಂಡಿತು. ರಾಮಚಂದ್ರ ಕಾಮತ ವಿಭಾಗ ಸಂಘ ಚಾಲಕ, ಗಣೇಶ ಜಿ ವಿಭಾಗ ಪ್ರಚಾರಕ್, ಶಾಸಕ ದಿನಕರ ಕೆ ಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಎನ್ ಎಸ್ ಹೆಗಡೆ ಸೇರಿ ಹಲವರು ಪಾಲ್ಗೊಂಡಿದ್ದರು.

ಹಿಂದೂ ನಾವೆಲ್ಲ ಒಂದು

ಹಾಸನ: ರಾಷ್ಟ್ರೀಯ ಸ್ವಯಂಸೇವಕ ಸಂಘ ನೂರು ವರ್ಷ ಪೂರೈಸಿದ ಹಿನ್ನೆಲೆ ಹಾಸನ ನಗರದಲ್ಲಿ ಭಾನುವಾರ ಪಥಸಂಚಲ ನಡೆಯಿತು. ಸ್ವಯಂಸೇವಕರು ಮಳೆಯ ನಡುವೆಯೂ ಪಥಸಂಚಲನದಲ್ಲಿ ಭಾಗವಹಿಸಿ ಗಮನ ಸೆಳೆದರು. ನಗರದ ಹುಣಸಿನಕೆರೆ ರಸ್ತೆಯ ಕಾಶಿ ವಿಶ್ವನಾಥ ದೇವಾಲಯ ಬಳಿಯಿಂದ ಡಾಕ್ಟರ್ ಜೀ ಪಥ, ಸಂಗಮೇಶ್ವರ ಬಡಾವಣೆಯಿಂದ ಭಾರತಾಂಬೆ ಪಥ, ರವೀಂದ್ರ ನಗರದ ಬಿಜಿಎಸ್ ಆಂಗ್ಲ ಮಾಧ್ಯಮ ಶಾಲೆಯಿಂದ ಗುರೂಜಿ ಪಥ ಹೊರಟು ನಗರದ ಸಹ್ಯಾದ್ರಿ ವೃತ್ತದ ಬಳಿ ಏಕ ಕಾಲದಲ್ಲಿ ಸಂಗಮವಾದವು. ನಂತರ ದೇವಿಗೆರೆಗಾಗಿ ಸಿಟಿ ಬಸ್ ನಿಲ್ದಾಣದ ಮೂಲಕ ಗಂಧದ ಕೋಠಿ ರಸ್ತೆ ಬಳಿ ಸಮಾಪ್ತಿಯಾಯಿತು. ರಸ್ತೆ ಬದಿ ನಿಂತವರು ಭಾರತ್ ಮಾತಾಕೀ ಜೈ, ಜೈ ಶ್ರೀರಾಮ್, ವಂದೇ ಮಾತರಂ, ನಾವೆಲ್ಲ ಒಂದು ನಾವೆಲ್ಲ ಹಿಂದು, ಎದೆ ತಟ್ಟಿ ಹೇಳು ನಾನೊಬ್ಬ ಹಿಂದೂ, ಭಾರತ ಮಾತೆಯ ಸಿಂಧೂರ ವಿವಿಧ ಘೋಷಣೆಗಳು ಮೊಳಗಿದವು.

ಪಥಸಂಚಲನ ಯಶಸ್ವಿ

ಮಾಲೂರು: ಕೋಲಾರ ಜಿಲ್ಲೆ ಮಾಲೂರಿನಲ್ಲಿ ಭಾನುವಾರ ನಡೆದ ಆರ್‌ಎಸ್‌ಎಸ್ ಪಥಸಂಚಲನ ಶಾಂತಿಯುತವಾಗಿ ಯಶಸ್ವಿ ಆಯಿತು. ಸಂಘದ ಶತಮಾನೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಸುಮಾರು 4 ಸಾವಿರಕ್ಕೂ ಹೆಚ್ಚು ಗಣವೇಷಧಾರಿಗಳು ಭಾಗವಹಿಸಿದ್ದು ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ಹೋಂಡಾ ಕ್ರೀಡಾಂಗಣದಿಂದ ಆರಂಭವಾದ ಪಥ ಸಂಚಲನ ಮಾಲೂರಿನ ಮುಖ್ಯ ರಸ್ತೆಯಲ್ಲಿ ಸಾಗಿ ಅಂತಿಮವಾಗಿ ಆರಂಭಗೊಂಡ ಸ್ಥಳದಲ್ಲೇ ಮುಕ್ತಾಯವಾಯಿತು. ಮುಸ್ಲಿಂ ಹಾಗೂ ಮತ್ತಿತರೆ ಸಂಘಟನೆಗಳ ಜತೆಗೆ ಶಾಂತಿ ಸಭೆ ನಡೆಸುವ ಮೂಲಕ ಪೊಲೀಸರು ಮುನ್ನೆಚ್ಚರಿಕೆ ಕ್ರಮ ಕೈಗೊಂಡ ಪರಿಣಾಮ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಪಥಸಂಚಲನದ ನೇತೃತ್ವವನ್ನು ಮಾಜಿ ಸಂಸದ ಮುನಿಸ್ವಾಮಿ, ಮಾಜಿ ಶಾಸಕ ಮಂಜುನಾಥಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ,ಬಂಗಾರಪೇಟೆ ಮಹೇಶ್ ವಹಿಸಿದ್ದರು.



ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ನಡೆದ ಪಥಸಂಚಲನ.

ಮಾಲೂರಿನಲ್ಲಿ ನಡೆದ ಗಣವೇಷಧಾರಿಗಳ ಪಥಸಂಚಲನ.

ಹಾಸನ ನಗರದಲ್ಲಿ ನಡೆದ ಆರ್‌ಎಸ್‌ಎಸ್ ಪಥಸಂಚಲನ.

ಆರ್‌ಎಸ್‌ಎಸ್ ನೋಂದಣಿ ಆಗದ ಸಂಘ: ಎಂಬಿಪಾ

ವಿಜಯಪುರ: ಸರಕಾರಿ ಶಾಲೆ-ಕಾಲೇಜ್ ಹಾಗೂ ಕಚೇರಿಗಳ ಆವರಣದಲ್ಲಿ ಯಾವುದೇ ಸಂಘಟನೆಗಳಿಗೂ ಅವಕಾಶ ಇಲ್ಲ. ಕೇವಲ ಆರ್‌ಎಸ್‌ಎಸ್ ಮಾತ್ರವಲ್ಲ, ಬಸವೇಶ್ವರ ಕಾರ್ಯಕ್ರಮ ಇರಬಹುದು ಅಂಬೇಡ್ಕರ ಇರಬಹುದು ಧಾರ್ಮಿಕ ಇರಬಹುದು ಕ್ರೀಡೆ ಇರಬಹುದು ಎಲ್ಲರೂ ಪರವಾನಿಗೆ ಪಡಿಯಬೇಕು ಕಾನೂನು ಎಲ್ಲರಿಗೂ ಅನ್ವಯ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸುದ್ದಿಗಾರರರೊಂದಿಗೆ ಮಾತನಾಡಿದ ಅವರು, ಈ ದೇಶದಲ್ಲಿ ಆರ್‌ಎಸ್‌ಎಸ್ ಒಂದೇ ಸಂಘಟನೆ ಇದೆಯಾ? ಅಷ್ಟಕ್ಕೂ ಆರ್‌ಎಸ್‌ಎಸ್ ನೋಂದಣಿಯಾಗದ ಸಂಘ. ಆದರೂ ಸಾವಿರಾರು ಕೋಟಿ ರು.ವೆಚ್ಚದಲ್ಲಿ ದೊಡ್ಡ ದೊಡ್ಡ ಪ್ಯಾಲೇಸ್ ಕಟ್ಟಿದ್ದಾರೆ. ಅದೇ ಕಾಂಗ್ರೆಸ್ ಕಟ್ಟಿದ್ದರೆ ? ಪ್ರವಾಹ ಮತ್ತಿತರ ಪ್ರಕೃತಿ ವಿಕೋಪಗಳ ಸಂಭವಿಸಿದಾಗ ರೆಡ್ಕ್ರಾಸ್ ಸೇರಿ ಅನೇಕ ಸಂಘಟನೆಗಳು ಶ್ರಮಿಸಿವೆ. ಆರ್‌ಎಸ್‌ಎಸ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿಲ್ಲ. ಸ್ವಾತಂತ್ರ್ಯ ಸಿಗದೇ ಇದ್ದರೆ ಇವರೆಲ್ಲ ಇಷ್ಟೊಂದು ಮಾತನಾಡುತ್ತಿದ್ದರಾ? ಅಂಬೇಡ್ಕರ್ ಸಂವಿಧಾನ ರಚಿಸದೇ ಹೋಗಿದ್ದರೆ ಮಾತನಾಡುತ್ತಿದ್ದರಾ? ಆರ್‌ಎಸ್‌ಎಸ್ ಬ್ರಿಟಿಷರೊಂದಿಗೆ ಮಿಲಾಪಿಯಾಗಿತ್ತು ಎಂದು ಹೇಳಿದರು.

ನ.26ರಿಂದ ಡಿ.4ರವರೆಗೆ ದತ್ತ ಜಯಂತಿ ಉತ್ಸವ

ಚಿಕ್ಕಮಗಳೂರು: ಜಿಲ್ಲೆಯ ವಿಶ್ವ ಹಿಂದೂ ಪರಿಷದ್-ಬಜರಂಗದಳದ ಸಂಯುಕ್ತಾಶ್ರಯದಲ್ಲಿ ದತ್ತ ಜಯಂತಿ ಉತ್ಸವ ನ.26ರಿಂದ ಡಿ.4ರವರೆಗೆ ವಿಜೃಂಭಣೆಯಿಂದ ನಡೆಸಲು ಸಂಘಟನೆ ತೀರ್ಮಾನಿಸಿದ್ದು, ಸಾಧು ಸಂತರು, ಮಾತೆಯರು, ದತ್ತಮಾಲಾಧಾರಿಗಳು, ದತ್ತಭಕ್ತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಲ್ಲಿ ಇದೆ ಎಂದು ಬಜರಂಗದಳ-ಪ್ರಾಂತ ಸಂಯೋಜಕ ಪ್ರಭಂಜನ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ವರ್ಷವೂ ಚಂದ್ರದಾನ ಪರ್ವತ ಶ್ರೇಣಿಯಲ್ಲಿರುವ ಗುರು ದತ್ತಾತ್ರೆಯ ಸ್ವಾಮಿ ಜಾತ್ರಾ, ಮಹೋತ್ಸವ ಆಚರಿಸಲು ತೀರ್ಮಾನಿಸಲಾಗಿದೆ. ಎಲ್ಲಾ ಜಿಲ್ಲೆಗಳಲ್ಲೂ ದತ್ತಜಯಂತಿ ಉತ್ಸವ ವಿಜೃಂಭಣೆಯಿಂದ ನಡೆಸಲು ನಿಶ್ಚಯಿಸಲಾಗಿದೆ.

ಡಿ.3ಕ್ಕೆ ಶೋಭಯಾತ್ರೆ: ಡಿ.3ರಂದು ನವಕಲಶ ಕಲಾವಾಹನಂ, ಕಲಾತತ್ವಾದಿ ವಾಸ ಪೂಜೆ, ಕಲಾ ಹೋಮ, ಕಲಶಾಭಿಷೇಕ ಮಹಾಪೂಜೆ ನಡೆಯಲಿದ್ದು, ಮಧ್ಯಾಹ್ನ ಚಿಕ್ಕಮಗಳೂರು ನಗರದಲ್ಲಿ ಶೋಭಾಯಾತ್ರೆ ಹಾಗೂ ಧಾರ್ಮಿಕ ಸಭೆ ಜರುಗಲಿದೆ. ಡಿ.4ರಂದು ರುದ್ರ, ಹೋಮ, ದತ್ತಾತ್ರೇಯ ಮಹಾಮಂತ್ರ ನಡೆಯಲಿದೆ.

ಕೊಡೇಕಲ್: ನಾಪತ್ತೆಯಾಗಿದ್ದ ವಿದ್ಯಾರ್ಥಿನಿ ಶವವಾಗಿ ಪತ್ತೆ

ಹುಣಸಗಿ: ದೀಪಾವಳಿ ದಿನದಂದು ಕಾಣೆಯಾಗಿದ್ದ ವಿದ್ಯಾರ್ಥಿನಿ ಕಾಲುವೆಯಲ್ಲಿ ಶವಯಾಗಿ ಪತ್ತೆಯಾಗಿದ್ದು, ಅಪಹರಿಸಿ ಕೊಲೆ ಮಾಡಿರುವ ಅನುಮಾನ ಪಾಲಕರಿಂದ ವ್ಯಕ್ತವಾಗಿದೆ. ತಾಲೂಕಿನ ಕೊಡೇಕಲ್ ಗ್ರಾಮದ ಸೌಜನ್ಯ (17) ಮೃತಪಟ್ಟ ದುರ್ದೈವಿ.

ಅ.21ರ ಮಂಗಳವಾರದಂದು ಕಾಣೆಯಾಗಿದ್ದ ಶನಿವಾರ ಶವವಾಗಿ ಶಹಾಪುರ ತಾಲೂಕಿನ ಗೋಗಿ ಬಳಿಯ ಕೃಷ್ಣಾ ಎಡದಂಡೆ ಕಾಲುವೆ ಯಲ್ಲಿ ಪತ್ತೆಯಾಗಿದೆ. ಅಪಹರಣ ಮಾಡಿ ಕೊಲೆ ಮಾಡಿದ್ದಾರೆ ಎಂದು ಪಾಲಕರು ಆರೋಪಿಸಿದ್ದು, ಚಿರು, ಪಾಂಡಾ ಹಾಗೂ ರಾಜೇಶ್ ಎನ್ನುವವರ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಮೂವರು ಕಾರಿನಲ್ಲಿ ಬಂದು ಅಪಹರಣ ಮಾಡಿದ್ದಾರೆ ಎಂದು ಮೃತಳ ತಂದೆ ಕೊಡೇಕಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪೊಲೀಸರ ಮೇಲೆ ಗ್ರಾಮಸ್ಥರ ಆಕ್ರೋಶ: ಶನಿವಾರ ಸಂಜೆ ಮೃತ ಸೌಜನ್ಯಳ ಶವ ಆಂಬು ಲೆನ್ಸ್‌ನಲ್ಲಿ ಗ್ರಾಮಕ್ಕೆ ತರುತ್ತಿದ್ದಂತೆ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು. ಇದೇ ವೇಳೆ ಸ್ಥಳಕ್ಕೆ ಆಗಮಿಸಿದ ಹುಣಸಗಿ ಸಿಪಿಐ ವಾಹನ ತಡೆದು ಮಗಳ ಸಾವಿಗೆ ನ್ಯಾಯ ಕೊಡಬೇಕೆಂದು ಆಗ್ರಹಿಸಿ ಕುಟುಂಬಸ್ಥರು ಮತ್ತು ಗ್ರಾಮಸ್ಥರು ಆಕ್ರೋಶ ಹೊರಹಾಕಿದ್ದರು. ಸೌಜನ್ಯ ಕಾಣೆಯಾದ ಬಗ್ಗೆ ದೂರು ನೀಡಲು ಹೋದಾಗ ಬೇಗ ಮಾಡಿಕೊಂಡಿಲ್ಲ ಎಂದು ಕಿಡಿಕಾರಿದರು. ಹೋರಾಟಕ್ಕೆ ಸಾಥ್ ಕೊಟ್ಟ ಬಿಜೆಪಿ ಮುಖಂಡ ಬಬ್ಲೂಗೌಡ ತನಿಖೆಗೆ ಆಗ್ರಹಿಸಿದರು.

ಬಂಗಾರಪ್ಪನವರ ಹೆಸರಿನಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ | ಮುನಿಯಪ್ಪ, ಲಾಡ್ ಭಾಗಿ

ಬಂಗಾರ ಧಾಮದಲ್ಲಿ ಬಂಗಾರಪ್ಪನವರ ಅದ್ಧೂರಿ ಜನ್ಮದಿನ

ಸೊರಬ: ಕರ್ನಾಟಕ ಕಂಡ ವರ್ಣ ರಂಜಿತ ರಾಜಕಾರಣಿ, ಬಡವರ ಬಂಧು ಮಾಜಿಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ 93ನೇ ವರ್ಷದ ಹುಟ್ಟು ಹಬ್ಬವನ್ನು ಅ.36 ರಂದು ಸೊರಬದ ಬಂಗಾರ ಧಾಮ ಮತ್ತು ಡಾ.ರಾಜ್ ಕುಮಾರ್ ರಂಗಮಂದಿರದ ಆವರಣದ ಭವ್ಯ ವೇದಿಕೆಯಲ್ಲಿ ತುಂಬಾ ವಿಶೇಷವಾಗಿ ಆಚರಿಸಲಾಯಿತು.

> ನನ್ನ ಭವಿಷ್ಯವನ್ನು ಬರೆದವರು ಬಂಗಾರಪ್ಪನವರು ಅವರ ಆಶೀರ್ವಾದದಿಂದ ಏಳು ಬಾರಿ ಪಾರ್ಲಿಮೆಂಟ್‌ಗೆ ಆಯ್ಕೆಯಾಗಿ ವಿವಿಧ ಹುದ್ದೆಗಳನ್ನು ಅನುಭವಿಸಿ ರಾಷ್ಟ್ರ ನಾಯಕನಾಗಲು ಅವರೇ ಕಾರಣ.
> -ಕೆ.ಎಚ್ ಮುನಿಯಪ್ಪ, ಸಚಿವ

ಬಂಗಾರಪ್ಪ ಫೌಂಡೇಷನ್ ಮತ್ತು ಬಂಗಾರಪ್ಪ ವಿಚಾರ ವೇದಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗುಬ್ಬಿ ತೋಟದಪ್ಪ ಛತ್ರ ಸಂಸ್ಥೆಗೆ ಸೇವಾ ಬಂಗಾರ ಪ್ರಶಸ್ತಿ, ಸಾಹಿತಿ ಡಾ. ಕಾಳೇಗೌಡ ನಾಗವಾರ ಅವರಿಗೆ ಸಾಹಿತ್ಯ ಬಂಗಾರ, ಜೀವಣ್ಣ ರಾಜಣ್ಣ ಅವರಿಗೆ ಕಲಾ ಬಂಗಾರ, ರಾಧಾಬಾಯಿ ಅವರಿಗೆ ಜಾನಪದ ಬಂಗಾರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸೊರಬದ ಬಂಗಾರಧಾಮದಲ್ಲಿ ಮಾಜಿ ಸಿಎಂ ದಿ.ಎಸ್.ಬಂಗಾರಪ್ಪನವರ 93ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಸಚಿವ ಮಧು ಬಂಗಾರಪ್ಪ ಉದ್ಘಾಟಿಸಿದರು.

ಸಚಿವರಾದ ಕೆ.ಎಚ್.ಮುನಿಯಪ್ಪ, ಸಂತೋಷ್ ಲಾಡ್ ಮತ್ತು ಮದು ಬಂಗಾರಪ್ಪ ನಡೆಸಿಕೊಟ್ಟರು. ಪ್ರಶಸ್ತಿಗೆ ಆಯ್ಕೆಯಾದವರಿಗೆ ನಂದಿ ವಿಗ್ರಹ, ಕಂಚಿನ ಫಲಕದ ಜತೆಗೆ ಒಂದು ಲಕ್ಷ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಗೋಪಾಲಕೃಷ್ಣ ಬೇಳೂರು ಪ್ರಸ್ತಾವಿಕವಾಗಿ ಮಾತನಾಡಿ, ಮನುಷ್ಯ ತಮ್ಮ ಜೀವಿತಾವಧಿಯಲ್ಲಿ ಏನಾದರೂ ಮಾಡಿದರೆ ಮುಂದೆ ಅವರು ಇಲ್ಲದ ದಿನಗಳಲ್ಲೂ ಜೀವಂತವಾಗಿರುತ್ತಾರೆನ್ನುವುದಕ್ಕೆ ಸಾಕ್ಷಿ ಬಂಗಾರಪ್ಪ ಅವರು. ಬಂಗಾರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದಾಗ ಜಾರಿಗೆ ತಂದ ಆಶ್ರಯ, ಅಕ್ಷಯ, ಆರಾಧಾನಾ, ಉಚಿತ ವಿದ್ಯುತ್ ಯೋಜನೆಗಳು ಇವತ್ತು ಜೀವಂತವಾಗಿರುವುದೇ ಸಾಕ್ಷಿ ಎಂದರು.

ವೇದಿಕೆಯಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆ ಸಂಪಾದಕ ಕೆ.ಎನ್.ತಿಲಕ್ ಕುಮಾರ್, ಶಾಸಕ ಭೀಮಣ್ಣ ನಾಯಕ್, ಎಂಎ ಡಿಬಿ ಅಧ್ಯಕ್ಷ ಆರ್. ಎಂ.ಮಂಜುನಾಥ್ ಗೌಡ, ಅಲೆಮಾರಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಜವಳಿ ನಿಗಮದ ಅಧ್ಯಕ್ಷ ಚೇತನ್ ಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನ ಕುಮಾರ್, ಮಾಜಿಸಂಸದ ಆಯನೂರು ಮಂಜುನಾಥ್, ವೇಣು ಗೋಪಾಲ ನಾಯಕ್, ನಾಗರಾಜ್ ಮೂರ್ತಿ, ಜಿಲ್ಲಾಧಿಕಾರಿ ಗುರುದತ್ ಹೆಗಡೆ, ಸಿಇಒ ಎನ್. ಹೇಮಂತ್, ಜಿಲ್ಲಾ ಪೊಲೀಸ್ ರಕ್ಷಣಾ ಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಮತ್ತಿತರರು ಇದ್ದರು.

ವರ್ಷದಲ್ಲಿ 3ನೇ ಬಾರಿ ಕೆಆರ್‌ಎಸ್ ಭರ್ತಿ | ವರುಣನ ಕೃಪೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹರ್ಷ

ಈ ಬಾರಿ ತಮಿಳುನಾಡಿನಿಂದಿಲ್ಲ ಕಾವೇರಿ ಕ್ಯಾತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾವೇರಿ ಈಗ ಸಂತೃಪ್ತಿಯಾಗಿ ಮೈದುಂಬಿ ಹರಿಯುತ್ತಿದ್ದಾಳೆ. ಒಂದೇ ವರ್ಷದಲ್ಲಿ ಮೂರನೇ ಬಾರಿ ಕೃಷ್ಣರಾಜ ಸಾಗರ ಜಲಾಶಯ ಭರ್ತಿಯಾಗಿ ಇತಿಹಾಸ ನಿರ್ಮಾಣವಾಗಿರುವುದು ಮಾತ್ರವಲ್ಲದೆ ಬೆಂಗಳೂರಿಗೆ ಬೇಸಿಗೆಯ ನೀರಿನ ಕೊರತೆ ಕೂಡ ಕಣ್ಮರೆಯಾಗುತ್ತದೆ. ಜತೆಗೆ ತಮಿಳುನಾಡಿಗೆ ಈ ವರ್ಷ ಕರ್ನಾಟಕದಿಂದ ಹರಿಸಬೇಕಿದ್ದ ನೀರಿನ ಹಂಚಿಕೆಯ ಸಮಸ್ಯೆ ಕೂಡ ಬಗೆಹರಿದಂತಾಗಿದೆ.

ಸುಪ್ರೀಂಕೋರ್ಟ್ ಆದೇಶದ ಪ್ರಕಾರ ತಮಿಳುನಾಡಿಗೆ ವರ್ಷಕ್ಕೆ 177.25 ನೀರನ್ನು ಹರಿಸಬೇಕಿತ್ತು. ಜಲವರ್ಷ ಪ್ರಕಾರ ಜೂನ್ 2025ರಿಂದ ಇಲ್ಲಿಯವರೆಗೆ 138.014 ಟಿಎಂಸಿ ನೀರು ಬಿಳಿಗೊಂಡ್ಲು ಜಲ ಮಾಪನ ಕೇಂದ್ರದಿಂದ ತಮಿಳುನಾಡಿಗೆ ಬಿಡಬೇಕಿತ್ತು. ಈ ವರ್ಷ ಉತ್ತಮ ಮಳೆ ಹಿನ್ನೆಲೆಯಲ್ಲಿ 273.426 ಟಿಎಂಸಿ ನೀರು ಹರಿದು ಹೋಗಿದ್ದು, ಹೆಚ್ಚುವರಿಯಾಗಿ, 135.412 ಟಿಎಂಸಿ ನೀರು ಹರಿದುಹೋಗುತ್ತಿದೆ. ಹೀಗಾಗಿ ಈ ವರ್ಷ ತಮಿಳುನಾಡು ಹಾಗೂ



ಕರ್ನಾಟಕದ ಕಾವೇರಿ ನದಿ ನೀರು ಹಂಚಿಕೆ ವಿಚಾರದ ಸಮಸ್ಯೆ ಪ್ರಕೃತಿದತ್ತವಾಗಿ ಬಗೆಹರಿದಿದೆ.

ಇನ್ನೂ ಈ ವರ್ಷ ಬೆಂಗಳೂರಿನ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಇಲ್ಲ. ಕಾವೇರಿ ಜಲಾನಯನ ಪ್ರದೇಶದ ಹಾರಂಗಿ, ಕೆಆರ್‌ಎಸ್, ಕಬಿನಿ, ಹೇಮಾವತಿ ಜಲಾಶಯಗಳು ಅಕ್ಟೋಬರ್‌ನಲ್ಲಿ ಮತ್ತೆ ಭರ್ತಿಯಾಗಿ, 115 ಟಿಎಂಸಿ ನೀರು ಸಂಗ್ರಹವಿದೆ. ಇದರೊಂದಿಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕಾವೇರಿ ನೀರಾವರಿ ನಿಗಮದ 6576 ಕೆರೆಗಳು ಸಂಪೂರ್ಣವಾಗಿ ಭರ್ತಿಯಾಗಿವೆ. ಬೆಂಗಳೂರಿಗೆ ವರ್ಷಕ್ಕೆ 31 ಟಿಎಂಸಿ ನೀರು ಕುಡಿಯುವ ನೀರಿಗೆ ಬೇಕಿದೆ. ಅಂದರೆ ಪ್ರತಿ ತಿಂಗಳು ಬೆಂಗಳೂರಿಗರಿಗೆ 2.60 ಟಿಎಂಸಿ ನೀರಿನ ಅವಶ್ಯಕತೆ ಇದೆ. ಕೆಆರ್‌ಎಸ್ ಜತೆಗೆ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳು, ಕೆರೆಗಳು ಭರ್ತಿಯಾಗಿದ್ದು ಬೆಂಗಳೂರಿಗೆ ಈ ಬೇಸಿಗೆಗೆ ಕುಡಿಯುವ ನೀರಿನ ಸಮಸ್ಯೆ ತಲೆದೋರುವುದಿಲ್ಲ.

ಕೆಆರ್‌ಎಸ್ ಭರ್ತಿ ಹಿನ್ನೆಲೆ ತಮಿಳುನಾಡಿಗೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚುವರಿ ನೀರು ಹರಿದುಹೋಗುತ್ತಿದೆ. ಬಿಳಿಗೊಂಡ್ಲು ಮಾಪನ ಕೇಂದ್ರದಿಂದ ಜೂನ್ ನಲ್ಲಿ 9.19 ಟಿಎಂಸಿಗೆ ಬದಲಿಗೆ 42.256 ಟಿಎಂಸಿ, ಜುಲೈನಲ್ಲಿ 31.24 ಟಿಎಂಸಿ ಬದಲಿಗೆ 103.514 ಟಿಎಂಸಿ, ಆಗಸ್ಟ್ ನಲ್ಲಿ 45.95 ಟಿಎಂಸಿ ಬದಲಿಗೆ 51.943 ಟಿಎಂಸಿ, ಸೆಪ್ಟೆಂಬರ್‌ನಲ್ಲಿ 36.76 ಟಿಎಂಸಿ ಬದಲಿಗೆ 40.790 ಟಿಎಂಸಿ, ಅಕ್ಟೋಬರ್‌ನಲ್ಲಿ 14.35 ಟಿಎಂಸಿ ಬದಲಿಗೆ 31.344 ಟಿಎಂಸಿಯಂತೆ ಈ ವರ್ಷ ತಮಿನಾಡಿಗೆ ಇದುವರೆಗೆ 138.014 ಟಿಎಂಸಿ ನೀರಿನ ಬದಲಿಗೆ 273.426 ಟಿಎಂಸಿ ನೀರು ಹರಿದುಹೋಗಿದೆ.

93 ವರ್ಷದ ಬಳಿಕ 3ನೇ ಬಾರಿ ಕೆಆರ್‌ಎಸ್ ಭರ್ತಿ

2024ರಲ್ಲಿ ಕಾಡಿದ ಬರ 2025ರಲ್ಲಿ ಕಣ್ಮರೆಯಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿದೆ. ಪರಿಣಾಮ 93 ವರ್ಷದ ಬಳಿಕ ಕೆಆರ್‌ಎಸ್ ಜೂನ್ ನಲ್ಲೇ ಭರ್ತಿಯಾಗಿ ಇತಿಹಾಸ ಸೃಷ್ಟಿಸಿತು. ನಂತರ ಅಕ್ಟೋಬರ್ ಎರಡನೇ ವಾರದಲ್ಲಿ ಜಲಾಶಯ ಎರಡನೇ ಬಾರಿ ಭರ್ತಿಯಾಗಿತ್ತು. ಅ.18-23ರವರೆಗೆ ಅಣೆಕಟ್ಟೆಯ ಗರಿಷ್ಠ ಸಾಮರ್ಥ್ಯ 124.80 ಅಡಿಗಳಷ್ಟು ನೀರು ಸಂಗ್ರಹ ಕಾಯ್ದುಕೊಳ್ಳುವ ಮೂಲಕ ವರ್ಷದಲ್ಲಿ ಮೂರನೇ ಬಾರಿ ಜಲಾಶಯ ಭರ್ತಿಯಾಗಿ ದಾಖಲೆ ನಿರ್ಮಿಸಿದೆ. 93 ವರ್ಷದಲ್ಲಿ 16 ಬಾರಿ ಮಾತ್ರ ಕೆಆರ್‌ಎಸ್ ಭರ್ತಿಯಾಗಿಲ್ಲ.

> ಬೀದರ್‌ನಿಂದ ಚಾಮರಾಜನಗರದವರೆಗೆ, ಬಳ್ಳಾರಿಯಿಂದ ಕೋಲಾರದವರೆಗೆ ರಾಜ್ಯಾದ್ಯಂತ ಉತ್ತಮ ಮಳೆಯಾಗಿದೆ. ಜಲಾಶಯಗಳು, ಕೆರೆಕಟ್ಟೆಗಳು ಭರ್ತಿಯಾಗಿರುವುದರಿಂದ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಕೃಷಿಗೆ ಯಾವುದೇ ತೊಂದರೆ ಇಲ್ಲ. ನಮ್ಮ ಸರಕಾರ ವರುಣನ ಕೃಪೆಗೆ ಪಾತ್ರವಾಗಿದೆ.
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

- ತಮಿಳುನಾಡಿಗೆ ಹೆಚ್ಚುವರಿಯಾಗಿ 135.412 ಟಿಎಂಸಿ ನೀರು
- ಅಕ್ಟೋಬರ್‌ನಲ್ಲಿ ಮತ್ತೆ ಭರ್ತಿಯಾಗಿ, 115 ಟಿಎಂಸಿ ನೀರು ಸಂಗ್ರಹ
- ಕಾವೇರಿ ನೀರಾವರಿ ನಿಗಮದ 6576 ಕೆರೆಗಳು ಸಂಪೂರ್ಣ ಭರ್ತಿ

ವಿಶ್ವವಾಣಿ

ಸಂಪಾದಕೀಯ

ಅರಿವುಗೇಡಿ ಪಾಕಿಸ್ತಾನ

ಭಾರತದ ಮೇಲೆ ಯುದ್ಧವನ್ನೇನಾದರೂ ಮಾಡಲು ಮುಂದಾದರೆ ಪಾಕಿಸ್ತಾನಕ್ಕೆ ಸೋಲು ಖಚಿತ; ಇದರಿಂದ ಪಾಕ್‌ಗೆ ಸ್ವಲ್ಪವೂ ಅನುಕೂಲ ಆಗುವುದಿಲ್ಲ, ಈ ವಿಷಯ ಅಷ್ಟು ಸ್ಪಷ್ಟವಾಗಿದೆ ಎಂದಿದ್ದಾರೆ ಅಮೆರಿಕದ ಕೇಂದ್ರ ಗುಪ್ತಚರ ಸಂಸ್ಥೆಯ ಮಾಜಿ ಅಧಿಕಾರಿ ಜಾನ್ ಕಿರಿಯಾಕೌ. ಆದರೆ, ಈ ಸೂಕ್ಷ್ಮ ಪಾಕಿಸ್ತಾನದ ಆಳುಗರಿಗೆ ಮತ್ತು ಅಲ್ಲಿನ ಸೇನಾ ಮುಖ್ಯಸ್ಥರಿಗೆ ಇನ್ನೂ ಅರಿವಾಗದಿರುವುದು ವಿಪರ್ಯಾಸ. ಈ ಕಾರಣಕ್ಕೇ ಇರಬೇಕು, ಪಾಕ್‌ನ ಸೇನಾಮುಖ್ಯಸ್ಥ ಅಸಿಮ್ ಮುನೀರ್ ಮಹಾಶಯರು ಕಾಲು ಕೆರೆದುಕೊಂಡು ಜಗಳಕ್ಕೆ ಬರುವ ರೀತಿಯಲ್ಲಿ ಭಾರತವನ್ನು ಮತ್ತೆ ಮತ್ತೆ ಕೆಣಕುತ್ತಿರುವುದು. ಬಹುತೇಕರಿಗೆ ನೆನಪಿರಬಹುದು, ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್-ಕೃಪಾಪೋಷಿತ ಉಗ್ರರು 26 ಮಂದಿ ಅಮಾಯಕರ ಮಾರಣ ಹೋಮ ನಡೆಸಿದ ನಂತರ, ಭಾರತವು ಪಾಕಿಸ್ತಾನದ ಮೇಲೆ ಎರಗಲಿದೆ ಎಂಬ ಸುದ್ದಿ ಹಬ್ಬಿದಾಗ, 'ನಾವು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸಿಟ್ಟುಕೊಂಡಿರುವುದು ಅಲಂಕಾರಕ್ಕಾಗಿ ಅಲ್ಲ, ಅವನ್ನು ಭಾರತದ ಮೇಲೆ ಪ್ರಯೋಗಿಸಲು' ಎಂಬ ಠೇಂಕಾರದ ಮಾತುಗಳು ಪಾಕಿಸ್ತಾನದ ಕಡೆಯಿಂದ ಕೇಳಿಬಂದಿದ್ದವು; ಆದರೆ ಭಾರತವು 'ಆಪರೇಷನ್ ಸಿಂದೂರ' ಕಾರ್ಯಾಚರಣೆಯನ್ನು ಕೈಗೊಳ್ಳುತ್ತಿದ್ದಂತೆ ಪಾಕಿಸ್ತಾನದ ಈ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಬಿಲ ಸೇರಿಕೊಂಡವು ಎನಿಸುತ್ತದೆ. ಹೀಗಾಗಿ, ಭಾರತದ ದಾಳಿಯ ಏಟನ್ನು ತಡೆಯಲಾಗದೆ ಕದನವಿರಾಮದ ಘೋಷಣೆಯಾಗುವಂತೆ ಪಾಕ್ ಸೇನೆ ನೋಡಿಕೊಂಡಿತು. ಇದು ನಮ್ಮ ಶತ್ರುದೇಶದ ಸೇನಾ ಸನ್ನದ್ಧತೆ! ಇದನ್ನು ಗಮನದಲ್ಲಿಟ್ಟುಕೊಂಡೇ ಜಾನ್ ಕಿರಿಯಾಕೌ ಅವರು ಪಾಕಿಸ್ತಾನದ ಆಳುಗರಿಗೆ ಮತ್ತು ಸೇನಾ ಪ್ರಮುಖರಿಗೆ ಬುದ್ಧಿವಾದವನ್ನು ಹೇಳಿದಂತಿದೆ. ಇಷ್ಟಾಗಿಯೂ ಪಾಕಿಗಳು ಚಿತಾವಣೆಯನ್ನು ಮುಂದುವರಿಸಿದರೆ ಅದು 'ವಿನಾಶಕಾಲೇ ವಿಪರೀತ ಬುದ್ಧಿ' ಎಂಬ ಜಾಣನುಡಿಯನ್ನು ನೆನಪಿಸುವ ನಡೆಯಾಗುತ್ತದೆ, ಪಾಕಿಸ್ತಾನವು ಮತ್ತೊಂದು ಸುತ್ತು ಬರೆ ಹಾಕಿಸಿಕೊಳ್ಳಲು ಸಜ್ಜಾಗಬೇಕಾಗುತ್ತದೆ!

ಸೊಂಪಾದಕೀಯ

ನಮ್ದೇ ಅಂದ್ರೆ ಯಾರದ್ದು?

ರಾಜ್ಯ ರಾಜಕೀಯದಲ್ಲಿ ಕೆಸರೆರಚಾಟ ಜೋರಾಗೇ ಆಗುತ್ತಿದೆ. ಅತ್ತ ಪ್ರದೀಪ್ ಈಶ್ವರ್ ಮತ್ತು ಪ್ರತಾಪ್ ಸಿಂಹ ನಡುವಿನ ವಾಕ್ಸಮರ ಸಜ್ಜನರ ಕಿವಿಯಿಂದ ಕೇಳಿಸಿಕೊಳ್ಳೋಕೆ ಆಗ್ತಾ ಇಲ್ಲ ಅನ್ನೋ ಮಟ್ಟಕ್ಕೆ ಹೋಗಿದ್ದರೆ, ಇತ್ತ ಕುಮಾರಸ್ವಾಮಿ ಅವರು ರಾಜ್ಯದ ಜನತೆಗೆ ಕಿವಿ ಮಾತು ಹೇಳಿದ್ದಾರೆ. ಆಸ್ತಿ ನೋಂದಣಿ ವಿಚಾರವಾಗಿ 'ಎ' ಖಾತಾ 'ಬಿ' ಖಾತಾಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಕಾಂಗ್ರೆಸ್ ಅಧಿಕಾರದಲ್ಲಿ ಇರೋವರೆಗೂ ನೋಂದಣಿ ಮಾಡಿಸಿಕೊಳ್ಳಲು ಹೋಗಬೇಡಿ; ಕಾಂಗ್ರೆಸ್ ಸರಕಾರ ಹಗಲು ದರೋಡೆ ಮಾಡ್ತಾ ಇದೆ. ಇನ್ನೆರಡು ವರ್ಷಗಳಲ್ಲಿ ನಮ್ಮ ಸರಕಾರ ಅಧಿಕಾರಕ್ಕೆ ಬರುತ್ತದೆ. ಆಗ ಮಾಡಿಸಿಕೊಳ್ಳಿ ಅನ್ನೋದು ಕುಮಾರವಚನ. ಹಾಗಾಗಿ 'ಎ' ಖಾತಾ ಮತ್ತು 'ಬಿ' ಖಾತಾಗಳ ವಿಷಯದಲ್ಲಿ 'ಪ್ಲ್ಯಾನ್ ಬಿ'ಗೆ ರೆಡಿ ಆಗಿ ಅಂತ ರಾಜ್ಯದ ಜನರಿಗೆ ಸೂಚ್ಯವಾಗಿ ಹೇಳಿದ್ದಾರೆ ಕುಮಾರಸ್ವಾಮಿ. ಆದರೆ ಇಲ್ಲಿ 'ಎ' ಮತ್ತು 'ಬಿ' ಖಾತಾಗಳಿಗಿಂತ ಇಂಟರೆಸ್ಟಿಂಗ್ ಆಗಿ ಕಾಣಿಸುತ್ತಿರೋದು ರಾಜ್ಯದಲ್ಲಿ ನಮ್ಮ ಸರಕಾರ ಬರುತ್ತೆ ಅಂತ ಅವರು ಹೇಳಿರೋ ಮಾತು. ಅವರ ಸರಕಾರ ಅಂದ್ರೆ, ಯಾವುದು ಅನ್ನೋ ಪ್ರಶ್ನೆ ಇಲ್ಲಿ ಸಹಜ. ಯಾಕಂದ್ರೆ, ಕುಮಾರಸ್ವಾಮಿ ಅಂದ್ರೆ, ಪ್ರಾದೇಶಿಕ ಪಕ್ಷ. ಅದು ಜೆಡಿಎಸ್ ಅನ್ನೋ ಅನಿಸಿಕೆ ಇಷ್ಟು ದಿನ ಇತ್ತು. ಈಗ ಅವರು ಏಕಾಂಗಿಯಾಗಿ ಕೈ ಪಕ್ಷವನ್ನು ಎದುರಿಸೋಕಾಗಲ್ಲ ಅಂತ ಬಿಜೆಪಿ ಜತೆ ಕೈ ಜೋಡಿಸಿರೋದ್ರಿಂದ ಕುಮಾರಸ್ವಾಮಿ ಅವರು ಎಲ್ಲಿಂದ ಈ ಹೇಳಿಕೆ ಕೊಟ್ಟಿದ್ದಾರೆ ಅನ್ನೋದು ಮುಖ್ಯ ಆಗುತ್ತದೆ. ಮೊದಲೆಲ್ಲಾ ಎರಡಂಕಿ ದಾಟೋದೂ ಅನುಮಾನ ಎನ್ನುವಂಥ ಪರಿಸ್ಥಿತಿಯಲ್ಲೂ 'ಜೆಡಿಎಸ್ ಬಹುಮತ ಪಡೆದು ಅಧಿಕಾರಕ್ಕೆ ಬರುತ್ತೆ. ನಾನು ಸಿಎಂ ಆಗ್ತೀನಿ' ಅಂತ ಭಂಡತನದ ಮಾತಾಡ್ತಾ ಇದ್ದವರು ಕುಮಾರಸ್ವಾಮಿ. ಈಗ ಬಿಜೆಪಿ ಜತೆ ಸೇರಿರೋದ್ರಿಂದ ಜೆಡಿಎಸ್ ಪಕ್ಷದ ಅಸ್ತಿತ್ವವೇ ಸ್ವತಂತ್ರವಾಗಿ ಉಳಿದಿಲ್ಲ. ಹಾಗಾಗಿ ಇದು ಬಿಜೆಪಿ ಸರಕಾರದ ವತಿಯಿಂದ ಕುಮಾರಣ್ಣ ಕೊಟ್ಟಿರೋ ಹೇಳಿಕೆ ಅಂತಾದ್ರೆ. ಬಿಜೆಪಿ ಪರವಾಗಿ ಇದನ್ನ ಹೇಳಿಕೊಳ್ಳೋಕೆ ಬಿಜೆಪಿಯಲ್ಲಿ ಒಬ್ಬ ಪ್ರಮುಖ ನಾಯಕರಿಗೂ ಗತಿ ಇಲ್ಲವೇ ಅಥವಾ ಮತ್ತೆ ಬಿಜೆಪಿಯಿಂದ ಮುಖ್ಯಮಂತ್ರಿ ಆಗೋಕೆ ಕುಮಾರಸ್ವಾಮಿ ಅವರು ನಡೆಸ್ತಾ ಇರೋ ಹುನ್ನಾರ ಇದಿರಬಹುದೇ? ಅನ್ನೋ ಅನುಮಾನ ಎಲ್ಲರಿಗೂ ಬಂದರೆ ಅಚ್ಚರಿ ಏನಿಲ್ಲ.

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಶವ ಸಾಗಣೆ

ವಿಮಾನದ ಕಾರ್ಗೋ ವಿಭಾಗದಲ್ಲಿ ಮನುಷ್ಯರ ಶವಗಳನ್ನು ಸಾಗಿಸಬಹುದಾ, ಸಾಗಿಸುತ್ತಾರಾ? ಈ ಪ್ರಶ್ನೆಗೆ ಉತ್ತರ ಹೌದು. ಈ ಪ್ರಕ್ರಿಯೆ ಅತ್ಯಂತ ಸೂಕ್ಷ್ಮ, ಗೌರವಾನ್ವಿತ ಮತ್ತು ಕಟ್ಟುನಿಟ್ಟಾದ ಅಂತಾರಾಷ್ಟ್ರೀಯ ನಿಯಮಗಳನ್ನು ಒಳಗೊಂಡಿದೆ. ವಿಮಾನಯಾನದಲ್ಲಿ ಶವ ಸಾಗಣೆಯನ್ನು ವಾಯುಯಾನ ಸಂಸ್ಥೆಗಳು ತಮ್ಮ 'ಸೆರೆನಿಟಿ ಕಾರ್ಗೋ' ಅಥವಾ 'ಮಾನವ ಅವಶೇಷಗಳ ಸಾಗಣೆ' ಸೇವೆಗಳ ಅಡಿಯಲ್ಲಿ ನಿರ್ವಹಿಸುತ್ತವೆ. ಇದು ಕೇವಲ ಲಾಜಿಸ್ಟಿಕ್ಸ್ ಪ್ರಕ್ರಿಯೆಯಲ್ಲ, ಬದಲಿಗೆ ಆರೋಗ್ಯ, ಸುರಕ್ಷತೆ, ಮತ್ತು ಸಾರ್ವಜನಿಕ ಗೌರವವನ್ನು ಕಾಪಾಡುವ ಒಂದು ಮಹತ್ವದ ಕಾರ್ಯವಾಗಿದೆ. ವಿಮಾನದ ಕಾರ್ಗೋ ವಿಭಾಗವನ್ನು ವ್ಯಾಪಾರದ ಸರಕುಗಳು ಅಥವಾ ಪ್ರಯಾಣಿಕರ ಲಗೇಜ್‌ಗಳನ್ನು ಸಾಗಿಸಲು ಮಾತ್ರ ಬಳಸುವುದಿಲ್ಲ, ಇದು ನಿಧನರಾದವರ ದೇಹಗಳನ್ನು ಅವರ ಅಂತ್ಯಕ್ರಿಯೆಗಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ, ವಿಶೇಷವಾಗಿ ಅಂತಾರಾಷ್ಟ್ರೀಯ ಗಡಿಗಳಾದ್ಯಂತ ಸಾಗಿಸಲು ಬಳಸುವ ಪ್ರಮುಖ ಮಾರ್ಗೋಪಾಯವಾಗಿದೆ. ಈ ಪ್ರಕ್ರಿಯೆಯು ಅತ್ಯಂತ ಜಟಿಲವಾಗಿದ್ದು, ಕಾನೂನು, ವೈದ್ಯಕೀಯ ಮತ್ತು ವಾಯುಯಾನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಶವವನ್ನು ವಿಮಾನದಲ್ಲಿ ಸಾಗಿಸುವ ಮೊದಲು, ಹಲವಾರು ನಿರ್ಣಾಯಕ ಪೂರ್ವ ಸಿದ್ಧತೆಗಳನ್ನು ಪೂರೈಸಬೇಕು. ಈ ಹಂತಗಳು ದೇಹದ ಸಂರಕ್ಷಣೆ ಮತ್ತು ವಿಮಾನದ ನೈರ್ಮಲ್ಯ ಸುರಕ್ಷತೆಯನ್ನು ಖಚಿತಪಡಿಸಬೇಕಾಗುತ್ತದೆ. ಅಂತಾರಾಷ್ಟ್ರೀಯ ವಿಮಾನ ಸಾಗಣೆಗಾಗಿ, ಪಾರ್ಥಿವ ಶರೀರವನ್ನು ಕೆಡದಂತೆ ಸಂರಕ್ಷಿಸುವುದು (Embalming) ಕಡ್ಡಾಯ. ಮೃತದೇಹವನ್ನು ಸ್ವಚ್ಛಗೊಳಿಸಿ, ನಂಜುನಿರೋಧಕ ದ್ರಾವಣಗಳನ್ನು ಬಳಸಿ ವೈದ್ಯಕೀಯವಾಗಿ ಸಂರಕ್ಷಿಸಬೇಕಾಗುತ್ತದೆ. ಇದರಿಂದ ಹಾರಾಟದ ಸಮಯದಲ್ಲಿ ಶವ ಕೊಳೆಯುವುದಿಲ್ಲ ಮತ್ತು ಅದರಿಂದ ವಾಸನೆ ಬರುವುದಿಲ್ಲ. ಈ ಕಾರ್ಯವನ್ನು ಪ್ರಮಾಣೀಕೃತ ಲೇಪಕರು (Certified Embalmers) ಮಾತ್ರ ಮಾಡಬೇಕು. ಅವರು ನೀಡಿದ ಲೇಪನ ಪ್ರಮಾಣಪತ್ರವನ್ನು (Embalming Certificate) ವಿಮಾನಯಾನ ಸಂಸ್ಥೆಗೆ ಕೊಡಬೇಕಾಗುತ್ತದೆ. ಸಾಗಣೆಗಾಗಿ ಬಳಸುವ ಶವಪೆಟ್ಟಿಗೆಯು (Coffin/Casket) ಸಾಮಾನ್ಯ ಪೆಟ್ಟಿಗೆಯಾಗಿರುವುದಿಲ್ಲ. ಅದು ಅಂತಾರಾಷ್ಟ್ರೀಯ ವಾಯು ಸರಕು ಮಾನದಂಡಗಳನ್ನು ಒಳಗೊಂಡ ಸೀಲ್ ಮಾಡಿದ, ತವರ ಅಥವಾ ಸತು-ಲೇಪಿತ (Zinc-lined) ಒಳ ಪೆಟ್ಟಿಗೆ. ಮೃತ ದೇಹವನ್ನು ಈ ಶವಪೆಟ್ಟಿಗೆಯಲ್ಲಿ ಇರಿಸಿದ ನಂತರ, ಅದನ್ನು ಸಂಪೂರ್ಣವಾಗಿ ಗಾಳಿಯಾಡದಂತೆ ಮೊಹರು ಮಾಡಲಾಗುತ್ತದೆ ಮತ್ತು ನಂತರ ಅದನ್ನು ದೃಢವಾದ ಮರದ ಹೊರ ಪೆಟ್ಟಿಗೆಯಲ್ಲಿ (Wooden Outer Box) ಇರಿಸಲಾಗುತ್ತದೆ. ಈ ಹೊರ ಪೆಟ್ಟಿಗೆಯಲ್ಲಿ ಯಾವುದೇ ರೀತಿಯ ವಿಸರ್ಜನೆ ಅಥವಾ ವಾಸನೆ ಹೊರಹೋಗದಂತೆ ಖಚಿತಪಡಿಸಿಕೊಳ್ಳಲು ಗಟ್ಟಿಯಾದ ಪ್ಯಾಡಿಂಗ್ ಇರಬೇಕು. ಮಾನವ ಶವಗಳ ಸಾಗಣೆಯು ಗಡಿಯಾಚೆಗಿನ ಪ್ರಕ್ರಿಯೆಯಾಗಿರುವುದರಿಂದ, ಸರಕು ಸಾಗಣೆಯ ಯಾವುದೇ ಇತರ ವಸ್ತುಗಳಿಗಿಂತ ಇದು ಹೆಚ್ಚಿನ ಕಾನೂನು ಪತ್ರಗಳನ್ನು ಬಯಸುತ್ತದೆ. ಮರಣದ ಕಾರಣ, ಸ್ಥಳ ಮತ್ತು ದಿನಾಂಕವನ್ನು ದೃಢೀಕರಿಸಿದ ಮರಣ ಪ್ರಮಾಣಪತ್ರ, ಸ್ಥಳೀಯ ಪೊಲೀಸ್ (ಸಾವು ಅನುಮಾನಾಸ್ಪದವಾಗಿದ್ದರೆ) ಮತ್ತು ಸಂಬಂಧಪಟ್ಟ ದೇಶದ ರಾಯಭಾರ ಕಚೇರಿ ಅಥವಾ ದೂತಾವಾಸದಿಂದ ಶವವನ್ನು ಸಾಗಿಸಲು ಯಾವುದೇ ಆಕ್ಷೇಪಣೆ ಇಲ್ಲದ ಪ್ರಮಾಣಪತ್ರ, ಶವಪೆಟ್ಟಿಗೆಯು ವಿಮಾನಯಾನ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿದೆ ಮತ್ತು ಸಂಪೂರ್ಣವಾಗಿ ಮೊಹರು ಮಾಡಲಾಗಿದೆ ಎಂದು ಪ್ರಮಾಣೀಕರಿಸುವ ದಾಖಲೆ, ಶವವನ್ನು ಸರಕಾಗಿ ಬುಕ್ ಮಾಡಿದಾಗ ವಿಮಾನಯಾನ ಸಂಸ್ಥೆ ನೀಡುವ ಸರಕು ರಸೀದಿ ಹಾಗೂ ಶವವು ಗಮ್ಯಸ್ಥಾನದ ದೇಶವನ್ನು ಪ್ರವೇಶಿಸಲು ಅಲ್ಲಿನ ಆರೋಗ್ಯ ಅಧಿಕಾರಿಗಳ ಅನುಮತಿ ಬೇಕು. ಮಾನವ ಶವಗಳನ್ನು ವಿಮಾನದ ಮುಖ್ಯ ಕ್ಯಾಬಿನ್‌ನಲ್ಲಿ (Passenger Cabin) ಸಾಗಿಸಲು ಅನುಮತಿ ಇರುವುದಿಲ್ಲ. ಅವುಗಳನ್ನು ಕೇವಲ ಕಾರ್ಗೋ ವಿಭಾಗದ ಮೂಲಕವೇ ಸಾಗಿಸಲಾಗುತ್ತದೆ. ಶವವನ್ನು ವಿಮಾನದ ಪ್ರಯಾಣಿಕರ ಲಗೇಜ್ ಆಗಿ ಪರಿಗಣಿಸಲಾಗುವುದಿಲ್ಲ. ಅವುಗಳನ್ನು ವಿಮಾನಯಾನ ಸಂಸ್ಥೆಯ ಕಾರ್ಗೋ ಸೇವೆಗಳ ಮೂಲಕ ಮುಂಗಡವಾಗಿ ಕಾಯ್ದಿರಿಸಲಾಗುತ್ತದೆ. ವಿಮಾನಯಾನ ಸಂಸ್ಥೆಗಳು ಈ ಸಾಗಣೆಗೆ ಅತ್ಯುನ್ನತ ಆದ್ಯತೆಯನ್ನು ನೀಡುತ್ತವೆ. ಮೃತದೇಹಗಳನ್ನು ಸಾಮಾನ್ಯವಾಗಿ ವಾಣಿಜ್ಯ ಸರಕುಗಳಿಗಿಂತ ಅಥವಾ ಸಾಮಾನ್ಯ ಲಗೇಜ್‌ಗಿಂತ ಮೊದಲು ವಿಮಾನಕ್ಕೆ ಲೋಡ್ ಮಾಡಲಾಗುತ್ತದೆ.

ಡಿಸಿಎಂ ಪಟ್ಟಕ್ಕೆ ಪ್ರಿಯಾಂಕ್-ಜಮೀರ್?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಮುಂದಿನ ತಿಂಗಳ ಮೂರನೇ ವಾರ ದಿಲ್ಲಿ ದಂಡಯಾತ್ರೆಗೆ ಹೊರಡಲಿರುವ ಸಿಎಂ ಸಿದ್ದರಾಮಯ್ಯ ವರಿಷ್ಠರ ಮುಂದೆ ಹೊಸ ಪ್ರಪೋಸಲ್ಲು ಮಂಡಿಸಲಿದ್ದಾರೆ. ಈ ಪ್ರಪೋಸಲ್ಲಿಗೆ ಒಪ್ಪಿಗೆ ಸಿಕ್ಕರೆ ಇನ್ನಿಬ್ಬರು ನಾಯಕರು ಕರ್ನಾಟಕದ ಉಪಮುಖ್ಯಮಂತ್ರಿಗಳಾಗಲಿದ್ದಾರೆ. ಸಿದ್ದರಾಮಯ್ಯ ಅವರ ಆಪ್ತರ ಪ್ರಕಾರ, ಉಪಮುಖ್ಯಮಂತ್ರಿ ಪಟ್ಟಕ್ಕೆ ಬರಲಿರುವ ಈ ನಾಯಕರ ಪೈಕಿ ಒಬ್ಬರು ದಲಿತ ನಾಯಕ ಪ್ರಿಯಾಂಕ್ ಖರ್ಗೆಯವರಾದರೆ, ಮತ್ತೊಬ್ಬರು ಮುಸ್ಲಿಂ ನಾಯಕ ಜಮೀರ್ ಅಹ್ಮದ್.

ಅಂದ ಹಾಗೆ, ಉಪಮುಖ್ಯಮಂತ್ರಿ ಪಟ್ಟಕ್ಕೆ ಈ ಇಬ್ಬರು ನಾಯಕರು ಬರಬೇಕು ಅಂತ ಸಿದ್ದರಾಮಯ್ಯ ಬಯಸಲು ಕೆಲ ಕಾರಣಗಳಿವೆ. ಉದಾಹರಣೆಗೆ ಪ್ರಿಯಾಂಕ್ ಖರ್ಗೆ ಅವರನ್ನೇ ತೆಗೆದುಕೊಳ್ಳಿ. ಇವತ್ತು ಬಿಜೆಪಿ ಮತ್ತು ಸಂಘ ಪರಿವಾರದ ವಿರುದ್ಧ ಹೋರಾಡುವ ವಿಷಯದಲ್ಲಿ ಪ್ರಿಯಾಂಕ್ ಖರ್ಗೆ ಪಾತ್ರ ದೊಡ್ಡದು. ಇತ್ತೀಚೆಗೆ ಆರೆಸ್ಸೆಸ್ ವಿರುದ್ಧ ಅವರು ಮುಗಿಬಿದ್ದಿರುವ ರೀತಿಯಿಂದ ಸ್ವತಃ ರಾಹುಲ್ ಗಾಂಧಿಯವರೇ ಖುಷಿಯಾಗಿದ್ದಾರೆ ಎಂದರೆ ಕೈ ಪಾಳಯದಲ್ಲಿ ಪ್ರಿಯಾಂಕ್ ವರ್ಚಸ್ಸು ಹೆಚ್ಚುತ್ತಿದೆ ಎಂದೇ ಅರ್ಥ.

ಹೀಗೆ ಬಿಜೆಪಿ, ಆರೆಸ್ಸೆಸ್ ವಿರುದ್ಧದ ಹೋರಾಟದಿಂದ ವರಿಷ್ಠರ ಗಮನ ಸೆಳೆದಿರುವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಸಂಪುಟದಲ್ಲಿ ಡಿಸಿಎಂ ಆಗಲಿ ಅಂತ ಸಿದ್ದರಾಮಯ್ಯ ಬಯಸಿದ್ದಾರೆ. ಅವರ ಈ ಬಯಕೆಗೆ ಮತ್ತೊಂದು ಒಳ ಉದ್ದೇಶವೂ ಇದೆ. ಅದೆಂದರೆ ಕರ್ನಾಟಕದಲ್ಲಿ ಪರ್ಯಾಯ ನಾಯಕತ್ವದ ಕೂಗು ಮೇಲೇಳಲು ಕಾರಣವಾಗುತ್ತಿರುವ ಮೂಲವು 'ಕೂಲ್' ಆಗುತ್ತದೆ ಎಂಬುದು. ಇದೇ ರೀತಿ ತಮ್ಮ ಸಂಪುಟದಲ್ಲಿ ಉಪಮುಖ್ಯಮಂತ್ರಿ ಆಗಲಿ ಅಂತ ಸಿದ್ದರಾಮಯ್ಯ ಬಯಸುತ್ತಿರುವ ಮತ್ತೊಂದು ಹೆಸರೆಂದರೆ ಜಮೀರ್ ಅಹ್ಮದ್ ಅವರದ್ದು.

ಹೀಗೆ ಜಮೀರ್ ಅಹ್ಮದ್ ಅವರಿಗೆ ಪ್ರಮೋಷನ್ ಕೊಡಬೇಕು ಎಂಬ ಸಿದ್ದರಾಮಯ್ಯ ಬಯಕೆಗೆ ಜಮೀರ್ ಅವರಲ್ಲಿರುವ ಲೀಡರ್‌ಶಿಪ್ ಗುಣವೇ ಕಾರಣ. ತಮ್ಮ ಸಂಪುಟದಲ್ಲಿರುವ ಬಹುತೇಕ ನಾಯಕರು 'ಆಲ್ ಇನ್‌ಕಮಿಂಗ್ ಫ್ರೀ-ಔಟ್ ಗೋಯಿಂಗ್ ಬಾರ್' ಮೋಡ್‌ನವರಾದರೆ ಕೆಲವೇ ನಾಯಕರು 'ಆಲ್ ಇನ್‌ಕಮಿಂಗ್ ಫ್ರೀ-ಔಟ್ ಗೋಯಿಂಗೂ ಫ್ರೀ' ಮೋಡ್‌ನವರು. ಅದರಲ್ಲಿ ಜಮೀರ್ ಫ್ರಂಟ್‌ಲೈನಿನಲ್ಲಿದ್ದಾರೆ ಎಂಬುದು ಸಿದ್ದರಾಮಯ್ಯ ಅವರಿಗೆ ಗೊತ್ತು. ಹಾಗಂತ ಇದು ಸಿದ್ದರಾಮಯ್ಯ ಅವರ ಮನಸ್ಸಿಗಷ್ಟೇ ಬಂದಿರುವ ವಿಷಯವಲ್ಲ. ಬದಲಿಗೆ ಮಂಗಳೂರು ಗಲಭೆಯ ಎಪಿಸೋಡಿನ ನಂತರ ದಿಲ್ಲಿಯ ನಾಯಕರಿಗೂ ಮನವರಿಕೆ ಆಗಿರುವ ಸತ್ಯ. ಅದರ ಪ್ರಕಾರ, ಈ ಹಿಂದೆ ಮಂಗಳೂರಿನಲ್ಲಿ ಅಶ್ರಫ್ ಕೊಲೆ ಪ್ರಕರಣ ನಡೆಯಿತಲ್ಲ? ಇದರ ಬೆನ್ನ ಹಿಂದೆಯೇ ಸುಭಾಷ್ ಶೆಟ್ಟಿ ಮತ್ತು ಅಬ್ದುಲ್ ರೆಹಮಾನ್ ಅವರ ಹತ್ಯೆ ಪ್ರಕರಣಗಳು ನಡೆದವು. ಈ ಸಂದರ್ಭದಲ್ಲಿ ಅಮಾಯಕ ಅಬ್ದುಲ್ ರೆಹಮಾನ್ ಅವರ ಕುಟುಂಬಕ್ಕೆ ಪರಿಹಾರ ಕೊಡಬೇಕು ಎಂಬ ವಿಷಯ ಬಂದಾಗ, ಸರಕಾರದ ಪರಿಹಾರಕ್ಕೂ ಕಾಯದೆ ಜಮೀರ್ ಅಹ್ಮದ್ ಅವರು ಅಬ್ದುಲ್ ರೆಹಮಾನ್ ಅವರ ಕುಟುಂಬಕ್ಕೆ ದೊಡ್ಡ ಮೊತ್ತದ ಪರಿಹಾರ ನೀಡಿದ್ದಾರೆ. ಅದೇ ರೀತಿ ಅಶ್ರಫ್ ಮತ್ತು ಅಬ್ದುಲ್ ರೆಹಮಾನ್ ಗೆಳೆಯನ ಕುಟುಂಬಕ್ಕೂ ಸಿದ್ದರಾಮಯ್ಯ ಅವರ ಮುಂದೆಯೇ ಪರಿಹಾರ ಘೋಷಿಸಿದ್ದಾರೆ.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಜತೆಗಿದ್ದ ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು, ''ರೀ ಜಮೀರ್, ಆ್ಯಕ್ಚುವಲಿ ನಿಮ್ಮ ವಿಷಯದಲ್ಲಿ ನನಗೆ ಭಿನ್ನಾಭಿಪ್ರಾಯವೇ ಇತ್ತು. ಆದರೆ ಇವತ್ತು ಹೇಳುತ್ತೇನೆ. ನೀವು ನಿಜವಾದ ಹೃದಯ ಶ್ರೀಮಂತಿಕೆ ಇರುವ ನಾಯಕ. ನಾನು ಕೂಡಾ ತುಂಬಾ ಲೀಡರುಗಳನ್ನು ಹತ್ತಿರದಿಂದ ನೋಡಿದ್ದೇನೆ. ಅದರಲ್ಲಿ ಬಹುತೇಕರು ಎಂಜಲು ಕೈಯಲ್ಲಿ ಕಾಗೆ ಓಡಿಸುವವರಲ್ಲ. ದಂಡಿಯಾಗಿ ದುಡ್ಡು ಮಾಡಿದರೂ ನಾಲ್ಕು ಜನರಿಗೆ ಹಂಚುವ ಗುಣ ಹೊಂದಿದವರಲ್ಲ. ಆದರೆ, ಯೂ ಆರ್ ಎ ರಿಯಲ್ ಲೀಡರ್'' ಎಂದಿದ್ದಾರೆ.

ಮುಂದೆ ಈ ಎಪಿಸೋಡು ದಿಲ್ಲಿಯಲ್ಲೂ ಚರ್ಚೆಗೆ ಕಾರಣವಾಗಿದೆಯಲ್ಲದೆ ಜಮೀರ್ ಅಹ್ಮದ್ ಅವರ ಇಂಥ ಹಲವಾರು ದಾನ ಕಾರ್ಯಗಳ ವಿವರ ಹೊರಬಂದು ಒಂದು ಹವಾ ಎಬ್ಬಿಸಿದೆ. ಅಷ್ಟೇ ಅಲ್ಲ, ನಿಜವಾದ ನಾಯಕನಿಗೆ ಇಂಥ ಮನುಷ್ಯತ್ವದ ಗುಣಗಳಿರಬೇಕು ಎಂದು ಮಾತನಾಡಿಕೊಳ್ಳುವಂತೆ ಮಾಡಿದೆ. ಮೂಲಗಳ ಪ್ರಕಾರ, ಇಂಥ ಹಲವು ಕಾರಣಗಳಿಗಾಗಿ ಜಮೀರ್ ಅಹ್ಮದ್ ಅವರ ಹೆಸರನ್ನು ಡಿಸಿಎಂ ಹುದ್ದೆಗೆ ಶಿಫಾರಸು ಮಾಡಲು ಹೊರಟಿರುವ ಸಿದ್ದರಾಮಯ್ಯ ಅವರು ಅಂತಿಮವಾಗಿ ಪ್ರಿಯಾಂಕ್ ಖರ್ಗೆ-ಜಮೀರ್ ಅಹ್ಮದ್ ತಮ್ಮ ಸಂಪುಟದ ಹೊಸ ಜೋಡೆತ್ತುಗಳಾಗಲಿ ಎಂದು ಬಯಸಿದ್ದಾರೆ.

ಕೆಪಿಸಿಸಿ ಪಟ್ಟಕ್ಕೆ ಕೃಷ್ಣ ಭೈರೇಗೌಡ?

ಇನ್ನು, ದಿಲ್ಲಿಗೆ ಹೋದಾಗ ಹಾಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡರ ಹೆಸರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲು ಸಿದ್ದರಾಮಯ್ಯ ಬಯಸಿದ್ದಾರೆ. ವಾಸ್ತವವಾಗಿ ಈ ಹಿಂದೆ



ಲಿಂಗಾಯತ ನಾಯಕರೊಬ್ಬರನ್ನು ಕೆಪಿಸಿಸಿ ಪಟ್ಟಕ್ಕೆ ತರಬೇಕು ಅಂತ ಬಯಸಿದ್ದ ಸಿದ್ದರಾಮಯ್ಯ ಅವರು ಇದೇ ಕಾರಣಕ್ಕಾಗಿ ಅಪ್ಪಾಜಿ ನಾಡಗೌಡರ ಹೆಸರನ್ನು ಫ್ರಂಟ್‌ಲೈನಿಗೆ ತರಲು ಹೊರಟಿದ್ದರು. ಆದರೆ ಸ್ವತಃ ಅಪ್ಪಾಜಿ ನಾಡಗೌಡರಿಗೆ ಕೆಪಿಸಿಸಿ ಪಟ್ಟಕ್ಕಿಂತ ಮಂತ್ರಿಗಿರಿಯೇ ವಾಸಿ ಅನ್ನಿಸಿದೆ. ಹೀಗಾಗಿ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬರುವ ಬಗ್ಗೆ ನಿರಾಸಕ್ತಿ ವ್ಯಕ್ತಪಡಿಸಿ ಮಂತ್ರಿ ಮಂಡಲಕ್ಕೆ ಸೇರುವ ಬಗ್ಗೆ ಆಸಕ್ತಿ ತೋರಿಸಿದ್ದಾರೆ. ಪರಿಣಾಮ? ಕೆಪಿಸಿಸಿ ಅಧ್ಯಕ್ಷ ಸ್ಥಾನದ ರೇಸಿನಿಂದ ಅಪ್ಪಾಜಿ ನಾಡಗೌಡರ ಹೆಸರು ಹಿಂದೆ ಸರಿದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಹೆಸರು ಫ್ರಂಟ್‌ಲೈನಿಗೆ ಬಂದಿದೆ. ಮೂಲಗಳ ಪ್ರಕಾರ, ಸತೀಶ್ ಜಾರಕಿಹೊಳಿ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಕೂರಿಸುವ ಆಸೆ ಸಿದ್ದರಾಮಯ್ಯ ಅವರಿಗಿದ್ದರೂ ರಾಹುಲ್ ಗಾಂಧಿ ಅವರ ಮನಸ್ಸು ಅವರಿಗೆ ಅರ್ಥವಾಗಿದೆ. ಅದೆಂದರೆ ಕಂದಾಯ ಸಚಿವ ಕೃಷ್ಣ ಭೈರೇ ಗೌಡರನ್ನು ಭವಿಷ್ಯದ ನಾಯಕ ಅಂತ ರಾಹುಲ್ ಗಾಂಧಿ ಭಾವಿಸಿರುವುದು. ರಾಹುಲ್ ಗಾಂಧಿ ಅವರ ಈ ಮನದಿಂಗಿತ ಅರ್ಥವಾಗಿರುವುದರಿಂದ ಕೃಷ್ಣ ಭೈರೇಗೌಡರು ಕೆಪಿಸಿಸಿ ಅಧ್ಯಕ್ಷರಾಗಲಿ ಅಂತ ಸಿದ್ದು ಕೂಡಾ ಬಯಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಕೃಷ್ಣ ಭೈರೇಗೌಡರ ಹೆಸರನ್ನು ಸೂಚಿಸಿದರೆ ರಾಹುಲ್ ಗಾಂಧಿ ಖುಷಿಯಾಗುತ್ತಾರೆ ಎಂಬುದು ಸಿದ್ದು ಲೆಕ್ಕಾಚಾರ.

ಇಂಥ ಲೆಕ್ಕಾಚಾರದ ನಂತರ ಸಂಪುಟ ಪುನಾರಚನೆಗೆ ಗ್ರೀನ್ ಸಿಗ್ನಲ್ ಪಡೆಯಲಿರುವ ಸಿದ್ದರಾಮಯ್ಯ, ಹಾಲಿ ಮಂತ್ರಿ ಮಂಡಲದಿಂದ ಯಾರನ್ನು ಬಿಡಬೇಕು? ಯಾರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು? ಎಂಬ ಬಗ್ಗೆ ತಮ್ಮ ಕೈಲಿರುವ ಪಟ್ಟಿಯನ್ನು ವರಿಷ್ಠರಿಗೆ ನೀಡಲಿದ್ದಾರೆ. ಮೂಲಗಳ ಪ್ರಕಾರ, ಹಾಲಿ ಸಂಪುಟದಲ್ಲಿರುವ ಬಹುತೇಕ ಸೀನಿಯರ್ ಮಂತ್ರಿಗಳು ಸಂಪುಟದಿಂದ ಹೊರಬೀಳಲಿದ್ದು ಅವರ ಜಾಗಕ್ಕೆ ಹಲವು ಮಂದಿ ಹಿರಿಯ ಶಾಸಕರು ಬರಲಿದ್ದಾರೆ. ಇದೇ ರೀತಿ, ಈ ಬಾರಿಯ ದಿಲ್ಲಿ ಭೇಟಿಯ ಸಂದರ್ಭದಲ್ಲಿ ತಮ್ಮ ನಾಯಕತ್ವದ ಅನಿವಾರ್ಯತೆಯ ಬಗ್ಗೆ ಸಿದ್ದರಾಮಯ್ಯ ವರಿಷ್ಠರಿಗೆ ಮನದಟ್ಟು ಮಾಡಿಕೊಡಲಿದ್ದಾರೆ ಎಂಬುದು ಅವರ ಪಾಳಯದ ವರ್ತಮಾನ.

ಕುಮಾರಣ್ಣನಿಗೆ ಅಮಿತ್ ಶಾ ಸಿಗ್ನಲ್ಲು

ಈ ಮಧ್ಯೆ, ಕರ್ನಾಟಕದ ರಾಜಕಾರಣದ ಮೇಲೆ ಹೆಚ್ಚೆಚ್ಚು ಗಮನವಿಡುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಚ್.ಡಿ.ಕುಮಾರಸ್ವಾಮಿ ಅವರಿಗೆ ಸೂಚಿಸಿದ್ದಾರಂತೆ. ಕಾರಣ? ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಗಾಗಿ ನಡೆಯುತ್ತಿರುವ ಶೀತಲ ಸಮರವು ನವೆಂಬರ್ ಮಧ್ಯಭಾಗದಿಂದ ತೀವ್ರರೂಪ ಪಡೆಯಲಿದೆ ಎಂಬುದು ಅಮಿತ್ ಶಾ ಅವರ ಲೆಕ್ಕಾಚಾರ.

ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರಬಂದ ನಂತರ ಸಿದ್ದರಾಮಯ್ಯ ಅವರು ಅಧಿಕಾರ ಹಸ್ತಾಂತರಕ್ಕೆ ಒಪ್ಪಲಿ, ಒಪ್ಪದೆ ಇರಲಿ; ಆದರೆ ಕಾಂಗ್ರೆಸ್ ಪಾಳಯದಲ್ಲಿ ಘಟಸ್ಫೋಟ ಶತಸ್ಸಿದ್ಧ ಎಂಬುದು ಅಮಿತ್ ಶಾ ಅವರ ಲೆಕ್ಕಾಚಾರ. ಹೀಗಾಗಿ ತಲ್ಲಣಗೊಳ್ಳಲಿರುವ ಕಾಂಗ್ರೆಸ್ ಪಾಳಯವನ್ನು ಮತ್ತಷ್ಟು ತಲ್ಲಣಗೊಳಿಸಲು ಸಜ್ಜಾಗುವಂತೆ ಅಮಿತ್ ಶಾ ಅವರು ಎಚ್.ಡಿ.ಕುಮಾರಸ್ವಾಮಿ ಅವರಿಗೆ ಸೂಚಿಸಿದ್ದಾರೆ. ಹೀಗೆ ಅಮಿತ್ ಶಾ ಅವರಿಂದ ಸೂಚನೆ ಪಡೆದ ಕುಮಾರ ಸ್ವಾಮಿ ಅವರು ರಾಜ್ಯ ಕಾಂಗ್ರೆಸ್‌ನ ಹಲವು ನಾಯಕರು, ಸಚಿವರ ಭ್ರಷ್ಟಾಚಾರದ ಹಗರಣಗಳನ್ನು ಬಯಲು ಮಾಡಲು ಅಣಿಯಾಗುತ್ತಿದ್ದಾರೆ. ಮತ್ತದೇ ಕಾರಣಕ್ಕಾಗಿ ಅವರ ಬಳಿ ಇರುವ ಹಲವು ಮಹತ್ವದ ದಾಖಲೆಗಳು ಬಹಿರಂಗವಾಗಲಿವೆ ಎಂಬುದು ಲೇಟೆಸ್ಟ್ ನ್ಯೂಸು.

ಬಿಜೆಪಿಯಲ್ಲಿ ಜಿಬಿಎ ಕಿರಿಕಿರಿ

ಉಳಿದಂತೆ ರಾಜ್ಯ ಬಿಜೆಪಿ ಪಾಳಯದಲ್ಲಿ ಜಿಬಿಎ ಕಿರಿಕಿರಿ ಶುರುವಾಗಿದೆ. ಕಾರಣ? ಗ್ರೇಟರ್ ಬೆಂಗಳೂರು ಅಥಾರಿಟಿಗೆ ಮುಂದಿನ ದಿನಗಳಲ್ಲಿ ನಡೆಯುವ ಚುನಾವಣೆಗೆ ಬಿಜೆಪಿ ನಡೆಸಿರುವ ತಯಾರಿ. ಈ ತಯಾರಿಯ ಭಾಗವಾಗಿ ಐದು ಭಾಗಗಳಿಗೆ ಚುನಾವಣಾ ಉಸ್ತುವಾರಿಗಳನ್ನು ಪಕ್ಷ ನೇಮಕ ಮಾಡಿದ ನಂತರ ಪಕ್ಷದಲ್ಲಿ ಒಂದು ಹಾಹಾಕಾರ ಎದ್ದಿದೆ. ಕಾರಣ? ಇಂಥ ಉಸ್ತುವಾರಿಗಳನ್ನು ನೇಮಕ ಮಾಡುವಾಗ ಹಿರಿಯ ನಾಯಕರಾದ ಅರವಿಂದ ಲಿಂಬಾವಳಿ, ರವಿ ಸುಬ್ರಹ್ಮಣ್ಯ, ಎನ್.ಆರ್.ರಮೇಶ್ ಅವರ ಹೆಸರುಗಳನ್ನು ಪರಿಗಣಿಸಿಯೇ ಇಲ್ಲ.

ಹೀಗಾಗಿ ರಾಜಧಾನಿಯ ಬಿಜೆಪಿ ಪಾಳಯದಲ್ಲಿ ಕಲರವ ಶುರುವಾಗಿದೆಯಲ್ಲದೆ ಇದಕ್ಕೆಲ್ಲ ಬೆಂಗಳೂರಿನ ಒಬ್ಬರು ಲೀಡರೇ ಕಾರಣ ಎಂಬ ಕೂಗೂ ಕೇಳಿಬರುತ್ತಿದೆ. ಕುತೂಹಲದ ಸಂಗತಿ ಎಂದರೆ ಈ ಎಪಿಸೋಡಿನಲ್ಲಿ, ಪಕ್ಷದ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರ ಹೆಸರು ತಪ್ಪಿಯೂ ಕೇಳುತ್ತಿಲ್ಲ. ಸ್ವತಃ ಅಸಮಾಧಾನಿತರು ಕೂಡಾ 'ಜಿಬಿಎ ಎಲೆಕ್ಷನ್‌ಗೆ ಸಂಬಂಧಿಸಿದ ತಯಾರಿಯಲ್ಲಿ ವಿಜಯೇಂದ್ರ ಮೂಗು ತೂರಿಸಿಲ್ಲ, ಯಾಕೆಂದರೆ ಬೆಂಗಳೂರಿನ ರಾಜಕಾರಣದ ವಿಷಯದಲ್ಲಿ ಅವರಿಗೀಗ ಆಸಕ್ತಿಯೂ ಇಲ್ಲ, ಆದರೆ ವಿಜಯೇಂದ್ರ ಅವರ ಈ ನಿರಾಸಕ್ತಿಯ ಲಾಭ ಪಡೆದು ಬೆಂಗಳೂರಿನ ಒಬ್ಬ ನಾಯಕರು ಆಟವಾಡುತ್ತಿದ್ದಾರೆ' ಎಂದು ಸಿಟ್ಟು ಕಾರಿಕೊಳ್ಳುತ್ತಿದ್ದಾರೆ.

ಮುಂದೇನಾಗುತ್ತದೋ ಕಾದು ನೋಡಬೇಕು.

ಲಾಸ್ಟ್ ಸಿಪ್: ಅಂದ ಹಾಗೆ, ಅಧಿಕಾರ ಹಂಚಿಕೆಯ ವಿಷಯದಲ್ಲಿ ಏನೇ ಕೇಳುತ್ತಿರಲಿ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕ್ಯಾಂಪು ಮಾತ್ರ ಫುಲ್ಲು ಕಾನ್ಫಿಡೆಂಟ್ ಆಗಿದೆ. ಅದರ ಪ್ರಕಾರ, ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶ ಬಂದ ನಂತರ ವರಿಷ್ಠರು ಸಿದ್ದರಾಮಯ್ಯ ಅವರನ್ನು ದಿಲ್ಲಿಗೆ ಆಹ್ವಾನಿಸಲಿದ್ದಾರೆ. ಈ ಆಹ್ವಾನದ ಮೇರೆಗೆ ವರಿಷ್ಠರನ್ನು ಭೇಟಿ ಮಾಡಲಿರುವ ಸಿದ್ದರಾಮಯ್ಯ ಅವರಿಗೆ ಅಧಿಕಾರ ತ್ಯಾಗ ಮಾಡುವಂತೆ ಸೂಚನೆ ನೀಡಲಾಗುತ್ತದೆ. ಇದಾದ ನಂತರ ಡಿಕೆಶಿ ಸಿಎಂ ಆಗಲು ಅಣಿಯಾಗುತ್ತಾರೆ ಎಂಬುದು ಆ ಕ್ಯಾಂಪಿನ ನಂಬಿಕೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಶ್ಲಾಘನೀಯ ಬೆಳವಣಿಗೆ

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) 2024-25ನೇ ಸಾಲಿನಲ್ಲಿ ಗಳಿಸಿದ 451 ಕೋಟಿ ರುಪಾಯಿ ಲಾಭದಲ್ಲಿ ಶೇ.30ರಷ್ಟು ಲಾಭಾಂಶದ ಬಾಬ್ತು 135 ಕೋಟಿ ರುಪಾಯಿಗಳ ಚೆಕ್ ಅನ್ನು ಮುಖ್ಯಮಂತ್ರಿಗಳಿಗೆ ಹಸ್ತಾಂತರಿಸಿರುವುದು ಶ್ಲಾಘನೀಯ. ಕೆಎಸ್‌ಡಿಎಲ್‌ನ ಲಾಭಗಳಿಕೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದು ಸಂತಸದ ಸಂಗತಿ. ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ಸಿಲ್ಕ್, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಲ್ಯಾಂಪ್ಸ್, ಮೈಸೂರು ಪೇಪರ್ ಮಿಲ್ಸ್ ಹೀಗೆ ಸರಕಾರಿ ಸಂಸ್ಥೆಗಳು ಉತ್ಪಾದಿಸುವ ವಸ್ತುಗಳನ್ನು ಮಿಕ್ಕ ಸರಕಾರಿ ಸಂಸ್ಥೆಗಳು ಕೊಳ್ಳುವ ಮೂಲಕ ಅವನ್ನು ಲಾಭದತ್ತ ಕೊಂಡೊಯ್ಯುವಂತಾಗಬೇಕು ಎಂಬ ಆಶಯದೊಂದಿಗೆ ನಿಯಮವನ್ನು ರೂಪಿಸಿದ್ದರು. ಅಂತೆಯೇ ಈ ಸಂಸ್ಥೆಗಳು ಲಾಭದಲ್ಲೇ ಇದ್ದವು. ಆದರೆ ಕಾಲಾನುಕ್ರಮದಲ್ಲಿ ಬಂದ ಜನಪ್ರತಿನಿಧಿಗಳ ಸರಕಾರಗಳು ಈ ನಿಯಮವನ್ನು ಗಾಳಿಗೆ ತೂರಿ, ಖಾಸಗಿ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವತ್ತ ಗಮನಹರಿಸಿದವು. ಹೀಗಾಗಿ ಕೆಲ ಸರಕಾರಿ ಸಂಸ್ಥೆಗಳು ಅವನತಿಯತ್ತ ಸಾಗಿದವು. ಜನಪ್ರತಿನಿಧಿಗಳು ಇನ್ನಾದರೂ ಎಚ್ಚೆತ್ತು ಹಳೆಯ ನಿಯಮವನ್ನು ಜಾರಿಗೆ ತಂದರೆ, ಮಿಕ್ಕೆಲ್ಲಾ ಸರಕಾರಿ ಸಂಸ್ಥೆಗಳು ಲಾಭದತ್ತ ಸಾಗುವುದರಲ್ಲಿ ಸಂಶಯವಿಲ್ಲ.

-**ಬೆಸಗರಹಳ್ಳಿ ರವಿ ಪ್ರಸಾದ್**, ಮೈಸೂರು

ಜ್ವಲಂತ ಸಮಸ್ಯೆ

'ಕುವರಿ ಆದೊಡೆ ಕುಂದೇನು?' ಶೀರ್ಷಿಕೆಯ ಸಂಪಾದಕೀಯವು (ಅ.25) ಜ್ವಲಂತ ಸಮಸ್ಯೆಯನ್ನೇ ಚರ್ಚಿಸಿದೆ. ಒಂದೆಡೆ, 'ನಾರಿ ಸರ್ವತ್ರ ಪೂಜಯೇತ್' ಎನ್ನುವವರು, ಇನ್ನೊಂದೆಡೆ ಇದೇ ಹೆಣ್ಣು ಜನ್ಮ ತಳೆಯುವುದಕ್ಕೂ ಕಂಟಕಪ್ರಾಯರಾಗಿರುವುದು ವಿಪರ್ಯಾಸ! ಇಂದು ಶಿಕ್ಷಣ, ಆಡಳಿತ, ಕ್ರೀಡೆ ಹೀಗೆ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರೂ ಅಲ್ಲೆಲ್ಲ ಮಹಿಳೆಯರದೇ ಪಾರುಪತ್ಯ. ಅಷ್ಟೇಕೆ, ಮದುವೆಯ ಸಮಯದಲ್ಲೂ ಹೆಣ್ಣು ಏನು ನಿರ್ಧಾರ ತೆಗೆದುಕೊಳ್ಳುತ್ತಾಳೋ ಅದೇ ಮುಖ್ಯ; ತಂದೆ-ತಾಯಿ ಸಮೇತ ಉಳಿದವರೆಲ್ಲರೂ ಒಪ್ಪಿಗೆ ಕೊಟ್ಟರೂ, ಹೆಣ್ಣು ಒಪ್ಪಿಲ್ಲ ಅಂದರೆ ಅದೇ ಅಂತಿಮವಾಗುತ್ತದೆ. ಅದನ್ನು ಯಾರೂ ಪ್ರಶ್ನಿಸುವುದಿಲ್ಲ, ಅಷ್ಟು ಮಟ್ಟಿಗಿನ ಸ್ವಾತಂತ್ರ್ಯ ಆಕೆಗಿದೆ. ಶಿಕ್ಷಣ ಕ್ಷೇತ್ರದಲ್ಲೂ ಆಕೆ ಯಾವ ರೀತಿಯಲ್ಲೂ ಕಡಿಮೆಯಿಲ್ಲ. ಇಷ್ಟಿದ್ದರೂ ಭ್ರೂಣ ತಪಾಸಣೆ, ಹೆಣ್ಣು ಭ್ರೂಣಹತ್ಯೆ ಏಕೆ ಮುಂದುವರಿಯುತ್ತಿವೆ ಎಂಬುದು ರಹಸ್ಯ. ಇದನ್ನು ತಡೆಯುವ ಕಾನೂನುಗಳಿದ್ದರೂ, ಕೆಲವಷ್ಟು ಪಾಲಕರ ಧಾರ್ಷ್ಟ್ಯ ಮುಂದುವರಿದಿರುವುದು ಹೇಗೆ ಮತ್ತು ಹೆಣ್ಣು ಸಂತತಿಯ ಬಗ್ಗೆ ಅವರು ತಾತ್ಸಾರವನ್ನು ಹೊಂದಿರುವುದು ಏಕೆ? ಎಂಬುದು ಅರ್ಥವಾಗುತ್ತಿಲ್ಲ.

- **ಶಂಕರನಾರಾಯಣ ಭಟ್**, ಮಾಡಗೇರಿ

ಇದೆಂಥ ವಿಚಿತ್ರ?!

ಹಚ್ಚೆಯ ವಿಲಕ್ಷಣ ಗೀಳಿನ ಕುರಿತಾದ 'ಶಿಶಿರಕಾಲ' ಅಂಕಣ ಬರಹವನ್ನು ಓದಿದಾಗ (ಅ.24) ಮೂರು ಮಾಹಿತಿಗಳು/ಓದುಗಳು ನೆನಪಾದವು. ಮೊದಲನೆಯದು-ದಕ್ಷಿಣ ಆಫ್ರಿಕಾದ ಬುಡಕಟ್ಟು ಜನಾಂಗವೊಂದರ ಜನರು ಮೈಗೆಲ್ಲಾ ಬಣ್ಣವನ್ನು ಬಳಿದುಕೊಳ್ಳುತ್ತಾರಂತೆ. ಕಾರಣ ಕೇಳಿದರೆ, 'ಹಾಗೇ ಇರಲು ನಾವೇನು ಪ್ರಾಣಿಗಳಾ?' ಎಂದು ಕೇಳುತ್ತಾರಂತೆ! ಅತಿರೇಕದ ಹಚ್ಚೆಗೆ ಒಡ್ಡಿಕೊಂಡಿರುವವರಲ್ಲಿ ಈ ಪ್ರಜ್ಞೆಯೇ ಸುಪ್ತವಾಗಿ ಕೆಲಸ ಮಾಡುತ್ತಿರಬಹುದೇ? ಎಂಬ ಅನುಮಾನ ನನ್ನದು. ಎರಡನೆಯದು, ಸಾಕಷ್ಟು ವರ್ಷಗಳ ಹಿಂದೆ 'ಸುಧಾ' ವಾರಪತ್ರಿಕೆಯಲ್ಲಿ 'ಅದ್ಭುತ-ರಮ್ಯ' ಎಂಬ ಅಂಕಣ ಬರುತ್ತಿತ್ತು. ಅದರಲ್ಲಿ ಓದಿದ್ದ ಸಂಗತಿಯಿದು: ಕೆಲವರು ಚಿಕ್ಕ ಗಾಜಿನ ಟ್ಯೂಬ್‌ನಲ್ಲಿ ಹಾವಿನ ಮರಿಯನ್ನು ಸಾಕಿರುತ್ತಾರೆ; ಚಟವಾದಾಗಲೆಲ್ಲಾ ಅದರ ಮುಚ್ಚಳ ತೆಗೆದು, ತಮ್ಮ ನಾಲಿಗೆ ಚಾಚಿ, ಹಾವಿನ ಮರಿಯಿಂದ ಕಡಿಸಿಕೊಂಡು ಸುಖಿಸುತ್ತಾರಂತೆ! ಮೂರನೆಯದು, ಎ.ಕೆ. ರಾಮಾನುಜನ್‌ರ ಒಂದು ಕನ್ನಡ ಪದ್ಯದಲ್ಲಿ ಕಾಮಪೀಡಿತ ನಗ್ನ ಸನ್ಯಾಸಿಯೊಬ್ಬ ಕೆಂಪು ಇರುವೆಯ ಹುತ್ತದ ಬಳಿ ನಿಂತು, ಒಂದೊಂದು ಇರುವೆ ಕಚ್ಚಿದಾಗಲೂ 'ಮಹಾಸುಖ, ಮಹಾಸುಖ' ಎನ್ನುತ್ತಾನೆ! ಒಟ್ಟಿನಲ್ಲಿ, 'ಲೋಕೋ ಭಿನ್ನ ರುಚಿಃ' ಅನ್ನೋ ಮಾತು ನಿಜ!

-**ಎಸ್.ಎಲ್.ಎಂ. ಪಾಟೀಲ**, ಬೆಳಗಾವಿ

ಕೃತಕ ಬುದ್ಧಿಮತ್ತೆಯ ಕಲಿಕೆ ಮಕ್ಕಳಲ್ಲಿ ನೈತಿಕ ಮೌಲ್ಯ ಬೆಳೆಸಬಲ್ಲದೇ?

ಯಕ್ಷಪ್ರಶ್ನೆ

ಸುರೇಂದ್ರ ಪೈ, ಭಟ್ಕಳ

vveditoped@gmail.com

ಕೇಂದ್ರವು 2026-27ನೇ ಸಾಲಿನಿಂದ 3ನೇ ತರಗತಿಯಿಂದ ಸಿಬಿಎಸ್‌ಇ ಪಠ್ಯಕ್ರಮದಲ್ಲಿ 'ಕೃತಕ ಬುದ್ಧಿಮತ್ತೆ' (ಎಐ) ಕಲಿಕೆಯನ್ನು ಸೇರ್ಪಡೆ ಮಾಡಲು ಮುಂದಾಗಿದ್ದು, ಇದು ನಿಜಕ್ಕೂ ಮರುಪರಿಶೀಲನೆಗೆ ಒಳಪಡಬೇಕಾದ ಸಂಗತಿಯಾಗಿದೆ. ಕಾರಣ, ಇಂದಿನ ಮಕ್ಕಳಿಗೆ ಬೇಕಿರುವುದು 'ಎಐ' ಶಿಕ್ಷಣವಲ್ಲ, ಬದಲಾಗಿ ನೈತಿಕ ಮತ್ತು ಮೌಲ್ಯ ಶಿಕ್ಷಣ. ಇದನ್ನು ಸರಕಾರವು ಮರೆತಂತಿದೆ. ಈಗಾಗಲೇ 'ಜೆನ್ ಝೀ' ಪೀಳಿಗೆಯವರು ಪ್ರಾರಂಭದಲ್ಲೇ ಎಲ್ಲವನ್ನೂ ಕಲಿತು ಯಾವ ಹಂತಕ್ಕೆ ಹೋಗಿದ್ದಾರೆ ಎಂಬುದಕ್ಕೆ ಇತ್ತೀಚಿನ ಹಲವಾರು ಘಟನೆಗಳೇ ಜ್ವಲಂತ ಸಾಕ್ಷಿಯಾಗಿವೆ. ಪಾಲಕರು ಅನ್ಯಾನ್ಯ ಕಾರಣದಿಂದಾಗಿ ಮಕ್ಕಳ ಪೋಷಣೆಯಲ್ಲಿ ತಾವು ತೋರಿದ ನಿರ್ಲಕ್ಷ್ಯದಿಂದಾಗಿ ತಂತ್ರಜ್ಞಾನಕ್ಕೆ ಒಗ್ಗಿಕೊಂಡು, ಅದನ್ನೇ ಜೀವನದ ಅವಿಭಾಜ್ಯ ಅಂಗವೆಂದು ಭಾವಿಸಿಯಾಗಿದೆ. ಇದು ಗೊತ್ತಿದ್ದೂ ಸರಕಾರವು ಪ್ರೈಮರಿ ಹಂತದಲ್ಲೇ ಮಕ್ಕಳಿಗೆ 'ಎಐ ಟೂಲ್' ಸಂಬಂಧಿತ ಪಠ್ಯಕ್ರಮವನ್ನು ಅಳವಡಿಸುವ ತಯಾರಿ ನಡೆಸಿರುವುದು ಆತಂಕಕಾರಿ.

ಆಧುನಿಕ ಅವಶ್ಯಕತೆಗೆ ತಕ್ಕಂತೆ ಬೋಧನಾ ವಿಷಯದಲ್ಲಿ ಬದಲಾವಣೆ ಆಗಬೇಕಿರುವುದೇನೋ ಸರಿ. ಅದಕ್ಕೂ ಮೊದಲು ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಸಿಗಬೇಕಾದ 'ತಳಹದಿ ಮಟ್ಟದ ಕಲಿಕೆ'ಯ ಕಡೆಗೆ ಒತ್ತುನೀಡಬೇಕಲ್ಲವೇ? ಶಿಕ್ಷಣದ ನಿಜವಾದ ಉದ್ದೇಶ ಸರಿ-ತಪ್ಪುಗಳನ್ನು ಅರಿಯುವಿಕೆ. ಇಂದು ಪಾಲಕರ ಸಭೆಯಲ್ಲಿ ಭಾಗವಹಿಸುವ ಬಹುತೇಕರು, ''ಅಯ್ಯೋ, ನಮ್ಮ ಮಕ್ಕಳು ಮನೆಗೆ ಬಂದ ತಕ್ಷಣವೇ ಮೊಬೈಲ್ ಹಿಡಿದು ಕೂರುತ್ತಾರೆ'' ಎಂದು ಗೋಳಿಡುತ್ತಾರೆ. ಶಾಲೆಯಲ್ಲಿ ಪ್ರಾಜೆಕ್ಟ್ ನೀಡಿದ್ದಾರೆ, ನೋಟ್ಸ್ ಕೊಟ್ಟಿದ್ದಾರೆ ಎಂದೆಲ್ಲಾ ಸುಳ್ಳು ಕಾರಣ ನೀಡಿ ಮಕ್ಕಳು ಪಾಲಕರನ್ನೇ ಯಾಮಾರಿಸುತ್ತಿರುವುದು ವಾಡಿಕೆಯಾಗಿ ಬಿಟ್ಟಿದೆ.

ಇದೆಲ್ಲವೂ ಶುರುವಾಗಿದ್ದು ಕರೋನಾ ಕಾಲಘಟ್ಟದಲ್ಲಿ. ಕರೋನಾ ಅಪ್ಪಳಿಸುವುದಕ್ಕೂ ಮೊದಲು ಮಕ್ಕಳು ಸಾಮಾಜಿಕ ಜಾಲತಾಣಗಳಿಂದ ಸಾಕಷ್ಟು ಅಂತರವನ್ನು ಕಾಯ್ದುಕೊಂಡಿದ್ದರು. ಶಾಲೆಗಳು ಕೂಡ ಆನ್‌ಲೈನ್ ಶಿಕ್ಷಣದಿಂದ ದೂರವಿದ್ದವು. ಆಗೆಲ್ಲಾ ಮಕ್ಕಳ ಕಲಿಕೆಯಲ್ಲಿ ನೈಜತೆ, ಕ್ರಿಯಾಶೀಲತೆ, ಅನ್ವೇಷಣಾ ಸಾಮರ್ಥ್ಯಗಳು ಕಂಡುಬರುತ್ತಿದ್ದವು. ಆನ್‌ಲೈನ್ ಬೋಧನಾ ಕ್ರಮಕ್ಕೆ ಅನಿವಾರ್ಯವಾಗಿ ಒಡ್ಡಿಕೊಳ್ಳಬೇಕಾಗಿ ಬಂದಾಗ, ಅದರ ಪರಿಣಾಮ ವೆಂಬಂತೆ ಮಕ್ಕಳು ಸಾಮಾಜಿಕ ಜಾಲತಾಣಗಳ ಚಟಕ್ಕೆ ಬಿದ್ದರು. ಮೊಬೈಲ್‌ನಲ್ಲಿ ನೋಡಿದ್ದೇ ಸರಿ, ಓದಿದ್ದೇ ನಿಜ ಎಂಬ ಗ್ರಹಿಕೆಗೆ ಒಳಗಾದರು. ಗ್ರಂಥಾಲಯಗಳಿಗೆ ಭೇಟಿನೀಡುವುದನ್ನು ಮರೆತರು, ಸುಳ್ಳನ್ನೇ ಸತ್ಯವೆಂದು ನಂಬಿ ಅದನ್ನೇ ಪರೀಕ್ಷೆಯಲ್ಲಿ ಬರೆಯಲು ಮುಂದಾದರು. ನೋಡನೋಡುತ್ತಿದ್ದಂತೆ 'ಆನ್‌ಲೈನ್ ಕಲಿಕೆಯೇ ಇಂದಿನ ಅವಶ್ಯಕತೆ' ಎನ್ನುವಷ್ಟರ ಮಟ್ಟಿಗೆ ಪ್ರಚಾರ ಮಾಡಲಾಯಿತು. ಅನೇಕ ಖಾಸಗಿ ಕಂಪನಿಗಳು ಶೈಕ್ಷಣಿಕ ಆ್ಯಪ್‌ಗಳನ್ನು ಸೃಷ್ಟಿಸಿ ಕೋಟ್ಯಂತರ ರುಪಾಯಿಯನ್ನು ಲಪಟಾಯಿಸಿದವು. ವಾಸ್ತವವಾಗಿ, ಊಟದೆಲೆಯಲ್ಲಿ ಉಪ್ಪಿಗೆ/ಉಪ್ಪಿನಕಾಯಿಗೆ ಇರುವಷ್ಟು ಪ್ರಾಮುಖ್ಯದ ಮಟ್ಟಕ್ಕೆ ಕಲಿಕೆಯನ್ನು ಆಸಕ್ತಿದಾಯಕವಾಗಿಸುವುದಕ್ಕೆ ಮಾತ್ರವೇ ತಂತ್ರಜ್ಞಾನ ಆಧಾರಿತ ಕಲಿಕೆ ಇರಬೇಕಿತ್ತು. ಮಕ್ಕಳ ಮನೋವೈಜ್ಞಾನಿಕ ಹಿನ್ನೆಲೆಯನ್ನು/ಧೋರಣೆಯನ್ನು ಆಧರಿಸಿ ಹೇಳುವುದಾದರೆ, 45 ನಿಮಿಷ ಅವಧಿಯ ಒಂದು ತರಗತಿಯಲ್ಲಿ ಮಕ್ಕಳು ಕೇವಲ 10-15 ನಿಮಿಷದವರೆಗೆ ತಮ್ಮ ಅವಧಾನವನ್ನು ವಿಷಯದತ್ತ ಕೇಂದ್ರೀಕರಿಸಲು ಸಾಧ್ಯ. ಹಾಗಾಗಿ ಕಲಿಕೆಯನ್ನು ಪುನರಾವರ್ತಿಸುವಲ್ಲಿ ದೃಕ್-ಶ್ರವಣ ಸಾಧನಗಳು, 'ಎಐ' ಉಪಕರಣಗಳು ಸೀಮಿತ ವ್ಯಾಪ್ತಿಯಲ್ಲಿ ಪ್ರಭಾವ ಬೀರುತ್ತವೆ. ಹಾಗಾಗಿ ಒಂದು ಹಂತದಲ್ಲಿ ಇವು ಉಪಯುಕ್ತ. ಆದರೆ, ಇವನ್ನು ಕಲಿಕೆಯ ಜತೆಜತೆಯಲ್ಲಿ ನಿತ್ಯದ ಪಠ್ಯಕ್ರಮದ ಭಾಗವನ್ನಾಗಿಸಬೇಕೇ ವಿನಾ, ಕಲಿಕೆಯಿಂದ ಪ್ರತ್ಯೇಕವಾಗಿಸುವುದು ತಪ್ಪು.

ಪ್ರೈಮರಿ ಹಂತದಲ್ಲಿ ಮಕ್ಕಳಿಗೆ ಬೇಕಿರುವುದು 'ಎಐ' ಶಿಕ್ಷಣವಲ್ಲ, ಬದಲಾಗಿ ಆಧುನಿಕ ತಂತ್ರಜ್ಞಾನದ ಜಗತ್ತಿನಲ್ಲಿ ನಿತ್ಯವೂ ಕಳೆದು ಹೋಗುತ್ತಿರುವ ಮೌಲ್ಯ ಮತ್ತು ನೈತಿಕ ಸಂಸ್ಕಾರಯುತ ಶಿಕ್ಷಣ. ಆಧುನಿಕತೆಗೆ ತಕ್ಕಂತೆ ಮಕ್ಕಳಿಗೆ ತಂತ್ರಜ್ಞಾನ-ಆಧರಿತ ಶಿಕ್ಷಣವನ್ನು ನೀಡಬೇಕು, ನಿಜ. ಹಾಗಂತ ಮಕ್ಕಳ ಮಾನಸಿಕ ಮತ್ತು ಬೌದ್ಧಿಕ ಮಟ್ಟವನ್ನು ಪರಿಗಣಿಸದೆಯೇ, ಸರಕಾರವೇ ಎಲ್ಲವನ್ನೂ ಅವೈಜ್ಞಾನಿಕ ನೆಲೆಗಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯೊಳಗೆ ತುರುಕುವುದು ಸರಿಯಲ್ಲ. ಇಂದಿನ ಮಕ್ಕಳು ಬಹಳಷ್ಟು ವಿಷಯಗಳಲ್ಲಿ ಮುಂದಿದ್ದಾರೆ; ಆದರೆ ಅವರಲ್ಲಿ ಕಾಣೆಯಾಗುತ್ತಿರುವುದು ಮಾನವೀಯ ಮೌಲ್ಯಗಳ ಮತ್ತು ಸಾಮಾಜಿಕ ಜವಾಬ್ದಾರಿಯ ಅರಿವು. ಇವುಗಳನ್ನು ಪಠ್ಯಕ್ರಮದ ಮೂಲಕವೇ ಅವರಲ್ಲಿ ಬಿತ್ತುವ ಕೆಲಸವಾಗಬೇಕಿದೆ. ಮೊದಲೆಲ್ಲಾ ಭಾಷಾ ವಿಷಯ ಸೇರಿದಂತೆ ವಿಜ್ಞಾನ, ಸಮಾಜ ವಿಜ್ಞಾನ ಪಠ್ಯಕ್ರಮಗಳಲ್ಲೂ ನೈತಿಕ ಮತ್ತು ಮೌಲ್ಯ ಶಿಕ್ಷಣವನ್ನು ಪರೋಕ್ಷವಾಗಿ ಅಳವಡಿಸಲಾಗುತ್ತಿತ್ತು. 'ಗೋವಿನ ಹಾಡು' ಎಂಬ ಪದ್ಯದ ಹೆಸರು ಕೇಳಿದಾಕ್ಷಣ ಪ್ರತಿಯೊಬ್ಬರಿಗೂ ಅದರಿಂದ ಕಲಿತ ಜೀವನದ ಮೌಲ್ಯ ನೆನಪಾಗುತ್ತದೆ. ಆದರೆ ಈಗ ಪಠ್ಯಕ್ರಮದ ಆಯ್ಕೆಯ ವಿಷಯದಲ್ಲಿ ಜಾತಿ,

ಧರ್ಮ, ಮತಗಳ ಕೊಳಕು ವಾಸನೆ ಹರಡುತ್ತಿದೆ. ಹೀಗಾಗಿ ಮಕ್ಕಳಿಗೆ ಬಾಲ್ಯದಲ್ಲಿ ತಿದ್ದಿ ತೀಡುವ ಕೆಲಸಕ್ಕೆ ಬೇಕಾದ ನೀತಿಕಥೆಗಳಂಥ ಮಾಧ್ಯಮ ಇಲ್ಲದಂತಾಗಿದೆ. ಇಷ್ಟೂ ಮೀರಿ 'ಎಐ' ಬೇಕೇ ಬೇಕಾದರೆ, ವಿಜ್ಞಾನ ವಿಷಯದ ಪಠ್ಯಕ್ರಮದಲ್ಲಿ ಅದರ ಒಂದೆರಡು ಪಾಠಗಳನ್ನು, ಮಾಡ್ಯೂಲ್‌ಗಳನ್ನು ಸೇರಿಸಲಿ. ಆಗ ವಿಷಯ ಕಲಿಕೆಯೊಂದಿಗೆ 'ಎಐ' ಪಾಠವೂ ನಡೆಯುತ್ತದೆ.

ಮುಖ್ಯವಾಗಿ ಎಐ ತಂತ್ರಜ್ಞಾನದ ಬಳಕೆಯು, ಮಕ್ಕಳು ಬಾಲ್ಯದಲ್ಲೇ ತಮ್ಮ ಆಲೋಚನಾ ಶಕ್ತಿಯನ್ನು ಕಳೆದುಕೊಳ್ಳುವಂತೆ ಮಾಡುವ ವಿಧಾನವಾಗಿದೆ. ಏಕೆಂದರೆ, ಸ್ವಂತಿಕೆಯನ್ನು ಕಲಿಸಬೇಕಾದ ಕಡೆ 'ಎಐ' ಮಕ್ಕಳ ದಿಕ್ಕು ತಪ್ಪಿಸುತ್ತಿದೆ. ಬಹುತೇಕ ಖಾಸಗಿ ಶಾಲೆಗಳು 'ಎಐ ಕೋಚಿಂಗ್ ನೀಡುತ್ತೇವೆ' ಎಂದು ದೊಡ್ಡ ಪ್ರಮಾಣದ ಪ್ರಚಾರ ಮಾಡಿ ಲಕ್ಷಾಂತರ ರುಪಾಯಿಯನ್ನು ದೋಚುತ್ತಿವೆ. ನಾವು ದುಡ್ಡು ಕೊಟ್ಟು ಕಲಿಯುತ್ತಿರುವುದು ನಮ್ಮ ಜ್ಞಾನದ ವೃದ್ಧಿಗಲ್ಲ, ಬದಲಾಗಿ ಸ್ವಂತಿಕೆಯನ್ನು ಕಳೆದುಕೊಳ್ಳಲು ಎಂದು ಗಟ್ಟಿಯಾಗಿ ಹೇಳುವವರು ಇಲ್ಲವಾಗಿದ್ದಾರೆ.

'ಅಭಿವೃದ್ಧಿ' ಎಂಬ ಹೆಸರನ್ನು ಮುಂದುಮಾಡಿಕೊಂಡು ಎಲ್ಲರನ್ನೂ ದಿಕ್ಕು ತಪ್ಪಿಸುವ ಹುನ್ನಾರ ಇನ್ನಾದರೂ ನಿಲ್ಲಬೇಕಿದೆ. ಕೇಂದ್ರ ಶಿಕ್ಷಣ ಇಲಾಖೆಯು ಇತ್ತೀಚೆಗೆ ಬಿಡುಗಡೆ ಮಾಡಿರುವ 2024-25ನೇ ಸಾಲಿನ UDISE+ ಆಧಾರಿತ ವರದಿಯ ಅಂಕಿ-ಅಂಶಗಳ ಪ್ರಕಾರ, ನಮ್ಮ ದೇಶದಲ್ಲಿ 1 ಲಕ್ಷಕ್ಕೂ ಹೆಚ್ಚಿನ ಏಕೋಪಾಧ್ಯಾಯ ಶಾಲೆಗಳಿದ್ದು 33 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಅದೆಷ್ಟೋ ಶಾಲೆಗಳಲ್ಲಿ ತರಗತಿ ನಡೆಸಲು ಕೊಠಡಿ, ಗ್ರಂಥಾಲಯ, ಆಟದ ಮೈದಾನ, ಶೌಚಾಲಯ, ವಿದ್ಯುತ್ ಸಂಪರ್ಕದಂಥ ಮೂಲಭೂತ ಸೌಲಭ್ಯಗಳೇ ಇಲ್ಲ. ಇಂಥ ಪ್ರಾಥಮಿಕ ಸಮಸ್ಯೆಗಳನ್ನು ಬಗೆಹರಿಸುವ ಯೋಜನೆಗಳನ್ನು ರೂಪಿಸುವ ಬದಲು, ಅನ್ಯದೇಶಗಳಲ್ಲಿ 'ಎಐ' ಶಿಕ್ಷಣ ಚಾಲ್ತಿಯಲ್ಲಿದೆ ಎಂದು ನಮ್ಮಲ್ಲೂ ಅಳವಡಿಸಲು ಹೊರಟರೆ, ಅದು ನ್ಯಾಯವೇ?

ಯಾವೆಲ್ಲಾ ಪಾಶ್ಚಾತ್ಯ ರಾಷ್ಟ್ರಗಳಲ್ಲಿ 'ಎಐ' ಆಧಾರಿತ ಶಿಕ್ಷಣ ಚಾಲ್ತಿಯಲ್ಲಿದೆ ಎನ್ನಲಾಗುತ್ತದೆಯೋ ಅಲ್ಲೆಲ್ಲಾ ಪ್ರಾಥಮಿಕ ಶಿಕ್ಷಣವು ಭದ್ರ ಬುನಾದಿಯನ್ನು ಹೊಂದಿದೆ. ಬೇರುಗಳನ್ನೇ ಗಟ್ಟಿಗೊಳಿಸದೆ 'ಎಐ' ಶಿಕ್ಷಣ ನೀಡುತ್ತೇವೆ ಎಂದರೆ, ಅದರ ಸಮರ್ಪಕ ಅನುಷ್ಠಾನ ಖಂಡಿತವಾಗಿಯೂ ಸಾಧ್ಯವಿಲ್ಲ. ಕೇಂದ್ರ ಸರಕಾರವು ಈಗಾಗಲೇ ಜಾರಿಗೆ ತಂದಿರುವ 'ಎನ್‌ಇಪಿ' (ರಾಷ್ಟ್ರೀಯ ಶಿಕ್ಷಣ ನೀತಿ) ಅನುಷ್ಠಾನ ಇನ್ನೂ ಸಮರ್ಪಕವಾಗಿಲ್ಲದಿರುವುದು ಇದಕ್ಕೇ ಅಲ್ಲವೇ? ಈ ಪರಿಕಲ್ಪನೆಯ ಕುರಿತಂತೆ ಗಣನೀಯ ಸಂಖ್ಯೆಯಲ್ಲಿ ಕಾರ್ಯಾಗಾರಗಳನ್ನು ನಡೆಸಿದರೂ ಅದಿನ್ನೂ ಗೊಂದಲದ ಗೂಡಾಗಿಯೇ ಉಳಿದಿದೆ. ಆದ್ದರಿಂದ, ಯಾವುದೇ ಯೋಜನೆಯ ಘೋಷಣೆಯಿಂದ ಫಲ ಸಿಗುವುದಿಲ್ಲ, ಅದಕ್ಕೆ ಪೂರಕವಾದ ಸಂಪನ್ಮೂಲ-ಸೌಕರ್ಯಗಳನ್ನು ಮೊದಲು ಹೊಂದಿಸಿಕೊಳ್ಳಬೇಕು. ನಮ್ಮಲ್ಲಿ ಸಾಕಷ್ಟು ಮಾನವ ಸಂಪನ್ಮೂಲವಿದ್ದರೂ, ಸೂಕ್ತ ತರಬೇತಿಯಿಲ್ಲದೆ ಅದು ನಷ್ಟವಾಗುತ್ತಿದೆ. ನಮ್ಮ ನೆಲ-ಜಲ, ಸಂಸ್ಕೃತಿಯ ಅಂತಃಸತ್ವವನ್ನು ಮಕ್ಕಳಲ್ಲಿ ಮೂಡಿಸಬೇಕೇ ವಿನಾ, ಆಧುನಿಕತೆಗೆ ತಕ್ಕಂತೆ ಎಲ್ಲ ಬಾಬತ್ತುಗಳಲ್ಲೂ ನಾವು ಬದಲಾಗಬೇಕೆಂಬ ನಿಯಮವಿಲ್ಲ.

ರಾಜ್ಯ ಸರಕಾರವು 1ರಿಂದ 10ನೇ ತರಗತಿವರೆಗೆ ಮೌಲ್ಯ ಶಿಕ್ಷಣ ನೀಡಲು ಸಜ್ಜಾಗಿದ್ದು, ಅದಕ್ಕಾಗಿ ಪ್ರತ್ಯೇಕ ಪುಸ್ತಕಗಳನ್ನು ರಚಿಸಲಾಗಿದೆ. ಇಂಥ ಕ್ರಮಗಳು ಸ್ವಾಗತಾರ್ಹ. ಆದರೆ, ಜೀವನದ ಅವಿಭಾಜ್ಯ ಅಂಗವಾಗಿರುವ ಮೌಲ್ಯ ಮತ್ತು ನೈತಿಕ ಶಿಕ್ಷಣವನ್ನು ಇತರ ವಿಷಯದ ಪಾಠಗಳೊಂದಿಗೆ ಅಳವಡಿಸಿಕೊಂಡು ಬೋಧಿಸುವಂತೆ ಪಠ್ಯಕ್ರಮವನ್ನು ರಚಿಸಬೇಕೇ ವಿನಾ, ಪ್ರತ್ಯೇಕ ಪಠ್ಯಕ್ರಮ ರಚಿಸುವುದು ಕೆಲವೊಮ್ಮೆ ನಿರ್ಲಕ್ಷ್ಯಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಕೆಲವು ಖಾಸಗಿ ಶಾಲೆಗಳಲ್ಲಿ ಮೌಲ್ಯಶಿಕ್ಷಣದ ಪ್ರತ್ಯೇಕ ಪಠ್ಯಪುಸ್ತಕವಿದೆ. ಆದರೆ, ಈ ವಿಷಯಗಳನ್ನು ವಾರ್ಷಿಕ ಪರೀಕ್ಷೆಯ ಅಂಕಗಳಿಗೆ ಪರಿಗಣಿಸಲಾಗುವುದಿಲ್ಲವಾದ್ದರಿಂದ, ಕಾಟಾಚಾರಕ್ಕೆ ಅವನ್ನು ಕಲಿಯುವ/ಕಲಿಸುವ ಮನಸ್ಥಿತಿ ಮಕ್ಕಳಲ್ಲಿ/ಪಾಲಕರಲ್ಲಿ ಕಂಡುಬರುತ್ತಿದೆ.

ಒಂದು ವೇಳೆ, 'ಎಐ' ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ಅಳವಡಿಸಿದರೂ, ಅದು ವಿಜ್ಞಾನ ಪಠ್ಯಕ್ರಮದಲ್ಲೇ ರೆಗ್ಯುಲರ್ ಪಾಠದಂತೆ ಇರಬೇಕು; ಆಗ ಮಕ್ಕಳಿಗೆ ಹೊರೆ ಎನಿಸುವುದಿಲ್ಲ. ಮುಖ್ಯವಾಗಿ ಖಾಸಗಿ ಶಾಲೆಯವರು ಪಾಲಕರಿಂದ ಇದಕ್ಕೆ ಪ್ರತ್ಯೇಕವಾಗಿ ಶುಲ್ಕ ವಸೂಲಿಮಾಡುವುದು ತಪ್ಪುತ್ತದೆ. ಶಿಕ್ಷಣದ ಸಂಪೂರ್ಣ ಖಾಸಗೀಕರಣವನ್ನೂ ತಡೆಯಬಹುದು. ''ಶಿಕ್ಷಣವೆಂದರೆ ಕೇವಲ ಸಾಕ್ಷರತೆಯಲ್ಲ, ಬದಲಿಗೆ ದೇಹ-ಮನಸ್ಸು- ಆತ್ಮದ ಸಮಗ್ರ ಬೆಳವಣಿಗೆಯಾಗಿದೆ. ಶಿಕ್ಷಣದಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸಿದರೆ, ವಿದ್ಯಾರ್ಥಿಯು ಇವೆಲ್ಲವನ್ನೂ ಪಡೆಯಬಹುದು. ಆಗ ಆತ ಆತ್ಮವಿಶ್ವಾಸವುಳ್ಳ, ಸ್ವಾವಲಂಬಿ ಮತ್ತು ಸಮಾಜದ ಬಗ್ಗೆ ಹೊಣೆಗಾರಿಕೆಯುಳ್ಳ ನಾಗರಿಕನಾಗುತ್ತಾನೆ'' ಎಂದಿದ್ದರು ಗಾಂಧೀಜಿ. ಆದರೆ ನಾವು ಮಾತ್ರ ಸ್ವಂತಿಕೆಯನ್ನೇ ಪರದೇಸಿಗರ ಕೈಯಲ್ಲಿ ನೀಡಿ ಕುಳಿತಿದ್ದೇವೆ. 'ಮೆಕಾಲೆ ಶಿಕ್ಷಣ ಪದ್ಧತಿ ಸರಿಯಿಲ್ಲ' ಎಂದು ಬೊಬ್ಬಿಡುತ್ತಾ ಬಂದಿರುವ ನಾವು ಇಂದು ಮಾಡುತ್ತಿರುವುದೇನು?

(ಲೇಖಕರು ಶಿಕ್ಷಕರು)

ಭಟ್ಟರ್ ಸ್ಕಾಚ್

- **ಸರ್ಪಭೂಷಣ ಶಾಸ್ತ್ರೀ, ನಂಜನಗೂಡು**
ಭಟ್ರೇ, ಗಣಿತ ಪಾಠ ಮಾಡುವ ಮೇಡಂ ಇಷ್ಟು ದಿನವಾದರೂ ಕ್ಲಾಸಿಗೆ ಬಾರದಿದ್ದರೆ ಮಕ್ಕಳು ಏನೆಂದುಕೊಳ್ಳಬಹುದು?
- **ಗಣತಿಗೆ ಹೋಗ್ಯಾರ!**

- **ಕಮ್ಮು, ಇಟ್ಟಮಡು**
ಭಟ್ರೇ, ಜೆರಾಕ್ಸ್ ಅಂಗಡಿ ಮಾಲೀಕ ನನ್ನನ್ನು ಮದುವೆಯಾದರೆ ನನ್ನಿಂದ ಏನನ್ನು ಅಪೇಕ್ಷಿಸುತ್ತಾನೆ?
- **ಕುಡಿಯಲು ಕಾಫಿ, ಕೇಳಲು ಕಾಪಿ ರಾಗ ಸಂಗೀತ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಪ್ರತಾಪ ಮತ್ತು ಪ್ರದೀಪ ಇವರಿಗೆ ನೀವು ಏನಂತೀರಿ?
- Enough!

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ನಿಮ್ಮ ಶಿಷ್ಯರು ಕಿತ್ತಾಡುವುದನ್ನು ನೋಡಿ ಸುಮ್ಮನಿದ್ದೀರಲ್ಲ?
- **ಕಿತ್ತಾಡಿ ಅಂತ ನಾನೇ ಹೇಳಿದ್ದೇನೆ ಎಂದು ಸದ್ಯ ಹೇಳಲಿಲ್ಲವಲ್ಲ?!**

- **ರೂಪಶ್ರೀ ನಾಡಿಗ, ಬೆಂಗಳೂರು**
ಭಟ್ರೇ, ಪ್ರದೀಪ, ಪ್ರತಾಪ ಜಗಳ ನೋಡಿ ಯಾರೂ ನಿಮಗೆ ಏನನ್ನೂ ಹೇಳಲಿಲ್ಲವಾ?
- **ಮುಳ್ಳುಹಂದಿಗಳೆಲ್ಲ ನಿಯೋಗದಲ್ಲಿ ಬಂದು, 'ನಮ್ಮನ್ನು ಎಳೆದು ತರಬೇಡಿ ಅಂತ ಹೇಳಿ ಸರ್' ಅಂದ್ವು!**

- **ಕೆ.ವಿ.ರಾಜು, ಚಿಕ್ಕನಾಯಕನಹಳ್ಳಿ**
ಭಟ್ರೇ, ಪ್ರತಾಪ ಹೆಚ್ಚೋ, ಪ್ರದೀಪ ಹೆಚ್ಚೋ?
- **ನೀನೇ ನೋಡ್ತಾ ಇದ್ದೀಯಲ್ಲಪ್ಪ?!**

- **ಭಾರತಿ, (ಇಮೇಲ್ ಮೂಲಕ)**
ಭಟ್ರೇ, ದುಃಸ್ವಪ್ನ ಅಂದ್ರೆ ಏನು?
- **ಪ್ರತಾಪ ಮತ್ತು ಪ್ರದೀಪ ಒಟ್ಟಿಗೇ ಕನಸಿನಲ್ಲಿ ಬರುವುದು!**

- **ಪತ್ತಿ ಪ್ರಭು, ಬೆಂಗಳೂರು**
ಭಟ್ರೇ, ಗುರುವಿನ ಅತ್ಯಂತ ಸವಾಲಿನ ಕ್ಷಣ ಅಂದ್ರೆ ಯಾವುದು?
- **ಶಿಷ್ಯರ ಜಗಳ ಬಿಡಿಸುವುದು!**

- **ಸುಧೀರ ನಾಯಕ, ಅಂಕೋಲಾ**
ಭಟ್ರೇ, ಪ್ರತಾಪ ಮತ್ತು ಪ್ರದೀಪ ಇಬ್ಬರೂ ಸೇರಿ ನಿಮ್ಮ ಮೇಲೆ ಎಗರಿ ಬಂದರೆ?
- **ಅದಕ್ಕೇ ಅವರನ್ನು ಬೇರೆ ಬೇರೆ ಪಕ್ಷಗಳಲ್ಲಿ ಇರುವಂತೆ ನೋಡಿಕೊಳ್ಳಲಾಗಿದೆ!**

- **ಸತ್ಯ, (ಇಮೇಲ್ ಮೂಲಕ)**
ಭಟ್ರೇ, ಪ್ರದೀಪ ಮತ್ತು ಪ್ರತಾಪ ಜಟಾಪಟಿಯನ್ನು ಡೊನಾಲ್ಡ್ ಟ್ರಂಪ್ ಬಗೆಹರಿಸಬಹುದಾ?
- **ತನ್ನ ತಂದೆ-ತಾಯಿಯನ್ನೂ ಎಳೆದು ತಂದಾರು ಎಂದು ಅವರೂ ಸುಮ್ಮನಾಗಿದ್ದಾರಂತೆ!**

- **ನವೀನ ಹೆಬ್ಬಾರ, ಕುಮಟಾ**
ಭಟ್ರೇ, ವಿಮಾನದಲ್ಲಿ ಪಯಣಿಸುವಾಗ ಗಗನಸಖಿಯೊಂದಿಗೆ ಲವ್ ಆಗಬಹುದಾ?
- **ಆಗಬಹುದು, ಆದರೆ ಮರ ಸುತ್ತಲು ಆಗಲಿಕ್ಕಿಲ್ಲ!**

ಹೀಗೊಂದು ದಾಖಲೆಯ ಯೋಗಾಯೋಗ...

ಸಾಮಾನ್ಯವಾಗಿ ದಾಖಲೆ ಬರೆಯುವಾಗ ಸುಲಭವಾಗಿದ್ದನ್ನು ಆಯ್ದುಕೊಳ್ಳುವುದು ರೂಢಿ. ಆದರೆ ತನುಶ್ರೀ ಕಷ್ಟಕರವಾದ ಆಸನಗಳನ್ನು ಆಯ್ದುಕೊಂಡಿದ್ದಳು. ಅದನ್ನು ನಿರ್ಣಾಯಕರೇ ಒಪ್ಪಿಕೊಂಡಿದ್ದರು. ವಿಶೇಷವೆಂದರೆ, ಆರಂಭದ ಲಾಗಾಯ್ತು ಕೊನೆಯವರೆಗೂ ಆಕೆಯ ಕೈ ಕಾಲು ಒಮ್ಮೆಯೂ ನಡುಗಲಿಲ್ಲ, ಮುಖದ ಮೇಲಿನ ನಗು ಮಾಸಲಿಲ್ಲ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನಿಮ್ಮದೇ ದಾಖಲೆಯನ್ನು ನೀವು ಮುರಿಯಬೇಕೆಂದರೆ ಏನು ಮಾಡಬೇಕು? ಮೊದಲು ಒಂದು ದಾಖಲೆ ಮಾಡಬೇಕು! ಜೀವಮಾನದಲ್ಲಿ ಯಾವುದೇ ವಿಷಯದಲ್ಲಿ ಒಂದೇ ದಾಖಲೆ ಮಾಡಿದರೂ ಜೀವನ ಸಾರ್ಥಕ. ಆ ಒಂದೇ ದಾಖಲೆ ಮಾಡಬೇಕೆಂದಾದರೂ ಸತತ, ಕಠಿಣ ಪರಿಶ್ರಮ ಬೇಕು. ನಿಮ್ಮ ದಾಖಲೆಯನ್ನು ನೀವು ಮತ್ತೆ ಮತ್ತೆ ಮುರಿಯಬೇಕೆಂದರೆ ಏನು ಮಾಡಬೇಕು? ಮತ್ತೆ ಮತ್ತೆ ದಾಖಲೆಯನ್ನು ಮಾಡುತ್ತಿರಬೇಕು! ನೀವು ಎರಡು ಗಿನ್ನಿಸ್ ದಾಖಲೆಯೂ ಸೇರಿದಂತೆ ಒಟ್ಟೂ ಹತ್ತು ವಿಶ್ವ ದಾಖಲೆ ಮಾಡಬೇಕು ಎಂದರೆ ಏನು ಮಾಡಬೇಕು? ತನುಶ್ರೀ ಪಿತ್ರೋಡಿ ಯಾಗಿ ಹುಟ್ಟಬೇಕು!

ಅಕ್ಟೋಬರ್ 24, 2025. ಕನ್ನಡ ಸಂಘ ಬಹ್ರೈನ್, ಬಹ್ರೈನ್ ಯೋಗ ಕಮ್ಯೂನಿಟಿ ಮತ್ತು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಇತಿಹಾಸದ ಪುಟಗಳಲ್ಲಿ ಒಂದು ದಾಖಲೆ ನಿರ್ಮಾಣವಾಯಿತು. ಆ ದಾಖಲೆಯನ್ನು ನಿರ್ಮಿಸಿದ್ದು, ಹದಿನಾರು ವರ್ಷದ ಬಾಲಕಿ. ನೂತನ ಅಧ್ಯಕ್ಷರಾಗಿ ಚುಕ್ಕಾಣಿ ಹಿಡಿದ ಅಜಿತ್ ಬಂಗೇರ ಅವರು ಸುಮಾರು ಎರಡು ತಿಂಗಳ ಹಿಂದೆ ಈ ರೀತಿಯ ಕಾರ್ಯಕ್ರಮವೊಂದನ್ನು ಆಯೋಜಿಸುತ್ತಿದ್ದೇವೆ ಎಂದಾಗಲೇ ಸಾಕಷ್ಟು ಕುತೂಹಲ ಕೆರಳಿತ್ತು. ಯಾವುದೇ ಕಾರಣಕ್ಕೂ ಇದನ್ನು ತಪ್ಪಿಸಿಕೊಳ್ಳಬಾರದು ಎಂದು ನಿರ್ಧರಿಸಿದ್ದೆ. ಭಾರತದ ಆತ್ಮಸಂತಾನವಾದ ಯೋಗ ಇಂದು ವಿದೇಶಗಳಲ್ಲೂ ಪಸರಿಸಿ, ನೂರ ಐವತ್ತಕ್ಕೂ ಹೆಚ್ಚು ದೇಶಗಳಲ್ಲಿ ಪ್ರತಿಷ್ಠಾಪನೆಗೊಂಡಿದೆ. ಅದಕ್ಕೆ ಸೌದಿ ಅರೇಬಿಯಾದಂಥ ದೇಶಗಳೂ ಹೊರತಾಗಿಲ್ಲ. ಬಹುತೇಕ ದೇಶಗಳು ಅದರ ಮಹತ್ವವನ್ನು ಅರಿತು, ತಮ್ಮ ಬಾಹುಗಳನ್ನು ಚಾಚಿ, ಬಾಚಿ ಬಂಧಿಸಿಕೊಂಡಿವೆ. ಆದರೆ ಭಾರತದ ಯೋಗಶಾಸ್ತ್ರಕ್ಕೆ ವಿದೇಶದಲ್ಲಿ ದಾಖಲೆ ಬರೆಯುವ ಭಾಗ್ಯ ಈ ಮೊದಲು ಎಷ್ಟು ಲಭಿಸಿದೆಯೋ ಗೊತ್ತಿಲ್ಲ, ಮೊನ್ನೆಯಂತೂ ಒಂದು ದಾಖಲೆಯ ಸೃಷ್ಟಿಯಾಗಿದೆ. ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಮೊನ್ನೆ ದಾಖಲಾದ ಯೋಗ ಪ್ರದರ್ಶನ, ಕೊಲ್ಲಿ ರಾಷ್ಟ್ರಗಳಲ್ಲಷ್ಟೇ ಅಲ್ಲ, ವಿಶ್ವದಲ್ಲೇ ಮೊದಲು. ದಾಖಲೆ ಬರೆದ ಬಾಲಕಿ, ಉಡುಪಿಯ ತನುಶ್ರೀ ಪಿತ್ರೋಡಿ.

ಮೊನ್ನೆಯ ದಾಖಲೆಯ ಕುರಿತು ಹೇಳಿ ಮುಂದುವರಿಯುತ್ತೇನೆ. ಈ ದಾಖಲೆಯ ಪ್ರದರ್ಶನಕ್ಕೆ ವೇದಿಕೆಯಾದದ್ದು, ಹಲವಾರು ಮೊದಲ ಮತ್ತು ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಲು ಹೆಸರಾದ ಕನ್ನಡ ಸಂಘ ಬಹ್ರೈನ್. ಅದಕ್ಕೆ ಬಹ್ರೈನ್ ಯೋಗ ಕಮ್ಯೂನಿಟಿಯ ಅಧ್ಯಕ್ಷರಾದ ಫಾತಿಮಾ ಅಲ್ ಮನ್ಸೂರಿಯವರೂ ಕೈಜೋಡಿಸಿದರು. ಹಿಂದೊಮ್ಮೆ ಸೌದಿ ಅರೇಬಿಯಾದ ನೌಫ್ ಮರ್ವಾಯಿಯವರ ಕಥೆ ಮತ್ತು ಅವರ ಯೋಗಾಭ್ಯಾಸದ ಕುರಿತು ಬರೆದಿದ್ದೆ. ಅದೇ ರೀತಿ ಬಹ್ರೈನ್‌ನಲ್ಲಿ ಹಠಯೋಗದಲ್ಲಿ ಸಾಧನೆ ಮಾಡಿದ ಒಮೇರಾ ಅಲ್ ಒಬೇದ್ಲಿ ಮತ್ತು ಪ್ರಾಪ್ ಯೋಗದಿಂದ ಜನರಿಗೆ ಚಿಕಿತ್ಸೆ ನೀಡುತ್ತಿರುವ ಹಸನ್ ಎಹ್ಸಾನ್ ಕುರಿತಾಗಿಯೂ ಬರೆದಿದ್ದೆ. ಈಗ ಫಾತಿಮಾ ಅವರ ಕುರಿತು ಬರೆಯಬೇಕು, ಇಂದಿನ ವಿಷಯ ಅದಲ್ಲವಾದದ್ದರಿಂದ ಮುಂದೊಮ್ಮೆ ಬರೆಯುತ್ತೇನೆ. ಈ ಕಾರ್ಯಕ್ರಮಕ್ಕೆ ಗೋಲ್ಡನ್ ಬುಕ್ ಕಡೆಯಿಂದ ಡಾ. ಮನೀಶ್ ವೈಷ್ಣೋಯಿ ನಿರ್ಣಾಯಕರಾಗಿ ಆಗಮಿಸಿದ್ದರು.

ಸಮಯದ ಓಟ ಆರಂಭವಾಯಿತು. ಅಂದು ಒಂದು ಗಂಟೆಯಲ್ಲಿ ತನುಶ್ರೀ ಮುನ್ನೂರು ಆಸನಗಳನ್ನು ಪ್ರದರ್ಶಿಸಬೇಕಾಗಿತ್ತು. ಈ ಮೊದಲು ಆಕೆ ನಲವತ್ತೈದು ನಿಮಿಷದಲ್ಲಿ ಇನ್ನೂರ ನಲವತ್ತೈದು ಆಸನ ಪ್ರದರ್ಶಿಸಿ ದಾಖಲೆ ಬರೆದಿದ್ದಳು. ಈಗ ಅದನ್ನೂ ಮೀರಿಸುವ ಸಮಯ. ಮೊದಲ ಹದಿನೈದು ನಿಮಿಷದಲ್ಲಿಯೇ ತನುಶ್ರೀ ನೂರು ಆಸನಗಳ ಪ್ರದರ್ಶನ ಮುಗಿಸಿದ್ದಳು. ಮುಂದಿನ ಹದಿನೈದು ನಿಮಿಷದಲ್ಲಿ ಮತ್ತೆ ನೂರು ಆಸನಗಳು, ಅದಕ್ಕೂ ಮುಂದಿನ ಹದಿನೈದು ನಿಮಿಷದಲ್ಲಿ, ಅಂದರೆ, ನಲವತ್ತೈದು ನಿಮಿಷದಲ್ಲಿ ಮುನ್ನೂರು ಆಸನಗಳು ಪೂರ್ತಿಗೊಂಡಿದ್ದವು. ಆಗಲೇ ಪ್ರೇಕ್ಷಕರ ಕರತಾಡನ ಮುಗಿಲು ಮುಟ್ಟಿತ್ತು. ಆದರೆ ಆಕೆಯ ಆಸನಗಳ ಪ್ರದರ್ಶನ ಮುಂದುವರಿದಿತ್ತು. ಐವತ್ತು ನಿಮಿಷ ಆಗುವ ಹೊತ್ತಿಗೆ ಬರೋಬ್ಬರಿ ಮುನ್ನೂರ ಮೂವತ್ತ ಮೂರು ಆಸನಗಳನ್ನು ಹಾಕಿ ತೋರಿಸಿದ್ದಳು ತನುಶ್ರೀ. ಒಂದು ಗಂಟೆ ಪೂರ್ತಿ ಮಾಡಿದ್ದರೆ ಈ ಸಂಖ್ಯೆ ಖಂಡಿತವಾಗಿಯೂ ಮುನ್ನೂರ ಐವತ್ತರ ಗಡಿ ದಾಟುತ್ತಿತ್ತು.

ಸಾಮಾನ್ಯವಾಗಿ ದಾಖಲೆ ಬರೆಯುವಾಗ ಸುಲಭವಾಗಿದ್ದನ್ನು ಆಯ್ದುಕೊಳ್ಳುವುದು ರೂಢಿ. ಆದರೆ ಮೊನ್ನೆ ತನುಶ್ರೀ ಕಷ್ಟಕರವಾದ ಆಸನಗಳನ್ನು ಆಯ್ದುಕೊಂಡಿದ್ದಳು. ಅದನ್ನು ನಿರ್ಣಾಯಕರೇ ಒಪ್ಪಿಕೊಂಡಿದ್ದರು. ವಿಶೇಷವೆಂದರೆ, ಆರಂಭದ ಲಾಗಾಯ್ತು ಕೊನೆಯವರೆಗೂ ಆಕೆಯ ಕೈ ಕಾಲು ಒಮ್ಮೆಯೂ ನಡುಗಲಿಲ್ಲ, ಆಕಾರ ತಪ್ಪಲಿಲ್ಲ, ಉಸಿರಾಟ ಏರು-ಪೇರಾಗಲಿಲ್ಲ, ಮುಖದ ಮೇಲಿನ ನಗು ಮಾಸಲಿಲ್ಲ. ಆಕೆಗೆ ಪ್ರತಿ ಕ್ಷಣವೂ ಜೇನಧಾರೆಯಂತೆ ಸ್ನಿಗ್ಧ, ಬೆಣ್ಣೆಯಿಂದ ನೂಲು ಹೊರಗೆ ತೆಗೆದಷ್ಟೇ ಸರಳ. ಅಷ್ಟೇ ಅಲ್ಲ, ಐವತ್ತು ನಿಮಿಷ ನಿರಂತರ ಪ್ರದರ್ಶನದ ನಂತರ ಆಕೆ ಯೋಗದ ಕುರಿತಾಗಿ, ಆಸನದ ಕುರಿತಾಗಿ ಮಾತನ್ನೂ ಆಡಿದಳು. ಅಲ್ಲಿ ಕೂಡ ಒಮ್ಮೆಯೂ ದಮ್ಮು ಕಟ್ಟಲಿಲ್ಲ. ಐದು ನಿಮಿಷ ಕುಣಿದ ನಂತರ ಮಾತನಾಡುವುದಲ್ಲ, ನಿಲ್ಲಲೂ ಆಗದ ಸ್ಥಿತಿಯಲ್ಲಿರುವವರನ್ನು ನಾವು ನೋಡುತ್ತೇವೆ. ಹಾಗಿರುವಾಗ, ಸುಮಾರು ಒಂದು ಗಂಟೆ ಮೈ ಕೈ ಸುರುಟಿ-ಮುರುಟಿ ನಿಂತ ಮೇಲೂ ನಿರರ್ಗಳವಾಗಿ ಮಾತನಾಡಬಹುದಾದರೆ, ಅದರ ಹಿಂದಿನ ಪರಿಶ್ರಮ ಏನು, ಎಷ್ಟು ಎಂಬುದರ ಅರಿವಾಗುತ್ತದೆ. ಹಾಗಾದರೆ ಅವರಿಗೆ ಸುಸ್ತಾಗುವುದಿಲ್ಲವೇ? ನೋವಾಗುವುದಿಲ್ಲವೇ? ಆರಂಭದಲ್ಲಿ ಎರಡೂ ಆಗುತ್ತದೆ. ಆದರೆ ನಿರಂತರ ಅಭ್ಯಾಸದಿಂದ ಆ ಆಯಾಸವನ್ನು ಮೆಟ್ಟಿ ನಿಲ್ಲಬಹುದು. ಆಗ ನೋವೇ ನಲಿವಾಗಿ ಮಾರ್ಪಾಡಾಗುತ್ತದೆ ಎನ್ನುವುದಕ್ಕೆ ತನುಶ್ರೀಯಂಥವರು ಸಾಕ್ಷಿ.

ತನುಶ್ರೀ ಪ್ರಯಾಣದ ಬಗ್ಗೆ ಚಿಕ್ಕದಾಗಿ ಹೇಳುವುದಾದರೆ, ಆಕೆ ಮೂರು ವರ್ಷದವಳಿದ್ದಾಗ ಛದ್ಮವೇಷ ಮಾಡುತ್ತಿದ್ದಳಂತೆ. ಸಿನಿಮಾ ನೃತ್ಯಗಳಲ್ಲಿ ಭಾಗವಹಿಸುತ್ತಿದ್ದಳಂತೆ. ಐದು ವರ್ಷವಾಗುವ ಹೊತ್ತಿಗೆ ಭರತನಾಟ್ಯ ಕಲಿಯಲು ಆರಂಭಿಸಿದಳಂತೆ. ನೃತ್ಯ ಮಾಡುವಾಗ ಅದರಲ್ಲಿ ಲಾಗ ಹಾಕುವುದು, ಪಲ್ಟಿ ಹೊಡೆಯುವುದು ಇತ್ಯಾದಿ ಸ್ಟಂಟ್ ಮಾಡುತ್ತಿದ್ದಳಂತೆ. ಅದರಲ್ಲಿ ಕೆಲವು ಯೋಗಾಸನದ ಭಂಗಿಗಳೂ ಇರುತ್ತಿದ್ದವಂತೆ.

ಒಮ್ಮೆ ಬೆಂಗಳೂರಿಗೆ ಹೋದಾಗ ಖುಷಿ ಎಂಬುವವರು ಒಂದು ನಿಮಿಷದಲ್ಲಿ ಹದಿನಾಲ್ಕು ನಿರಾಲಂಬ ಚಕ್ರಾಸನ ಹಾಕಿ ವಿಶ್ವದಾಖಲೆ ಮಾಡಿದ್ದನ್ನು ನೋಡಿದರಂತೆ. ತಂದೆಯವರು 'ಇದನ್ನು ನೀನೂ ಪ್ರಯತ್ನಿಸು' ಎಂದಾಗ, ಒಂದು ನಿಮಿಷದಲ್ಲಿ ಒಂಬತ್ತು ಬಾರಿ ಮಾಡಿದ್ದಳಂತೆ. ಹಾಗೆಯೇ ಪ್ರತಿನಿತ್ಯ ಪ್ರಯತ್ನಿಸಿ ಒಂದು ನಿಮಿಷದಲ್ಲಿ ಹತ್ತೊಂಬತ್ತು ಬಾರಿ ನಿರಾಲಂಬ ಚಕ್ರಾಸನ ಹಾಕಿ ಮೊದಲ ವಿಶ್ವ ದಾಖಲೆ ಆಯಿತಂತೆ. ಅಲ್ಲಿಂದ ಯೋಗದ ಕಡೆಗೆ ಇನ್ನೂ ಹೆಚ್ಚು ಆಸಕ್ತಿ ಉಂಟಾಯಿತಂತೆ. ಯುಟ್ಯೂಬ್‌ನಲ್ಲಿ ಯೋಗಾಸನ ನೋಡಿ ಕಲಿಯಲು ಆರಂಭಿಸಿದಳಂತೆ. ಎರಡು ವರ್ಷ ಯುಟ್ಯೂಬ್ ಶಿಕ್ಷಣದ ನಂತರ ಎರಡು ವರ್ಷ ಹರಿರಾಜ ಕುನ್ನಿಗೋಳಿಯವರಿಂದ ಯೋಗಾಭ್ಯಾಸ ಮಾಡಿ, ನಂತರ ಸುದರ್ಶನ ಕಾರ್ಕಳ ಅವರಲ್ಲಿ ಅಭ್ಯಾಸ ಮುಂದುವರಿಸಿದಳಂತೆ.

ಮೊದಲ ದಾಖಲೆ ಬರೆಯುವಾಗ ಏಳು ವರ್ಷದವಳಾಗಿದ್ದ ತನುಶ್ರೀ, ಈಗ ಹದಿನಾರು ವರ್ಷದವಳಾಗಿದ್ದು, ಒಂಬತ್ತು ದಾಖಲೆ ಬರೆದಿದ್ದಾಳೆ. ನಮಗೆಲ್ಲ ವರ್ಷಕ್ಕೊಮ್ಮೆ ದೀಪಾವಳಿ ಹಬ್ಬ ಬರುವಂತೆ ಅವಳಿಗೆ ವರ್ಷಕ್ಕೊಮ್ಮೆ ದಾಖಲೆ ಬರೆಯಬೇಕು. ಅದು ಬೇರೆಯವರ ದಾಖಲೆ ಮುರಿಯುವುದಾದರೂ ಸರಿ, ತನ್ನ ದಾಖಲೆಯನ್ನೇ ಉತ್ತಮಗೊಳಿಸಿಕೊಳ್ಳುವುದಾದರೂ ಸರಿ. ಇಷ್ಟಾಗಿಯೂ ಅವಳಿಗಾಗಲಿ, ಪ್ರೋತ್ಸಾಹಿಸುವ ಅವಳ ತಂದೆ ಉದಯ್ ಕುಮಾರ್, ತಾಯಿ ಸಂಧ್ಯಾ ಅವರಿಗಾಗಲಿ, ದಾಖಲೆಯ ಅಹಂಕಾರ ತಲೆಯ ಮೇಲೆ ಹತ್ತಿ ಕುಳಿತುಕೊಳ್ಳಲಿಲ್ಲ, ಅವರೆಲ್ಲ ಇಂದಿಗೂ ವಿಧೇಯರಾಗಿಯೇ, ಭೂಮಿಯ ಮೇಲೇ ಇದ್ದಾರೆ. ಅದು ಇನ್ನೂ ಹೆಚ್ಚಿನ ಸಂತೋಷ. ಜತೆಗೆ, ನಾಗರಾಜ



ವರ್ಕಾಡಿ, ರಾಘವೇಂದ್ರ ದೇವಾಡಿಗರಂಥವರು ಸಹಾಯಕ್ಕೆ ನಿಂತಿರುವುದೂ ಶ್ಲಾಘನೀಯ.

ಕಾರ್ಯಕ್ರಮ ಮುಗಿಯುವ ಹೊತ್ತಿಗೆ ನನಗನಿಸಿದ್ದು ಏನು ಗೊತ್ತೇ? ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಎಲ್ಲಿಯೋ ಯಾರಿಗೋ ಬೈದವರು, ಒಂದು ಹಾಡು, ಒಂದು ನೃತ್ಯವನ್ನು ರೀಲ್ಸ್ ಮಾಡಿ ವೈರಲ್ ಆದವರು, ಹುಚ್ಚಾಪಟ್ಟೆ ಮಾತಾಡಿ ಜನರಿಂದ ಛೀ... ಥೂ... ಎಂದು ಉಗಿಸಿಕೊಂಡವರು, ಅತಿ ಕಮ್ಮಿ ಬಟ್ಟೆ ತೊಟ್ಟು ರಸ್ತೆಯಲ್ಲಿ ನಡೆದವರು, ತಲೆಕೆಟ್ಟವರಂತೆ ವರ್ತನೆ ಮಾಡುವವರು ಇತ್ಯಾದಿ ಇತ್ಯಾದಿಗಳೆಲ್ಲ ಬಿಗ್ ಬಾಸ್‌ನಂಥ ಕಾರ್ಯಕ್ರಮ ಅಥವಾ ಇನ್ಯಾವುದೋ ರಿಯಾಲಿಟಿ ಶೋಗಳಿಗೆ ಪ್ರವೇಶ ಪಡೆಯುತ್ತಾರೆ. ತಿಂಗಳುಗಟ್ಟಲೆ ಒಂದು ಮನೆಯಲ್ಲಿ ಕುಳಿತರೂ ಇವರಿಗೆ ಜಗಳವೇ ಜೀವಾಳ, ಬೈಗುಳವೇ ಬಂಡವಾಳ, ಬಿಟ್ಟರೆ ಇನ್ನೇನೂ ಇಲ್ಲ. ಕಾಲು ಕೆರೆದು ಜಗಳ ಮಾಡಿಕೊಳ್ಳುತ್ತಾ ಕಾಲ ಕಳೆಯುತ್ತಾರೆ. ಜನರೂ ಅದನ್ನು ಹುಚ್ಚರಂತೆ ನೋಡುತ್ತಾರೆ. ಇಂಥ ಮನೆಗೆ ನಿಜವಾದ ಸಾಧಕರು ಯಾಕೆ ಬರುವುದಿಲ್ಲ? ತನುಶ್ರೀ ಒಬ್ಬಳೇ ಅಂತಲ್ಲ, ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅನೇಕರು ನಮ್ಮಲ್ಲಿದ್ದಾರೆ. ಅಂಥವರಿಗೆಲ್ಲ 'ದೊಡ್ಡೊಡೆಯನ ಮನೆ' (ದಡ್ಡ ಒಡೆಯನ ಮನೆ!)ಯಲ್ಲಿ ಜಾಗವೂ ಇಲ್ಲ, ಪ್ರವೇಶವೂ ಇಲ್ಲ ಏಕೆ? ಏಕೆಂದರೆ ಇಂಥವರಿಗೆ ದೇಹವನ್ನು ಹುರಿಗೊಳಿಸುವುದು ಗೊತ್ತು ಬಿಟ್ಟರೆ ನಾಲಿಗೆಯನ್ನು ಹರಿತಗೊಳಿಸುವುದು ಗೊತ್ತಿಲ್ಲ. ರಿಯಾಲಿಟಿ ಶೋಗಳು ಎಂದು ಹೇಳಿಕೊಳ್ಳುವ ಮನೆಯಲ್ಲಿ ಪ್ರತಿನಿತ್ಯ ಯೋಗ ಮಾಡಿದರೆ ನೋಡುವವರಾದರೂ ಯಾರು? ಅಲ್ಲಿ ದೇಹ ಮತ್ತು ಮನಸ್ಸು ಸರಿ ಇರುವವರಿಗಿಂತ, ಸರಿ ಇಲ್ಲದವರಿಗೇ ಹೆಚ್ಚಿನ ಪ್ರಾಶಸ್ತ್ಯ ಎಂದು ಅನಿಸುವುದಿಲ್ಲವೇ?

ನನಗೆ ಖುಷಿ ಮತ್ತು ಸಮಾಧಾನವಾದದ್ದು ಯಾಕೆಂದರೆ, ಇಂಥ ಶೋಗಳ ಅಬ್ಬರದ ಮಧ್ಯದಲ್ಲಿಯೂ ತನುಶ್ರೀಯಂಥ ಯುವಕ-ಯುವತಿಯರು, ಬಾಲಕ-ಬಾಲಕಿಯರು ಇನ್ನೂ ಯೋಗಭ್ಯಾಸ, ಧ್ಯಾನ, ಶಾಸ್ತ್ರೀಯ ನೃತ್ಯ, ಶಾಸ್ತ್ರೀಯ ಗಾಯನ ಮೊದಲಾದವುಗಳ ಕಡೆಗೆ ತಮ್ಮ ಶ್ರದ್ಧೆಯನ್ನು ಕೇಂದ್ರೀಕರಿಸಿದ್ದಾರೆ. ನೃತ್ಯವಾಗಲಿ, ದೇಹ ದಂಡಿಸುವ ಯೋಗವಾಗಲಿ, ಇವುಗಳ ಕಡೆ ಅಪಾರ ಶ್ರದ್ಧೆ ಇಲ್ಲದಿದ್ದರೆ ಸಾಧನೆ ಮತ್ತು ಪ್ರತಿಫಲ ಎರಡೂ ದುಸ್ತರ. ಸುಲಭವಾದದ್ದರ ಕಡೆಗೆ ಮನುಷ್ಯನ ಮನಸ್ಸು ಹೊರಳುವುದು ಸಹಜ. ಕಷ್ಟವನ್ನು ಯಾರು ತಾನೇ ಮೈಮೇಲೆ ಎಳೆದುಕೊಳ್ಳಲು ಇಷ್ಟಪಡುತ್ತಾರೆ ಹೇಳಿ? ಆದರೆ ಕಷ್ಟದ ಕೊನೆಯಲ್ಲೊಂದು ಸುಖವಿದೆ, ಆನಂದವಿದೆ ಎಂದು ಅರಿತವನು ಮಾತ್ರ ಮೊದಲು ಕಷ್ಟಪಡಲು ಇಷ್ಟಪಡುತ್ತಾನೆ. ಮೊದಲಿನಿಂದಲೇ ಸುಖವಾಗಿ ಬಯಸಲು ಶಾರ್ಟ್‌ಕಟ್ ಹಿಡಿಯುವವರಿಗೆ ಸಿದ್ಧಿಯಂತೂ ಲಭಿಸುವುದಿಲ್ಲ, ಪ್ರಸಿದ್ಧಿ ಕೂಡ ಕಟ್ ಶಾರ್ಟ್ ಆಗಿಯೇ ಇರುತ್ತದೆ. ಒಂದಂತೂ ಸತ್ಯ, ಶಾಸ್ತ್ರಬದ್ಧವಾಗಿ ನಾವು ಏನನ್ನೇ ಕಲಿಯಬೇಕೆಂದರೂ ಕಠಿಣ ಪರಿಶ್ರಮ ಬೇಕೇ ಬೇಕು. ಸಿದ್ಧಿಸಲು ಬಹಳ ಶ್ರಮವಹಿಸಬೇಕು, ಅದಕ್ಕೆ ಬಹಳ ಸಮಯವೇ ಬೇಕು. ಆದರೆ ಅದರಿಂದ ಸಿಗುವ ಆನಂದವೂ ಅಷ್ಟೇ ವಿಸ್ತಾರದ್ದಾಗಿರುತ್ತದೆ. ಕ್ಷಣಮಾತ್ರದಲ್ಲಿ ಸಿದ್ಧಿಸಿದ ಪ್ರಸಿದ್ಧಿ ಅಷ್ಟೇ ಮೋಟುಕೂ ಆಗಿರುತ್ತದೆ.

ಕೊನೆಯದಾಗಿ, ಅಲ್ಲ, ಮೊದಲನೆಯದಾಗಿ ತನುಶ್ರೀ ತೋರಿಸಿದ ಮುನ್ನೂರ ಮೂವತ್ತಮೂರು ಆಸನ ಬಿಡಿ, ನಮ್ಮಲ್ಲಿ ಎಷ್ಟು ಜನರಿಗೆ ಮೂವತ್ತ ಮೂರು ಆಸನದ ಹೆಸರು ಥಟ್ಟನೆ ಹೇಳಲು ಬರುತ್ತದೆ ಎಂದು ಎದೆಯ ಮೇಲೆ ಕೈ ಇಟ್ಟುಕೊಂಡು ಪ್ರಾಮಾಣಿಕವಾಗಿ ಹೇಳಿ. ಇನ್ನೊಂದು, ಆಕೆ ಮಾಡಿದಂತೆ ಹತ್ತು ವಿಶ್ವ ದಾಖಲೆ ಬೇಡ, ಕೊನೇ ಪಕ್ಷ, ಪ್ರತಿನಿತ್ಯ ಕನಿಷ್ಠ ಹತ್ತು ಆಸನಗಳನ್ನಾದರೂ ಹಾಕುವ ಪಣವನ್ನು ತೊಡೋಣ. ಒಂದು ಸೂರ್ಯ ನಮಸ್ಕಾರದಲ್ಲಿ ಎಂಟು ಬಗೆಯ ಆಸನಗಳಿವೆ. ಎಲ್ಲರಿಗೂ ಪ್ರಿಯವಾದ ಶವಾಸನವಂತೂ ಇದ್ದೇ ಇದೆ. ಅನೇಕರು 'ನನಗೆ ಶವಾಸನ ಒಂದು ಬರುತ್ತದೆ' ಎಂದು ಹಾರಿಕೆಯ ಉತ್ತರ ನೀಡುತ್ತಾರೆ. ನಿಜವಾಗಿ ನೋಡಿದರೆ ಶವಾಸನಕ್ಕೂ ಒಂದು ಕ್ರಮವಿದೆ, ನಿಯಮವಿದೆ. ನಾವು ಆ ನಿಯಮವನ್ನೂ ಸರಿಯಾಗಿ ಪಾಲಿಸುವುದಿಲ್ಲ. ಕೊನೇ ಪಕ್ಷ ಅದನ್ನಾದರೂ ನಿಯಮಬದ್ಧವಾಗಿ ಮಾಡಿದರೆ ಅಷ್ಟೇ ಸಾಕು ಎಂದೆನಿಸುತ್ತದೆ. ಈಗಾಗಲೇ ಸುಮಾರು ಮೂವತ್ತೈದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗೆ ಪ್ರೇರಣೆಯ ಮಾತುಗಳನ್ನಾಡಿರುವ ತನುಶ್ರೀಯಂಥವರು ಹಿರಿಯರಿಗೂ ಮಾದರಿಯಾಗಲಿ. ಯೋಗಾಸಕ್ತರಿಗೆ ಸ್ಫೂರ್ತಿಯ ಸೆಲೆಯಾಗಲಿ...

ತಂತ್ರಜ್ಞಾನ

ಡಾ.ಮಾದೇಶ್

ಬರಲಿವೆ ಮಿದುಳಿಗೆ ಅಳವಡಿಸೋ ಚಿಪ್

ಅಮೆರಿಕದ ಎಲಾನ್ ಮಸ್ಕ್ ಅವರ ಸಂಸ್ಥೆಯು ರೋಬೋ ಮಿದುಳಿನ ಚಿಪ್‌ಗಳನ್ನು (ನ್ಯೂರೋಲಿಂಕ್) ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿದೆ. ನಮ್ಮ ಮನಸ್ಸಿನಲ್ಲಿ ಅಂದುಕೊಂಡಿದ್ದನ್ನು ಕಾರ್ಯರೂಪಕ್ಕೆ ತರುವ ತಂತ್ರಜ್ಞಾನವನ್ನು ಹೊಂದಿರುವುದು ಈ ಚಿಪ್‌ನ ವೈಶಿಷ್ಟ್ಯ. ಸಂಪೂರ್ಣ ಅಂಗವೈಕಲ್ಯದಿಂದ ಬಳಲುತ್ತಿದ್ದ ಮಹಿಳೆಯೊಬ್ಬರು ಇಂಥದೊಂದು ತಂತ್ರಜ್ಞಾನವನ್ನು ಬಳಸಿಕೊಂಡು, ಯಾರ ಸಹಾಯವಿಲ್ಲದೆ, ಮುಟ್ಟದೆ, ಕೈಗಳನ್ನು ಬಳಸದೆ, ತಮ್ಮ ಮಾನಸಿಕ ಸಾಮರ್ಥ್ಯದ ಮುಖಾಂತರವೇ ಕಂಪ್ಯೂಟರ್ ಅನ್ನು ನಿರ್ವಹಿಸಿರುವುದು ಇತ್ತೀಚಿನ ದಿನಗಳಲ್ಲಿ ಆದಂಥ ಕ್ರಾಂತಿಕಾರಿ ಬೆಳವಣಿಗೆ ಎಂದರೆ ತಪ್ಪಾಗಲಾರದು.

ಕಂಪ್ಯೂಟರ್ ಮತ್ತು ಸೆಲ್ ಫೋನ್‌ಗಳಲ್ಲಿ ದತ್ತಾಂಶವನ್ನು ಸಂಗ್ರಹಣೆ ಮಾಡಲು ಇಲೆಕ್ಟ್ರಾನಿಕ್ ಚಿಪ್‌ಗಳನ್ನು ಬಳಸಲಾಗುತ್ತಿದೆ; ಕಾಲ ಮುಂದುವರಿದ ಹಾಗೆ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ ಬೆಳೆದ ಹಾಗೆ, ಮಾನವನ ಮಿದುಳಿಗೂ ಇಲೆಕ್ಟ್ರಾನಿಕ್ ಚಿಪ್ ಅನ್ನು ಅಳವಡಿಸುವ ಕಾಲ ಬಂದಿದೆ. ಅದುವೇ ಬ್ರೇನ್-ಕಂಪ್ಯೂಟರ್ ಇಂಟರ್‌ಫೇಸ್ ತಂತ್ರಜ್ಞಾನ.

ಇದರ ವೈಶಿಷ್ಟ್ಯವೇನು?

ಬ್ರೇನ್-ಕಂಪ್ಯೂಟರ್ ಇಂಟರ್‌ಫೇಸ್ (ಬಿಸಿಐ) ಎಂಬುದೊಂದು ಹೊಸಬಗೆಯ ತಂತ್ರಜ್ಞಾನ. ಇದು ಮಾನವನ ಮಿದುಳು ಮತ್ತು ಬಾಹ್ಯ ಸಾಧನದ ನಡುವೆ ನೇರ ಸಂವಹನ ನಡೆಸುತ್ತದೆ. ಮಾನವನ ಮಿದುಳಿನ ನರ ಸಂಕೇತಗಳನ್ನು 'ಡಿಕೋಡ್' ಮಾಡಿ ಹೊರಗಿನ ಸಾಧನಗಳನ್ನು ನಿಯಂತ್ರಿಸುವ ಮತ್ತು ಆದೇಶಗಳಾಗಿ ಭಾಷಾಂತರಿಸುವ ಮೂಲಕ 'ಮಾನವ-ಯಂತ್ರ ಸಂವಹನ' ಕ್ರಿಯೆಗೆ ಈ ತಂತ್ರಜ್ಞಾನ ಅನುವುಮಾಡಿಕೊಡುತ್ತದೆ.

ಪಾರ್ಶ್ವವಾಯುವಿನಿಂದಾಗಿ ರೋಗಿಗಳು ಕೆಲವೊಮ್ಮೆ ಸಂಪೂರ್ಣ ಅಂಗವೈಕಲ್ಯಕ್ಕೆ ಒಳಗಾಗಿರುತ್ತಾರೆ. 'ಅಮಿಯೋಟ್ರೋಫಿಕ್ ಲ್ಯಾಟರಲ್ ಸ್ಕ್ಲೆರೋಸಿಸ್' ಎಂಬ ನರಮಂಡಲದ ಕಾಯಿಲೆಯಲ್ಲಿ ರೋಗಿಗಳು ಇಂಥ ಅಂಗವೈಕಲ್ಯವನ್ನು ಹೊಂದಿರುತ್ತಾರೆ. ಇಂಥ ರೋಗಿಗಳಲ್ಲಿ ಯಾವುದೇ ದೈಹಿಕ ಚಟುವಟಿಕೆಗಳಿರುವುದಿಲ್ಲ. ಇವರಲ್ಲಿ ಆಲೋಚನಾಶಕ್ತಿ ಮತ್ತು ಗ್ರಹಿಸುವ ಶಕ್ತಿ ಇದ್ದರೂ, ದೈಹಿಕವಾಗಿ ಅಸಮರ್ಥರಾಗಿರುತ್ತಾರೆ, ಬಾಹ್ಯ ಪ್ರಪಂಚದಲ್ಲಿ ಸಂಹವನ ನಡೆಸುವುದು ಇವರಿಗೆ ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭಗಳಲ್ಲಿ ಬ್ರೇನ್-ಕಂಪ್ಯೂಟರ್ ಇಂಟರ್‌ಫೇಸ್ ಸಾಧನವು ಅತ್ಯುತ್ತಮ ಆಯ್ಕೆಯಾಗಲಿದೆ. 'ನ್ಯೂರೋಲಿಂಕ್' ಎಂಬುದು ಇಂಥದೊಂದು ಸಾಧನ ಅಥವಾ ಇಂಪ್ಲ್ಯಾಂಟ್.

ಇಂಟರ್‌ಫೇಸ್‌ನ ವಿಧಗಳು

- **ಆಕ್ರಮಣಶೀಲ ಬ್ರೇನ್-ಕಂಪ್ಯೂಟರ್ ಇಂಟರ್‌ಫೇಸ್:** ಇಲ್ಲಿ 'ಬಿಸಿಐ' ಸಾಧನಗಳನ್ನು ಶಸ್ತ್ರಚಿಕಿತ್ಸೆಯ ಮುಖೇನ ಮಿದುಳಿನಲ್ಲಿ ಅಳವಡಿಸಲಾಗುತ್ತದೆ. ಶಸ್ತ್ರಚಿಕಿತ್ಸೆಯೊಂದಿಗೆ ಬರುವ ಪಾರ್ಶ್ವವಾಯು ಮತ್ತು ನರಸ್ನಾಯುಕ ಅಸ್ವಸ್ಥತೆಗಳಂಥ ತೀವ್ರ ಪರಿಸ್ಥಿತಿಗಳಿಂದ ಚೇತರಿಸಿಕೊಳ್ಳಲು ಬಯಸುವ ರೋಗಿಗಳಿಗೆ ಈ 'ಬಿಸಿಐ'ಗಳು ಸೂಕ್ತವಾಗಿವೆ.
- **ಆಕ್ರಮಣಶೀಲವಲ್ಲದ ಇಂಟರ್‌ಫೇಸ್‌ಗಳು:** ಈ ವಿಧಾನದಲ್ಲಿ ಯಾವುದೇ ರೀತಿಯ ಶಸ್ತ್ರಚಿಕಿತ್ಸೆಯನ್ನು ಮಾಡದೆ, ತಲೆಯ ನೆತ್ತಿಯ ಮೇಲೆ ಸಾಧನವನ್ನು ಅಳವಡಿಸಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಮಿದುಳಿನ ಸಂಕೇತಗಳನ್ನು ಪತ್ತೆಹಚ್ಚಲು ಸೆನ್ಸರ್‌ಗಳನ್ನು ಬಳಸಲಾಗುತ್ತದೆ.

ಕಾರ್ಯನಿರ್ವಹಣೆಯ ಪರಿ

- **ಸಿಗ್ನಲ್ ಸಾಧನ:** ಈ ಸಾಧನವು ವಿಶೇಷ ಸಂವೇದಕಗಳನ್ನು ಬಳಸಿಕೊಂಡು ಮಿದುಳಿನ ವಿದ್ಯುತ್ ಅಥವಾ ಚಯಾಪಚಯ ಚಟುವಟಿಕೆಯನ್ನು ಸೆರೆಹಿಡಿಯುತ್ತದೆ. ಈ ಸಂಕೇತಗಳು ಇಲೆಕ್ಟ್ರೋಕೆಮಿಕಲ್ ಪ್ರಚೋದನೆಗಳ ಮೂಲಕ ಸಂವಹನ ನಡೆಸುವ ನರಕೋಶಗಳಿಂದ ಹುಟ್ಟಿಕೊಳ್ಳುತ್ತವೆ.
- **ಸಿಗ್ನಲ್ ಸಂಸ್ಕರಣೆ:** ಮಿದುಳಿನ ಸಂಕೇತಗಳನ್ನು ಒಮ್ಮೆ ಸ್ವೀಕರಿಸುತ್ತಿದ್ದಂತೆ ಅವು ಬಹುಹಂತದ ಕ್ರಿಯೆಗೆ ಒಳಗಾಗುತ್ತವೆ. ಪೂರ್ವಸಂಸ್ಕರಣೆಯು ಶಬ್ದವನ್ನು ಫಿಲ್ಟರ್ ಮಾಡುತ್ತದೆ ಮತ್ತು ಸಂಬಂಧಿತ ಮಿದುಳಿನ ಸಂಕೇತಗಳನ್ನು ಹೊರತೆಗೆಯುತ್ತದೆ.
- **ಅನುವಾದದ ಅಲ್ಗಾರಿದಮ್:** ಇದು ನರಸಂಕೇತಗಳನ್ನು, ಯಂತ್ರವು ಓದಬಲ್ಲ ಆದೇಶಗಳಾಗಿ ಪರಿವರ್ತಿಸುತ್ತದೆ.
- **ಔಟ್‌ಪುಟ್ ಎಕ್ಸಿಕ್ಯೂಷನ್:** ಅನುವಾದಿತ ನರ-ಆದೇಶಗಳನ್ನು, ಉದ್ದೇಶಿತ ಕ್ರಿಯೆಗಳನ್ನು ಕಾರ್ಯಗತಗೊಳಿಸಲು ರೋಬೋಟಿಕ್ ಲಿಂಬ್, ಕರ್ಸರ್ ಅಥವಾ ಸ್ಮಾರ್ಟ್ ಉಪಕರಣದಂಥ ಹೊರಗಿನ ಸಾಧನಕ್ಕೆ ರವಾನಿಸಲಾಗುತ್ತದೆ.
- **ಪ್ರತಿಕ್ರಿಯೆ ಕಾರ್ಯವಿಧಾನ:** ಈ ಪ್ರತಿಕ್ರಿಯೆಯು ಸಾಧನದ ನಿಖರತೆ ಮತ್ತು ಸ್ಪಂದಿಸುವಿಕೆಯನ್ನು ಸುಧಾರಿಸುತ್ತದೆ.

ಪ್ರಯೋಜನಗಳು

ಪಾರ್ಶ್ವವಾಯು, ಎಎಲ್‌ಎಸ್, ಬೆನ್ನುಹುರಿಯ ಗಾಯಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಸಹಾಯಕ ಸಾಧನಗಳಾಗಿ ಇವು ಬಳಕೆಯಾಗಬಲ್ಲವು. ಪಾರ್ಶ್ವವಾಯು ಚೇತರಿಕೆಯಲ್ಲಿ ಮತ್ತು ಮಾತಿನ ನಷ್ಟ ಇರುವ ಜನರಿಗೆ ಸಂವಹನ ನಡೆಸಲು ಇವು ನೆರವಾಗಬಲ್ಲವು. ವೀಲ್‌ಚೇರ್‌ಗಳು, ರೋಬೋಟ್‌ಗಳು ಮತ್ತು ಸಂಪೂರ್ಣ ಸ್ಮಾರ್ಟ್‌ಹೋಮ್ ಪರಿಸರ ಸೇರಿದಂತೆ ವಿವಿಧ ಸಾಧನಗಳನ್ನು ನಿಯಂತ್ರಿಸಲು 'ಬಿಸಿಐ'ಗಳನ್ನು ಬಳಸಬಹುದು. ಮಿಕ್ಕಂತೆ, ಶಿಕ್ಷಣ ವ್ಯವಸ್ಥೆಯಲ್ಲಿ, ಗೇಮಿಂಗ್ ಮತ್ತು ಮನರಂಜನಾ ವಲಯದಲ್ಲಿ, ಬಯೋಮೆಟ್ರಿಕ್ ಗುರುತಿಸುವಿಕೆ ಮತ್ತು ದೃಢೀಕರಣಕ್ಕಾಗಿ ಬಿಸಿಐಗಳನ್ನು ಬಳಸಬಹುದು. ಮಾತ್ರವಲ್ಲದೆ, ಅಪಾಯಕಾರಿ ಪರಿಸರದಲ್ಲಿ ರೋಬೋಟ್‌ಗಳು ಮತ್ತು ಇತರೆ ಉಪಕರಣಗಳ ನಿಯಂತ್ರಣಕ್ಕೂ ಬಿಸಿಐಗಳ ನೆರವನ್ನು ಪಡೆಯಬಹುದು.

ಮಿತಿಗಳು

ಬಿಸಿಐಗಳಿಗೆ ಅವುಗಳದ್ದೇ ಆದ ಮಿತಿಗಳೂ ಇವೆ. ಅಂದರೆ, ತಾಂತ್ರಿಕ ದೋಷಗಳು, ಬಳಕೆದಾರರ ಸಂಬಂಧಿತ ಸಮಸ್ಯೆ, ದುಬಾರಿ ವೆಚ್ಚಗಳು ಮಾತ್ರವಲ್ಲದೆ, ನೈತಿಕತೆ ಹಾಗೂ ಸುರಕ್ಷಾ ಸಂಬಂಧಿತ ಸಮಸ್ಯೆಗಳೂ ಇವುಗಳ ಬಳಕೆಯ ವೇಳೆ ತಲೆದೋರಬಹುದು.

(ಲೇಖಕರು ತಜ್ಞ ವೈದ್ಯರು, ಮಂಡ್ಯ)

ಮಾರಕವಾಗದಿರಲಿ ಕೇಂದ್ರದ ಎಥೆನಾಲ್ ನೀತಿ

ಕೃಷಿರಂಗ
ಬಸವರಾಜ ಶಿವಪ್ಪ ಗಿರಗಾಂವಿ
vveditoped@gmail.com

ಕೇಂದ್ರ ಸರಕಾರವು ದೇಶದಲ್ಲಿ ಹೆಚ್ಚುತ್ತಿರುವ ಧಾನ್ಯಗಳ ಸಂಗ್ರಹದಿಂದ ಎಥೆನಾಲ್ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಏರುಗತಿಯಲ್ಲಿರುವ ಸಕ್ಕರೆ ದರವನ್ನು ನಿಯಂತ್ರಿಸಲು 2025-26ನೇ ಸಾಲಿಗಾಗಿ ಹೊಸ ಎಥೆನಾಲ್ ನೀತಿಯನ್ನು ಜಾರಿಗೊಳಿಸಿದೆ. ತಕ್ಷಣವೇ ಜಾರಿಗೆ ಬರುವಂತೆ ದೇಶದಲ್ಲಿರುವ ಸಕ್ಕರೆ ಕಾರ್ಖಾನೆಗಳು ಮತ್ತು ಡಿಸ್ಟಿಲರಿಗಳು 2025-26ರ ಕಬ್ಬು ನುರಿಸುವ ಹಂಗಾಮಿನಲ್ಲಿ ಕಬ್ಬು ರಸ(ಜ್ಯೂಸ್)ದಿಂದ ಹಾಗೂ ಸಕ್ಕರೆ ಪಾಕದಿಂದ (ಸಿರಪ್) ಒಟ್ಟು ಸಾಮರ್ಥ್ಯದ ಶೇ.33ರಷ್ಟು ಮಾತ್ರ ಎಥೆನಾಲ್ ಉತ್ಪಾದಿಸುವಂತೆ ಆದೇಶಿಸಿದೆ.

ಕೇಂದ್ರದ ಈ ನಿರ್ಧಾರದಿಂದ ದೇಶದಲ್ಲಿ ಅತಿ ಹೆಚ್ಚು ಎಥೆನಾಲ್ ಉತ್ಪಾದಿಸುವ ಕರ್ನಾಟಕದ ರೈತರಿಗೆ ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ಬರಸಿಡಿಲು ಬಡಿದಂತಾಗಿದೆ. ಒಂದು ವೇಳೆ ಈ ಆದೇಶವನ್ನು ಕೇಂದ್ರ ಸರಕಾರವು ಮರುಪರಿಶೀಲಿಸದಿದ್ದಲ್ಲಿ ದೇಶದಲ್ಲಿರುವ ಅಂದಾಜು 60 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿರುವ ಕಬ್ಬು ಬೆಳೆಗಾರರಿಗೆ ಯೋಗ್ಯವಾದ ಹಾಗೂ ಸಮಯಾನುಸಾರ ಕಬ್ಬಿನ ಬೆಲೆ ದೊರೆಯುವುದು ಅಸಾಧ್ಯ. ಈಗಾಗಲೇ ಕರ್ನಾಟಕದಲ್ಲಿ ಕಬ್ಬು ಕ್ಷೇತ್ರವಿರುವ ಹಲವು ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಇದರಿಂದ ಅತಿಹೆಚ್ಚು ಸೂರ್ಯಪ್ರಕಾಶ ಬಯಸುವ ಕಬ್ಬಿಗೆ ಬೇಡಿಕೆಯಂತೆ ಸೂರ್ಯಪ್ರಕಾಶ ಮತ್ತು ಆರ್ದ್ರತೆ ಲಭಿಸಿಲ್ಲ. ಇದರಿಂದ ಕಬ್ಬು ಕ್ಷೇತ್ರ ಹೆಚ್ಚಾಗಿದ್ದರೂ ಉತ್ಪನ್ನ ಕಡಿಮೆಯಾಗುವ ಅಂದಾಜಿದೆ. ಹೀಗಾಗಿ ಸದ್ಯ ಕಬ್ಬು ಬೆಳೆಗಾರರಿಗೆ ಕಡಿಮೆ ಇಳುವರಿಯಿಂದ ನಷ್ಟವಾದರೆ, ಕೆಲಸದ ದಿನಗಳ ಕುಸಿತ ಹಾಗೂ ಗುಣಮಟ್ಟದ ಕಬ್ಬಿನ ಕೊರತೆಯಿಂದ ಸಕ್ಕರೆ ಉದ್ದಿಮೆಗೂ ನಷ್ಟವಾಗಲಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರವು ಹೊರಡಿಸಿದ ಈ ಆದೇಶವು ರೈತರಿಗೆ ಹಾಗೂ ಕಾರ್ಖಾನೆಗಳಿಗೆ ನುಂಗಲಾರದ ತುತ್ತಾಗಿದೆ.

2000ನೇ ಇಸವಿಯಲ್ಲಿ ದೇಶವು ವಿದ್ಯುತ್ ಕೊರತೆ ಅನುಭವಿಸುತ್ತಿತ್ತು. ಆಗ ಕೇಂದ್ರ ಸರಕಾರವು ಹೆಚ್ಚಿನ ದರದಲ್ಲಿ ಸ್ವತಃ ವಿದ್ಯುತ್ ಖರೀದಿಸುವುದಾಗಿ ಹೇಳಿ ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಉತ್ಪಾದನೆಗಾಗಿ ಬೃಹತ್ ಪ್ರಮಾಣದಲ್ಲಿ ಹೂಡಿಕೆ ಮಾಡಿಸಿತು. ಆರಂಭದಲ್ಲಿ ಪ್ರತಿ ಯುನಿಟ್‌ಗೆ 13 ರುಪಾಯಿ ದರದಂತೆ ಖರೀದಿಸಿ ಮುಂದೆ ಕೆಲವೇ ತಿಂಗಳುಗಳಲ್ಲಿ 11 ರು., ನಂತರದಲ್ಲಿ 9 ರು. ಹೀಗೆಯೆ ಕಡಿಮೆ ಮಾಡುತ್ತ ಸದ್ಯ ಕೇವಲ 2.60 ರು.ಗೆ ತಂದು ನಿಲ್ಲಿಸಿದೆ. ಇದರಿಂದಾಗಿ ಕಾರ್ಖಾನೆಗಳು ವಿದ್ಯುತ್ ಅನ್ನು ಹಲವು ಷರತ್ತುಗಳೊಂದಿಗೆ ಖಾಸಗಿಯಾಗಿ ಮಾರಾಟ ಮಾಡಬೇಕಾದ ಅನಿವಾರ್ಯತೆ ಬಂದಿದೆ.

ಇದೇ ಮಾದರಿಯಂತೆ ಕಳೆದ 2017-18ರ ವರ್ಷದಲ್ಲಿ ಕೇಂದ್ರ ಸರಕಾರವು ಇಂಧನ ಸ್ವಾವಲಂಬನೆ, ರೈತರ ಸಂರಕ್ಷಣೆ, ಕಾರ್ಖಾನೆಗಳ ಪುನಶ್ಚೇತನ, ವಿದೇಶಿ ವಿನಿಮಯ ಉಳಿತಾಯ, ಹಸಿರು ಇಂಧನ ಉತ್ಪಾದನೆ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಸೇರಿದಂತೆ ಹಲವು ಸಮಂಜಸವೆನಿಸುವ ಕಾರಣಗಳನ್ನು ಹೇಳಿದ್ದರಿಂದ, ದೇಶಾದ್ಯಂತದ ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿದವು. ಇದರ ಪರಿಣಾಮವಾಗಿ, ಮೊದಲೇ ಸಂಕಷ್ಟದಲ್ಲಿದ್ದ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರಕಾರದ ಎಥೆನಾಲ್ ಉತ್ಪಾದನೆ ಕುರಿತಾದ ಅಂದಿನ ಆಶಾದಾಯಕ ನೀತಿಗೆ ಮನಸೋತು ಸಾಲದ ಹೊರೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡು, ಡಿಸ್ಟಿಲರಿ ಘಟಕಗಳನ್ನು ಸ್ಥಾಪಿಸಿದವು. ಆದರೆ 2022-23ನೇ ಸಾಲಿನಲ್ಲಿ, ಅತಿಯಾಗಿ ಎಥೆನಾಲ್ ಉತ್ಪಾದಿಸದಂತೆ ಸರಕಾರ ನಿರ್ಬಂಧಿಸಿತು. ಮತ್ತೆ ಈಗ 2025-26ನೇ ಸಾಲಿನಲ್ಲಿ ಎಥೆನಾಲ್ ಉತ್ಪಾದನೆ ನಿಯಂತ್ರಿಸಲು ಆದೇಶಿಸಿದೆ. ಭವಿಷ್ಯದಲ್ಲಿ ಎಥೆನಾಲ್ ಉತ್ಪಾದನೆಯೂ ವಿದ್ಯುತ್ ಉತ್ಪಾದನೆಯಂತಾಗಬಹುದೆಂದು ಅಂದಾಜಿಸಲಾಗುತ್ತಿದೆ.

ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ ಸಕ್ಕರೆ ದೊರೆಯಲೆಂಬುದು ಕೇಂದ್ರ ಸರಕಾರದ ನಿಲುವಾಗಿದೆ. ಆದರೆ ಸಕ್ಕರೆ ದರವು ಕಡಿಮೆಯಾದಾಗ ಅದರ ನಿಜವಾದ ಉಪಯೋಗವನ್ನು ಮಿಠಾಯಿ ಉದ್ದಿಮೆ, ಬಿಸ್ಕತ್ತು, ಚಾಕೊಲೇಟ್ ಹಾಗೂ ತಂಪು ಪಾನೀಯ ಕಂಪನಿಗಳು ಪಡೆಯುತ್ತವೆ. ಜನಸಾಮಾನ್ಯರು ದೇಶದಲ್ಲಿ ಬಳಕೆಯಾಗುವ ಶೇ.90ರಷ್ಟು ಸಕ್ಕರೆಯನ್ನು ನೇರವಾಗಿ ಉಪಯೋಗಿಸುವುದಿಲ್ಲ. ಇದನ್ನು ಸರಕಾರವು ಗಂಭೀರವಾಗಿ ಪರಿಗಣಿಸಬೇಕು. ಆದ್ದರಿಂದ ಸರಕಾರವು ವಾಣಿಜ್ಯ ಬಳಕೆಗಾಗಿ ಉಪಯೋಗಿಸುತ್ತಿರುವ ಸಕ್ಕರೆ ಮಾರಾಟಕ್ಕೆ ಪ್ರತ್ಯೇಕ ಮಾನದಂಡಗಳನ್ನು ನಿಗದಿಪಡಿಸಬೇಕು. ಸಕ್ಕರೆಯ ತಲಾ ಬಳಕೆಯನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಬಳಸುವ ಸಕ್ಕರೆಗೆ ಪ್ರತ್ಯೇಕ ದರ ನಿಗದಿಯಾಗಬೇಕು. ಅಂದಾಗ ಮಾತ್ರ ಕೇಂದ್ರದ ಈ ಉದ್ದೇಶವು ಪರಿಪೂರ್ಣವಾಗಿ ಸಾಕಾರಗೊಳ್ಳುತ್ತದೆ. ತಪ್ಪಿದಲ್ಲಿ, ಬದುಕುಳಿಯಲು ಸಾಕಷ್ಟು ಶ್ರಮ ಹಾಕುತ್ತಿರುವ ಸಕ್ಕರೆ ಉದ್ದಿಮೆ ಹಾಗೂ ಕಬ್ಬು ಬೆಳೆಗಾರರು ಬಲಿಪಶುವಾಗುವುದರಲ್ಲಿ ಸಂದೇಹವಿಲ್ಲ.

ಕೇಂದ್ರದ ಹೊಸ ನೀತಿಯಿಂದ ಈ ಕೆಳಗಿನ ಸಂಕಷ್ಟಗಳು ಎದುರಾಗುವ ಅಪಾಯವಿದೆ:

- ಎಥೆನಾಲ್ ದರ ಮತ್ತು ಮಾರಾಟವು ನಿಶ್ಚಿತವಾಗಿದೆ, ಆದರೆ ಸಕ್ಕರೆ ದರ ಮತ್ತು ಮಾರಾಟವು ಅನಿಶ್ಚಿತವಾಗಿರುತ್ತದೆ.

- ಭಾರತೀಯ ಆಯಿಲ್ ಕಂಪನಿಗಳು ಎಥೆನಾಲ್ ಸ್ವೀಕರಿಸಿದ 21 ದಿನಗಳಲ್ಲಿ ಹಣ ಮರುಪಾವತಿಸುವುದರಿಂದ ರೈತರಿಗೆ ಬೇಗನೆ ಕಬ್ಬು ಬೆಲೆ ಪಾವತಿಸಲು ಸಹಕಾರಿಯಾಗುತ್ತದೆ. ಕೇವಲ ಸಕ್ಕರೆಯ ಉತ್ಪಾದನೆ ಮಾಡುವುದರಿಂದ ಸಮಯಾನುಸಾರ ಯೋಗ್ಯವಾದ ಬೆಲೆಯನ್ನು ಕೊಡಲು ಅಸಾಧ್ಯವಾಗುತ್ತದೆ.
- ಇತ್ತೀಚೆಗಷ್ಟೆ ಹಲವಾರು ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಘಟಕಗಳ ನಿರ್ಮಾಣಕ್ಕಾಗಿ ಕೋಟ್ಯಂತರ ಹಣ ವಿನಿಯೋಗಿಸಿವೆ. ಆರಂಭದಲ್ಲಿಯೇ ಹೀಗೆ ಎಥೆನಾಲ್ ಉತ್ಪಾದನೆ ಸ್ಥಗಿತವಾಗುವುದರಿಂದ ಕಾರ್ಖಾನೆಗಳು ತೀವ್ರ ನಷ್ಟವನ್ನು ಅನುಭವಿಸುತ್ತವೆ.
- ಎಥೆನಾಲ್ ಉತ್ಪಾದನೆಯಿಂದಾಗಿ ದೇಶಾದ್ಯಂತ ಕಬ್ಬು ಬೆಳೆಗಾರರ ಬಾಕಿ ಪ್ರಮಾಣವು ಕಡಿಮೆಯಾಗಿದೆ. ಆದರೆ ಎಥೆನಾಲ್ ಉತ್ಪಾದನೆ ಕಡಿಮೆ ಮಾಡುವುದರಿಂದ ಮತ್ತೆ ಬಾಕಿ ಪ್ರಮಾಣವು ಹೆಚ್ಚಾಗಬಹುದು.
- ಸಕ್ಕರೆ ಕಾರ್ಖಾನೆಗಳು ಕೇವಲ ಸಕ್ಕರೆಯನ್ನು ಉತ್ಪಾದನೆ ಮಾಡುವುದರಿಂದ ಸಕ್ಕರೆಯ ಬೆಲೆ ಕುಸಿತವಾಗುವ ಸಂಭವವಿರುತ್ತದೆ.
- ಭಾರತವು ಪ್ರಪಂಚದಲ್ಲಿಯೆ ಅತೀ ಹೆಚ್ಚು ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ದೇಶದ ಬಹುಪಾಲು ವಿದೇಶಿ ವಿನಿಮಯವು ಖರ್ಚಾಗುತ್ತಿದೆ. ಆದರೆ 2024-25ನೇ ಸಾಲಿನ ಒಂದೇ ವರ್ಷದಲ್ಲಿ ಎಥೆನಾಲ್ ಬಳಕೆಯಿಂದ ದೇಶದಲ್ಲಿ 1.44 ಲಕ್ಷ ಕೋಟಿ ರು. ಮೌಲ್ಯದ ವಿದೇಶಿ ವಿನಿಮಯವು ಉಳಿತಾಯವಾಗಿದೆ.
- ಕೇಂದ್ರ ಸರಕಾರಕ್ಕೆ ಎಥೆನಾಲ್ ಉತ್ಪಾದನೆ, ಪೂರೈಕೆ ಹಾಗೂ ಬಳಕೆಯಿಂದ ಬರುವ ರಾಜಸ್ವ ಸಂಗ್ರಹವು ಕಡಿಮೆಯಾಗುತ್ತದೆ.
- ಎಥೆನಾಲ್ ಸಾಗಾಟ ಸ್ಥಗಿತಗೊಳ್ಳುವುದರಿಂದ, ಎಥೆನಾಲ್ ಸಾಗಾಣೆಗಾಗಿ ಭಾರಿ ವಾಹನಗಳನ್ನು ಹೊಂದಿರುವ ಟ್ಯಾಂಕರ್ ಸಾರಿಗೆದಾರರಿಗೆ ಹಾನಿಯಾಗುತ್ತದೆ.
- ಆದೇಶದ ಜಾರಿಗೆ ಕೇಂದ್ರ ಸರಕಾರವು ಪ್ರಸಕ್ತ ವರ್ಷದ ಎಫ್‌ಆರ್‌ಪಿ ಬೆಲೆಯನ್ನು ತಕ್ಷಣದಿಂದ ಮರುಪರಿಶೀಲಿಸಬೇಕಾಗುತ್ತದೆ. ಈಗಾಗಲೆ ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಉತ್ಪಾದನೆ ಮತ್ತು ಎಫ್‌ಆರ್‌ಪಿ ಬೆಲೆಯನ್ನು ಪರಿಗಣಿಸಿಯೇ ಕಬ್ಬು ಬೆಲೆಯನ್ನು ನಿಗದಿಪಡಿಸಿರುತ್ತವೆ. ಒಂದು ವೇಳೆ ಈ ಆದೇಶವು ಜಾರಿಯಾದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಉಂಟಾಗುವ ನಷ್ಟದ ಪ್ರಮಾಣವನ್ನು ಕೇಂದ್ರ ಸರಕಾರವು 'ಬರಪಾಯಿ' ಮಾಡಿಕೊಡಬೇಕಾಗುತ್ತದೆ.
- ಎಥೆನಾಲ್ ಬಳಕೆಗೆ ಅನ್ವಯವಾಗುವಂತೆ ವಾಹನ ತಯಾರಿಕಾ ಕಂಪನಿಗಳು ವಾಹನಗಳಲ್ಲಿ ಮಾಡುತ್ತಿರುವ ತಾಂತ್ರಿಕ ಮಾರ್ಪಾಟಿಗೆ ತೊಂದರೆಯಾಗುವ ಸಂಭವವಿದೆ.
- ಎಥೆನಾಲ್ ಉತ್ಪಾದನೆಯ ಸ್ಥಗಿತದಿಂದಾಗಿ ರೈತರ ಪಾಲಿಗೆ, ಡಬಲ್ ಇನ್‌ಕಮ್, ಆತ್ಮನಿರ್ಭರ ಭಾರತ ಹಾಗೂ ಮೇಕ್ ಇನ್ ಇಂಡಿಯಾ ಎಂಬ ಕೇಂದ್ರ ಸರಕಾರದ ಜನಪ್ರಿಯ ಘೋಷಣೆಗಳು ಮಹತ್ವವನ್ನು ಕಳೆದುಕೊಳ್ಳುತ್ತವೆ.

ಕೆಲವು ವರ್ಷಗಳ ಹಿಂದೆ ದೇಶದ ಸಕ್ಕರೆ ಉದ್ಯಮವು, ಹೊರಬರಲಾರದಷ್ಟರ ಮಟ್ಟಿಗೆ ನಷ್ಟದ ಕೂಪದಲ್ಲಿ ಸಿಲುಕಿಕೊಂಡಿತ್ತು. ಆಗ ಕೇಂದ್ರ ಸರಕಾರವು ಸಕ್ಕರೆ ಉದ್ಯಮವನ್ನು ನಷ್ಟದಿಂದ ಪಾರು ಮಾಡಲು ತಜ್ಞರಿಂದ ಸಾಕಷ್ಟು ಅಧ್ಯಯನ ನಡೆಸಿ ಎಥೆನಾಲ್ ಉತ್ಪಾದನೆಯ ನೀತಿಯನ್ನು ಜಾರಿಗೊಳಿಸಿತು. ಇದರಿಂದಾಗಿ ಸದ್ಯ ಸಕ್ಕರೆ ಉದ್ಯಮವು ನಷ್ಟದಿಂದ ಕ್ರಮೇಣವಾಗಿ ಹೊರಬರುತ್ತಿದೆ. ಆದರೆ ಕೇಂದ್ರ ಸರಕಾರವು ಪ್ರತಿವರ್ಷ ಎಥೆನಾಲ್ ನೀತಿಯನ್ನು ಬದಲಾವಣೆ ಮಾಡುತ್ತಿರುವುದರಿಂದ ಸಕ್ಕರೆ ಉದ್ಯಮವು ಮತ್ತೆ ಸಂಕಷ್ಟಕ್ಕೆ ಸಿಲುಕುವ ಸಂಭವವಿದೆ.

ಬ್ರೆಜಿಲ್ ಮತ್ತು ಕ್ಯೂಬಾ ದೇಶಗಳು ಎಥೆನಾಲ್ ಉತ್ಪಾದನೆ ಮತ್ತು ಬಳಕೆಯಿಂದ ವಿಶ್ವದಲ್ಲಿಯೇ ಸಕ್ಕರೆ ಉದ್ಯಮವನ್ನು ಹಾಗೂ ರೈತರನ್ನು ಲಾಭದಾಯಕ ಸ್ಥಿತಿಯಲ್ಲಿರಿಸಿವೆ. ವಿಶ್ವದೆಲ್ಲೆಡೆ ಗೋವಿನಜೋಳ ಹಾಗೂ ಇತರೆ ಆಹಾರಧಾನ್ಯಗಳು ಸೇರಿದಂತೆ ಹಲವು ಕೃಷಿ ಉತ್ಪನ್ನಗಳಿಂದ ಎಥೆನಾಲ್ ಉತ್ಪಾದಿಸಲಾಗುತ್ತದೆ. ಆದರೆ ಕಬ್ಬು ಬೆಳೆಯಿಂದ ಉತ್ಪಾದನೆಯಾಗುವ ಎಥೆನಾಲ್ ಕಡಿಮೆ ಖರ್ಚು ಹಾಗೂ ಉತ್ತಮ ಗುಣಮಟ್ಟದಿಂದ ಕೂಡಿರುತ್ತದೆ. ಆದ್ದರಿಂದ ಕೇಂದ್ರ ಸರಕಾರವು ರೈತರ ಹಾಗೂ ಸಕ್ಕರೆ ಉದ್ದಿಮೆಗಳ ಹಿತ ಕಾಪಾಡಲು ಈ ಆದೇಶವನ್ನು ಮರುಪರಿಶೀಲಿಸಬೇಕು.

(ಲೇಖಕರು ಕೃಷಿ ತಜ್ಞರು ಹಾಗೂ ಸಹಾಯಕ ಮಹಾ ಪ್ರಬಂಧಕರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 174

ಸಮಾಚಾರ ಸಣ್ಣದಲ್ಲ

ಚೀನಾ-ಭಾರತ ಮಧ್ಯೆ ನೇರ ವಿಮಾನ ಸಂಚಾರ

ದೆಹಲಿ: ಐದು ವರ್ಷಗಳ ನಂತರ ಭಾರತ-ಚೀನಾ ನಡುವೆ ನೇರ ವಿಮಾನ ಸಂಚಾರ ಭಾನುವಾರದಿಂದ ಪುನಾರಂಭಗೊಂಡಿದೆ. ಸಾಂಕ್ರಾಮಿಕ ರೋಗ 'ಕರೋನಾ' ಕಾರಣಕ್ಕೆ ಭಾರತ-ಚೀನಾ ನಡುವಿನ

ನೇರ ವಿಮಾನ ಸೇವೆ 2020ರಲ್ಲಿ ಸ್ಥಗಿತಗೊಂಡಿತ್ತು. ಆ ಬಳಿಕ ಪೂರ್ವ ಲಡಾಖ್‌ನಲ್ಲಿ ಚೀನಾ ಗಡಿ ಭಾಗದಲ್ಲಿ ಎರಡೂ ಕಡೆಯ ಸೈನಿಕರ ಮಧ್ಯೆ 4 ವರ್ಷಗಳ ಹಿಂದೆ ನಡೆದ ಗಡಿ ಸಂಘರ್ಷದಿಂದಾಗಿ ನೇರ ವಿಮಾನ ಯಾನ ಮತ್ತೆ ಆರಂಭಗೊಂಡಿರಲಿಲ್ಲ. ಕಡೆಗೂ ಭಾನುವಾರ ರಾತ್ರಿ 10 ಗಂಟೆಗೆ ಭಾರತ-ಚೀನಾ ಮಧ್ಯೆ ನೇರ ವಿಮಾನ ಹಾರಾಟ ಮರಳಿ ಆರಂಭಗೊಂಡಿದೆ. ಕೋಲ್ಕತ್ತದಿಂದ ಹೊರಟ ಇಂಡಿಗೊ ವಿಮಾನ ಚೀನಾದ ಗುವಾಂಗ್ಝೌ ನಗರದ ವಿಮಾನ ನಿಲ್ದಾಣದಲ್ಲಿ ಸೋಮವಾರ ನಸುಕಿನ 4.05 ಗಂಟೆಗೆ ಇಳಿದಿದೆ. ಚೀನಾದ ಶಾಂಘೈ ನಗರದಿಂದ ದೆಹಲಿಗೆ ನೇರ ವಿಮಾನ ಸಂಚಾರ ನ.9ರಿಂದ ಪುನರಾರಂಭಗೊಳ್ಳಲಿವೆ. ಇಂಡಿಗೊ ವಿಮಾನಯಾನ ಸಂಸ್ಥೆಯ ವಿಮಾನವೂ ಮರುದಿನ ಅಂದರೆ, ನ.10ರಂದು ದೆಹಲಿಯಿಂದ ಗುವಾಂಗ್ಝೌಗೆ ನೇರ ಹಾರಾಟ ನಡೆಸಲು ಆರಂಭಿಸಲಿದೆ. ಶಾಂಘೈ ಸಹಕಾರ ಸಂಸ್ಥೆ (ಖಇಣ) ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ಪಿಂಗ್ ನಡುವಿನ ಸಭೆಯ ನಂತರ, ಭಾರತದ ವಿದೇಶಾಂಗ ಸಚಿವಾಲಯ ನೇರ ವಿಮಾನಗಳ ಪುನರಾರಂಭವನ್ನು ಘೋಷಿಸಿತು.

ಮದ್ಯ ವ್ಯಸನದಿಂದ 21 ಅಮಾಯಕರ ಬಲಿ

ಹೈದರಾಬಾದ್: ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ಖಾಸಗಿ ಸಾರಿಗೆ ಸಂಸ್ಥೆಯಾದ 'ಕಾವೇರಿ ಟ್ರಾವೆಲ್ಸ್'ನ ಸ್ಲೀಪರ್ ಬಸ್ ಬೆಂಕಿಯಲ್ಲಿ ಭಸ್ಮವಾಗಿ 21 ಪ್ರಯಾಣಿಕರು ಸಜೀವ ದಹನವಾಗಲು ಮೂಲ ಕಾರಣವಾಗಿದ್ದು, ಮದ್ಯದ ಅಮಲಿನಲ್ಲಿದ್ದ ಮೋಟಾರ್ ಬೈಕ್ ಸವಾರ ಎಂಬ ಸಂಗತಿ ದುರಂತದ ಬೆನ್ನಲ್ಲೇ ಭಾರೀ ಚರ್ಚೆಗೆ ಕಾರಣವಾಗಿದೆ. ಇದನ್ನು ದೃಢೀಕರಿಸುವಂತೆ ಭಾನುವಾರ ಹೊರಬಂದ 'ವಿಧಿವಿಜ್ಞಾನ ಪ್ರಯೋಗಾಲಯ' ವರದಿಯಲ್ಲಿಯೂ ಮೋಟಾರ್ ಬೈಕ್ ಸವಾರ ಮದ್ಯ ಸೇವಿಸಿದ್ದ ಎಂಬುದು ದೃಢಪಟ್ಟಿದೆ. ಅಲ್ಲದೇ, ಬೈಕ್‌ನಲ್ಲಿದ್ದ ಹಿಂಬದಿ ಸವಾರ ಜೀವಂತವಿದ್ದು, ಅತನನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಸತ್ಯ ಸಂಗತಿ ಬಯಲಾಗಿದೆ. 'ಬೈಕ್ ರೈಡರ್ ಶಿವಶಂಕರ್ ಮದ್ಯ ಸೇವಿಸಿದ್ದರಿಂದಲೇ ರಸ್ತೆ ಮಧ್ಯದ ಡಿವೈಡರ್‌ಗೆ ಡಿಕ್ಕಿ ಹೊಡೆದು ತಲೆಗೆ ಪೆಟ್ಟು ಬಿದ್ದು ಸ್ಥಳದಲ್ಲೇ ಅಸುನೀಗಿದ್ದ. ಆ ನಂತರವಷ್ಟೇ ಆ ಮಾರ್ಗದಲ್ಲಿ ಬಂದ ಕಾವೇರಿ ಟ್ರಾವೆಲ್ಸ್‌ನ ಬಸ್ ನಡಿಗೆ ಬೈಕ್ ಸಮೇತ ಸಿಲುಕಿಕೊಂಡ' ಎಂಬ ಸಂಗತಿಯನ್ನು ಹಿಂಬದಿ ಸವಾರ ಬಾಯಿ ಬಿಟ್ಟಿದ್ದಾನೆ.

ಸಜ್ಜನರ ಆಕ್ರೋಶ: ಈ ಅಂಶಗಳೆಲ್ಲವನ್ನೂ ತಿಳಿದ ಬಳಿಕ ಹೈದರಾಬಾದ್ ಪೊಲೀಸ್ ಆಯುಕ್ತ, ಹುಬ್ಬಳ್ಳಿ ಮೂಲದ ವಿ.ಸಿ.ಸಜ್ಜನರ್, 'ಒಬ್ಬ ಮದ್ಯವ್ಯಸನಿಯ ಕಾರಣದಿಂದ 21 ಅಮಾಯಕರ ಜೀವಗಳು ಬಲಿಯಾಗಿವೆ. ಮದ್ಯ ಸೇವಿಸಿ ವಾಹನ ಚಲಾಯಿಸುವವರೆಲ್ಲರೂ ಭಯೋತ್ಪಾದಕರು, ಮಾನವ ಬಾಂಬ್‌ಗಳು. ಇಂಥ ಮಾನವ ಹಂತಕರಿಗೆ ಕರುಣೆ ತೋರಿಸಬಾರದು' ಎಂದು ಕಿಡಿಕಾರಿದ್ದಾರೆ. ಮೃತರ ಕುಟುಂಬದವರ ಯಾತನೆಯನ್ನು ಇಂಥ ಮದ್ಯ ವ್ಯಸನಿಗಳಿಗೆ ಅರ್ಥ ಮಾಡಿಸುವುದು ಹೇಗೆ? ಎಂದು ಪ್ರಶ್ನಿಸಿದ್ದಾರೆ. 'ನಿಮ್ಮ ಮೋಜು ಮಸ್ತಿಗಾಗಿ ಇತರರ ಜೀವ ಬಲಿ ತೆಗೆದುಕೊಳ್ಳುತ್ತೀರಾ? ಆ ಹಕ್ಕು ನಿಮಗೆ ಯಾರು ಕೊಟ್ಟರು?' ಎಂದು ಪ್ರಶ್ನೆ ಮಾಡಿದ್ದಾರೆ.

{ **ಅಮಿತ್ ಶಾ** } ಕೇಂದ್ರ ಗೃಹ ಸಚಿವ

ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಆಳ್ವಿಕೆ ವೇಳೆ ಬಿಹಾರದಲ್ಲಿ ಎಲ್ಲಾ ಕೈಗಾರಿಕೆಗಳೂ ಮುಚ್ಚಿ ಹೋದವು. ಬದಲಾಗಿ ಒಂದು ಉದ್ಯಮವಷ್ಟೇ ಬೆಳವಣಿಗೆ ಕಂಡಿತು. ಅದುವೇ 'ಅಪಹರಣ, ಸುಲಿಗೆ, ಸುಪಾರಿ ಹತ್ಯೆ, ಡಕಾಯಿತಿ' ಉದ್ಯಮ. ಹೀಗೆ 'ಜಂಗಲ್ ರಾಜ್' ಆಗಿದ್ದ ಬಿಹಾರವನ್ನು ಎನ್‌ಡಿಎ ಸರಕಾರದ ಸಿಎಂ ನಿತೀಶ್ ಕುಮಾರ್ ಆಡಳಿತ ಬದಲಾಯಿಸಿದೆ.



ಕರೂರು ಕಾಲ್ತುಳಿತ: ಸುಪ್ರೀಂ ನಿಗಾದಲ್ಲಿ ಸಿಬಿಐ ತನಿಖೆ ಶುರು

ಐಜಿಪಿ ಶ್ರೇಣಿಯ ಸಿಬಿಐ ಅಧಿಕಾರಿಗಳಿಬ್ಬರ ನೇತೃತ್ವದ ತಂಡ

ಅದಾಗಲೇ ದುರಂತ ಸ್ಥಳಕ್ಕೆ ತೆರಳಿರುವ ಸಿಬಿಐ ವಿಶೇಷ ತಂಡ

ಚೆನ್ನೈ: ಸೆ.27ರಂದು ತಮಿಳಿನ ಖ್ಯಾತ ಚಿತ್ರನಟ ವಿಜಯ್ ಅವರು ಕರೂರಿನಲ್ಲಿ ತಮ್ಮ ಪಕ್ಷವಾದ 'ತಮಿಳಿಗ ವೆಟ್ರಿ ಕಳಗಂ'(ಟಿವಿಕೆ)ನ ಬೃಹತ್ ರ‍್ಯಾಲಿ ನಡೆಸಿದ್ದಾಗ ಕಾಲ್ತುಳಿತವಾಗಿ 41 ಅಭಿಮಾನಗಳ ಜೀವಬಲಿಯಾಗಿ, 60ಕ್ಕೂ ಹೆಚ್ಚು ಜನ ಗಾಯಗೊಂಡಿದ್ದ ಘಟನೆಗೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ(ಸಿಬಿಐ) ತನಿಖೆ ಆರಂಭಿಸಿದೆ.

ಟಿವಿಕೆ ಪಕ್ಷದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಸಿಬಿಐ ತನಿಖೆಗೆ ಆದೇಶಿಸಿದೆ. ಆ ಬಳಿಕ ಸಿಬಿಐ ಅಧಿಕಾರಿಗಳ ವಿಶೇಷ ತಂಡ ತನಿಖೆ ಆರಂಭಿಸಿದೆ. ಸಿಬಿಐ ತನಿಖೆಯು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಜಯ್ ರಸ್ತೋಗಿ ಅವರ ನೇತೃತ್ವದ ಮೂವರು ಸದಸ್ಯರ ಸಮಿತಿಯ ಉಸ್ತುವಾರಿಯಲ್ಲಿಯೇ ನಡೆಯಲಿದೆ ಎಂಬುದು ಉಲ್ಲೇಖಾರ್ಹ.

ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ (ಐಜಿಪಿ) ರ‍್ಯಾಂಕ್‌ನಲ್ಲಿರುವ, ತಮಿಳುನಾಡು ಮೂಲದ, ಆದರೆ ಬೇರೆ ರಾಜ್ಯಗಳಲ್ಲಿ ಸೇವೆಯಲ್ಲಿರುವ ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳು ತನಿಖಾ ತಂಡದ ನೇತೃತ್ವ ವಹಿಸಲಿದ್ದಾರೆ. ಈ ಇಬ್ಬರು ಹಿರಿಯ ಅಧಿಕಾರಿಗಳನ್ನು ನಿವೃತ್ತ

ನ್ಯಾ.ಅಜಯ್ ರಸ್ತೋಗಿ ಅವರೇ ಆಯ್ಕೆ ಮಾಡಲಿದ್ದಾರೆ ಎಂದೂ ಸುಪ್ರೀಂ ಕೋರ್ಟ್‌ನ ನ್ಯಾ.ಜೆ.ಕೆ.ಮಹೇಶ್ವರಿ ಮತ್ತು ನ್ಯಾ.ಎನ್.ವಿ.ಅಂಜಾರಿಯ ಅವರ ದ್ವಿಸದಸ್ಯ ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಕರೂರು ಕಾಲ್ತುಳಿತ ಪ್ರಕರಣದ ತನಿಖೆಯನ್ನು ಈಗಾಗಲೇ ಕೈಗೆತ್ತಿಕೊಂಡಿರುವ ಸಿಬಿಐ, ಮತ್ತೊಂದು ಎಫ್‌ಐಆರ್ ದಾಖಲಿಸಿದೆ.

ಸಿಬಿಐ ಅಧಿಕಾರಿಗಳ ವಿಶೇಷ ತಂಡ ಕಾಲ್ತುಳಿತ ನಡೆದ ಕರೂರು ಜಿಲ್ಲೆಯ ವೇಲುಸಾಮಿಪುರಂಗೆ ತೆರಳಿ ಕಾಲ್ತುಳಿತ ದುರಂತ ನಡೆದ ಸ್ಥಳದಲ್ಲಿ ಪರಿಶೀಲನೆ ನಡೆಸಿದೆ. ಕೆಲವು ಸಾಕ್ಷ್ಯಗಳನ್ನು ಕಲೆ ಹಾಕಿ, ಪ್ರತ್ಯಕ್ಷ ದರ್ಶಿಗಳಿಂದ ಮಾಹಿತಿ ಪಡೆದುಕೊಂಡಿದೆ. ಸಂತ್ರಸ್ತ ಕುಟುಂಬಗಳ ಸದಸ್ಯರ ಹೇಳಿಕೆಗಳನ್ನು ದಾಖಲಿಸಿಕೊಂಡಿದೆ.

ಇಂದು ವಿಜಯ್-ಕಾಲ್ತುಳಿತ ಸಂತ್ರಸ್ತ ಕುಟುಂಬಗಳ ಭೇಟಿ

ಕರೂರು: 41 ಜೀವಗಳನ್ನು ಬಲಿಪಡೆದ ಕರೂರು ಕಾಲ್ತುಳಿತ ದುರಂತ(ಸೆ.27) ನಡೆದು ಭಾನುವಾರಕ್ಕೆ ಸರಿಯಾಗಿ ಒಂದು ತಿಂಗಳಾಗಿದೆ. ಈವರೆಗೂ ಚಿತ್ರನಟ, ಟಿವಿಕೆ ಪಕ್ಷದ ಮುಖಂಡ ವಿಜಯ್ ಸಂತ್ರಸ್ತ ಕುಟುಂಬಗಳನ್ನು ಖುದ್ದಾಗಿ ಭೇಟಿ ಆಗಿಲ್ಲ. ದುರಂತ ನಡೆದ ವಾರಗಳ ನಂತರ ವಿಡಿಯೊ ಕರೆ ಮಾಡಿ ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದ್ದರು.

ನಟ ವಿಜಯ್, ಸಂತ್ರಸ್ತ ಕುಟುಂಬಗಳ ಸದಸ್ಯರನ್ನು ಅ.27ರಂದು ಚೆನ್ನೈ ಬಳಿಯ ಮಹಾಬಲಿಪುರಂನಲ್ಲಿ ಭೇಟಿ ಮಾಡುವ ಸಾಧ್ಯತೆಯಿದೆ ಎಂದು ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಮೂಲಗಳು ಭಾನುವಾರ ತಿಳಿಸಿವೆ.

ಮಹಾಬಲಿಪುರಂನ ರೆಸಾರ್ಟ್‌ವೊಂದರಲ್ಲಿ ಸಂತ್ರಸ್ತ ಕುಟುಂಬಗಳ ಭೇಟಿಗೆ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಪಕ್ಷದ ವತಿಯಿಂದ 50 ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ವಿಜಯ್ ಅವರು ಸಂತ್ರಸ್ತ ಕುಟುಂಬಗಳ ಸದಸ್ಯರನ್ನು ಖುದ್ದು ಭೇಟಿ ಮಾಡಿ ಸಂತಾಪ ಸೂಚಿಸಲಿದ್ದಾರೆ.

ಸಂತ್ರಸ್ತ ಕುಟುಂಬಗಳ ಸದಸ್ಯರನ್ನು ರೆಸಾರ್ಟ್‌ಗೆ ಕರೆದೊಯ್ಯಲು ಟಿವಿಕೆ ಪಕ್ಷದವರು ಬಸ್ ವ್ಯವಸ್ಥೆ ಮಾಡಿದ್ದಾರೆ. ನಮ್ಮಲ್ಲಿ ಹಲವರು ಹೋಗುತ್ತಿದ್ದೇವೆ ಎಂದು ಸಂತ್ರಸ್ತರ ಕುಟುಂಬಗಳ ಸದಸ್ಯರೊಬ್ಬರು ಕರೂರಿನಲ್ಲಿ ವರದಿಗಾರರಿಗೆ ಭಾನುವಾರ ತಿಳಿಸಿದ್ದಾರೆ. ಅಪ್ರಾಪ್ತ ಹೆಣ್ಣು ಮಕ್ಕಳನ್ನು ಕಳೆದುಕೊಂಡ ವೇಲುಸಾಮಿಪುರಂನ ಪೆರುಮಾಳ್ ಎಂಬವರು ವರದಿಗಾರರೊಂದಿಗೆ ಮಾತನಾಡಿ, ಸಂತ್ರಸ್ತ ಕುಟುಂಬಗಳು ರೆಸಾರ್ಟ್‌ಗೆ ಹೋಗಿ ಟಿವಿಕೆ ನಾಯಕನನ್ನು ಭೇಟಿ ಮಾಡುವುದು ಸೂಕ್ತವಲ್ಲ. ಅವರೇ ಸಂತ್ರಸ್ತರ ಮನೆಗೆ ಭೇಟಿ ನೀಡಬೇಕು ಎಂದು ಹೇಳಿದ್ದಾರೆ.

ಗ್ರಾಪಂ ಭತ್ಯೆ ಹೆಚ್ಚಳ, ವಿಮೆ ಪಿಂಚಣಿ: ತೇಜಸ್ವಿ ಭರವಸೆ

ಪಟನಾ: ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ನೇತೃತ್ವದ 'ಮಹಾಘಟಬಂಧನ್' ಬಿಹಾರದಲ್ಲಿ ಅಧಿಕಾರಕ್ಕೆ ಬಂದರೆ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರತಿನಿಧಿಗಳ ಭತ್ಯೆ

ದ್ವಿಗುಣ, 50 ಲಕ್ಷ ರು. ವಿಮಾ ರಕ್ಷೆ ಮತ್ತು ಪಿಂಚಣಿ ಸೌಲಭ್ಯ ಸಿಗಲಿದೆ ಎಂದು ಮಹಾಘಟಬಂಧನ್ ಸಿಎಂ ಅಭ್ಯರ್ಥಿ, ಆರ್‌ಜೆಡಿ ಪಕ್ಷದ ನಾಯಕ ತೇಜಸ್ವಿ ಯಾದವ್ ಭಾನುವಾರ ಘೋಷಿಸಿದ್ದಾರೆ. ಬಿಹಾರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್, ಪಂಚಾಯತ್ ಸಮಿತಿ ಮತ್ತು ಗ್ರಾಮ ಪಂಚಾಯತ್ ಆಡಳಿತವಿದೆ.

ಅಲ್ಲದೇ, ರಾಜ್ಯದಲ್ಲಿ ಪಡಿತರ ವಿತರಣಾ ವ್ಯವಸ್ಥೆಯಲ್ಲಿನ ವಿತರಕರಿಗೆ ಪ್ರತಿ ಕ್ವಿಂಟಲ್ ಧಾನ್ಯ ವಿತರಣೆಗೆ ಸಿಗುತ್ತಿರುವ ಲಾಭಾಂಶ ಪ್ರಮಾಣವನ್ನೂ ಗಣನೀಯವಾಗಿ ಹೆಚ್ಚಿಸಲಾಗುವುದು. ಅಲ್ಲದೆ, ಕ್ಷೌರ, ಕುಂಬಾರಿಕೆ ಮತ್ತು ಬಡಗಿ ಸೇವೆಗಳಲ್ಲಿ ಇರುವವರಿಗೆ ತಲಾ 5 ಲಕ್ಷ ರು.ವರೆಗೆ ಬಡ್ಡಿರಹಿತ ಸಾಲ ನೀಡಲಾಗುವುದು ಎಂದು ತೇಜಸ್ವಿ ಸುದ್ದಿಗೋಷ್ಠಿಯಲ್ಲಿ ಘೋಷಿಸಿದರು.

ಪಕ್ಷ ವಿರೋಧಿ ಚಟುವಟಿಕೆ: ಜೆಡಿಯು ಹನ್ನೊಂದು ನಾಯಕರ ಉಚ್ಚಾಟನೆ

ಪಟನಾ: ಕಳೆದ ಕೆಲವು ದಿನಗಳಿಂದ ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಆರೋಪದಡಿ ಮಾಜಿ ಸಚಿವರೊಬ್ಬರು ಸೇರಿದಂತೆ ಪಕ್ಷದ 11 ನಾಯಕರನ್ನು ಸಂಯುಕ್ತ ಜನತಾ ದಳ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ಮಾಜಿ ಸಚಿವ ಶೈಲೇಶ್ ಕುಮಾರ್, ಮಾಜಿ ಶಾಸಕರಾದ ಶ್ಯಾಮ್ ಬಹದ್ದೂರ್ ಸಿಂಗ್ ಮತ್ತು ಸುದರ್ಶನ್ ಕುಮಾರ್, ಸಂಜಯ್ ಪ್ರಸಾದ್ ಮತ್ತು ರಣವಿಜಯ್ ಸಿಂಗ್ ಅವರುಗಳು ಸೇರಿದಂತೆ ಒಟ್ಟು 11 ನಾಯಕರನ್ನು ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಜೆಡಿಯು ಶಿಸ್ತು ಸಮಿತಿಯು ಸುದ್ದಿಸಂಸ್ಥೆಗೆ ತಿಳಿಸಿದೆ. ಇವರೆಲ್ಲರೂ ಜೆಡಿಯು ಮತ್ತು ಎನ್‌ಡಿಎ ಮಿತ್ರ ಪಕ್ಷಗಳ ಅಧಿಕೃತ ಚುನಾವಣಾ ಅಭ್ಯರ್ಥಿಗಳ ವಿರುದ್ಧವಾಗಿ ಚಟುವಟಿಕೆ ನಡೆಸಿದ್ದರು. ಪಕ್ಷದ ಸಿದ್ಧಾಂತ, ನಿಯಮಗಳನ್ನು ಉಲ್ಲಂಘಿಸಿದ್ದರು. ಹಾಗಾಗಿ ಉಚ್ಚಾಟನೆ ಮಾಡಲಾಗಿದೆ ಎಂದು ಜೆಡಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದನ್‌ಕುಮಾರ್ ಸಿಂಗ್ ತಿಳಿಸಿದ್ದಾರೆ.

ಮಾತುಕತೆ ವಿಫಲವಾದರೆ ಯುದ್ಧ: ಪಾಕ್ ಬೆದರಿಕೆ

ಇಸ್ಲಾಮಾಬಾದ್: ಟರ್ಕಿ ದೇಶದ ರಾಜಧಾನಿ ಇಸ್ತಾಂಬುಲ್‌ನಲ್ಲಿ 2ನೇ ಸುತ್ತಿನ ಶಾಂತಿ ಮಾತುಕತೆ ನಡೆದಿದ್ದು, ಅದೇನಾದರೂ ವಿಫಲವಾದರೆ ಅಫ್ಘಾನಿಸ್ತಾನದೊಂದಿಗೆ ನೇರ ಯುದ್ಧಕ್ಕೆ ಸಿದ್ಧವಿದ್ದೇವೆ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಭಾನುವಾರ ಹೇಳಿದ್ದಾರೆ.



ಪಾಕ್ ರಕ್ಷಣಾ ಸಚಿವ ಖ್ವಾಜಾ

ಖೈಬರ್‌ಫಖ್ತುಂತ್ವಾ ಗಡಿ ಭಾಗದಲ್ಲಿ ಹಲವು ದಿನಗಳ ಕಾಲದ ಸಂಘರ್ಷ, ಬಳಿಕ ಕದನ ವಿರಾಮ, ನಂತರ ಉಲ್ಲಂಘನೆ ಸರಣಿಯೋಪಾದಿಯಲ್ಲಿ ನಡೆದ ಬಳಿಕ ಈಗ ಎರಡೂ ದೇಶಗಳು ಟರ್ಕಿ ಮಧ್ಯಸ್ಥಿಕೆಯಲ್ಲಿ ಶಾಂತಿ ಮಾತುಕತೆ ನಡೆಸುತ್ತಿವೆ. ಅದರ ಮಧ್ಯೆಯೇ ಪಾಕ್ ರಕ್ಷಣಾ ಸಚಿವರಿಂದ ಇಂಥ ಹೇಳಿಕೆ ಹೊರಬಿದ್ದಿದೆ. ಆದರೆ, ಪಾಕ್ ರಕ್ಷಣಾ ಸಚಿವರ ಈ ಹೇಳಿಕೆಗೆ ಅಫ್ಘಾನಿಸ್ತಾನ ಸರಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ದೋಹಾ ಒಪ್ಪಂದದ ಅನುಷ್ಠಾನ, ಗಡಿಯಾಚೆಯಿಂದ ನಡೆಯುತ್ತಿರುವ ದಾಳಿಗಳನ್ನು ನಿಲ್ಲಿಸುವುದು ಮತ್ತು ವಿಶ್ವಾಸದ ಮರು ಸ್ಥಾಪನೆ ಬಗ್ಗೆ 2ನೇ ಸುತ್ತಿನ ಮಾತುಕತೆಗಳು ಟರ್ಕಿಯಲ್ಲಿ ನಡೆದಿವೆ. ಅಲ್ಲದೇ, ಭವಿಷ್ಯದಲ್ಲಿ ಹಿಂಸಾಚಾರ ನಡೆಯದಂತೆ ತಡೆಯುವುದು, ಜಂಟಿ ಮೇಲ್ವಿಚಾರಣೆ ವ್ಯವಸ್ಥೆ ರಚನೆ, ಉಭಯ ದೇಶಗಳ ಸಾರ್ವಭೌಮತ್ವದ ಖಾತರಿ, 2 ದಶಕಗಳ ಪಾಕ್ ಭದ್ರತಾ ಸಮಸ್ಯೆಗಳಿಗೆ ಮೂಲವಾಗಿರುವ ಅಂಶಗಳನ್ನು ಪರಿಹರಿಸುವುದು, ವ್ಯಾಪಾರ ನಿರ್ಬಂಧ ತೆರವು ವಿಚಾರಗಳೂ ಚರ್ಚೆಗೆ ಇವೆ ಎಂದು ಮೂಲಗಳು ತಿಳಿಸಿವೆ.

ನಾವೆಲ್ಲರೂ ಒಂದೇ ಮಾರ್ಗದ ಪಥಿಕರು

47ನೇ ಆಸಿಯಾನ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಭಾಷಣ

ಕೌಲಾಲಂಪುರ: ಮಲೇಷ್ಯಾ ದೇಶದ ಕೌಲಾಲಂಪುರದಲ್ಲಿ ಆಯೋಜನೆಗೊಂಡಿರುವ '47ನೇ ಆಸಿಯಾನ್ ಶೃಂಗಸಭೆ' ಭಾನುವಾರ ಆರಂಭಗೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಸಭೆಯನ್ನು ಉದ್ದೇಶಿಸಿ ವರ್ಚುವಲ್ (ವಿಡಿಯೊ) ಭಾಷಣ ಮಾಡಿದ್ದಾರೆ.

ಭಾರತ ಹಾಗೂ 'ಆಸಿಯಾನ್' ಸದಸ್ಯ ರಾಷ್ಟ್ರಗಳನ್ನೆಲ್ಲಾ ಒಗ್ಗೂಡಿಸಿದರೆ ಇಡೀ ವಿಶ್ವದ ಕಾಲುಭಾಗದಷ್ಟು ಜನಸಂಖ್ಯೆ ಆಗುತ್ತದೆ ಎಂದು ಸಭೆಯ ಗಮನ ಸೆಳೆದ ಪ್ರಧಾನಿ ಮೋದಿ, ನಾವೆಲ್ಲರೂ ಒಂದೇ ಮಾರ್ಗದಲ್ಲಿ ಸಾಗುತ್ತಿರುವ ಪಥಿಕರು ಎಂದು ಹೇಳಿದರು.

ಭಾರತ ಹಾಗೂ ಆಸಿಯಾನ್ ದೇಶಗಳು ಭೌಗೋಳಿಕವಾಗಿ ಹತ್ತಿರ ಇವೆ. ಅಷ್ಟೇ ಅಲ್ಲದೇ, ಐತಿಹಾಸಿಕವಾಗಿ ಮತ್ತು ಮೌಲ್ಯಗಳಿಗೆ ಸಂಬಂಧಿಸಿದ ಒಂದಕ್ಕೊಂದು ಸೇರಿಕೊಂಡಂತಿವೆ ಎಂದು ವ್ಯಾಖ್ಯಾನಿಸಿದರು.

'47ನೇ ಆಸಿಯಾನ್ ಶೃಂಗಸಭೆ' ಆಯೋಜಿಸಿದ್ದಕ್ಕೆ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರನ್ನು ಮೋದಿ ಅಭಿನಂದಿಸಿದರು. ಭಾರತ ಮತ್ತು 'ಆಸಿಯಾನ್' ಒಕ್ಕೂಟದ ಸಹಭಾಗಿತ್ವದ ಪ್ರಾಮುಖ್ಯವನ್ನು ಒತ್ತಿ ಹೇಳಿದರು.

21ನೇ ಶತಮಾನ ನಮ್ಮದು

ಪ್ರಸಕ್ತ 21ನೇ ಶತಮಾನವು 'ನಮ್ಮ ಶತಮಾನ'ವಾಗಿದೆ. ಇದು ಭಾರತ ಮತ್ತು ಆಸಿಯಾನ್ ದೇಶಗಳ ಕಾಲಮಾನವಾಗಿದೆ. ಹೇಗೆಂದರೆ 'ಆಸಿಯಾನ್ ಸಮುದಾಯದ ಗುರಿ 2045' ಆಗಿದ್ದರೆ 'ವಿಕಸಿತ ಭಾರತ-2047' ಭಾರತದ ಕನಸಾಗಿದೆ. ಎರಡರ ಆಲೋಚನೆ-ಯೋಜನೆಗಳು ಮಾನವಕುಲದ ಒಳಿತಿಗೆ ಪೂರಕವಾಗಿವೆ' ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

ಪ್ರತಿ ಸಮಸ್ಯೆ ಎದುರಾದಾಗಲೂ, ಪ್ರತಿ ಬಿಕ್ಕಟ್ಟಿನಲ್ಲೂ ಆಸಿಯಾನ್ ಹಾಗೂ ಅದರ ಮಿತ್ರ ದೇಶಗಳೊಂದಿಗೆ ಭಾರತ ದೃಢವಾಗಿ ನಿಂತಿದೆ. ಸಾಗರ ಆರ್ಥಿಕತೆ, ಸಾಗರ ಭದ್ರತೆ ವಿಚಾರಗಳಲ್ಲಿ ಪರಸ್ಪರ ಸಹಕಾರ ಹೆಚ್ಚಿದೆ. ಶಿಕ್ಷಣ, ಪ್ರವಾಸೋದ್ಯಮ, ವಿಜ್ಞಾನ ತಂತ್ರಜ್ಞಾನ, ಆರೋಗ್ಯ, ಗ್ರೀನ್ ಎನರ್ಜಿ, ಸೈಬರ ಸೆಕ್ಯುರಿಟಿ ವಿಚಾರಗಳಲ್ಲಿ ಸಹಕಾರ ಹೆಚ್ಚಿಸುವ ಕೆಲಸವೂ ಆಗುತ್ತಿದೆ' ಎಂದು ಹೇಳಿದರು.

ಹೊಸ ಸದಸ್ಯ: 'ಆಸಿಯಾನ್' ಒಕ್ಕೂಟಕ್ಕೆ ಹೊಸ ಸದಸ್ಯನಾಗಿ 'ಈಸ್ಟ್ ಟೈಮೂರ್' ದೇಶದ ಸೇರ್ಪಡೆಯಾಗಿದೆ. ಈಸ್ಟ್ ತೈಮೂರ್ ದೇಶದ ಪ್ರತಿನಿಧಿಗಳನ್ನು ಅಭಿನಂದಿಸಿದ ಪ್ರಧಾನಿ ಮೋದಿ, ಒಕ್ಕೂಟಕ್ಕೆ ನಿಮಗೆ ಸ್ವಾಗತ ಎಂದರು.

ಇದೇ ವೇಳೆ, ಥಾಯ್ಲೆಂಡ್ ಮಾಜಿ ರಾಣಿ, ರಾಜಮಾತೆ ಸಿರಿಕಿತ್ ಅವರ ನಿಧನಕ್ಕೆ ಮೋದಿ ಸಂತಾಪ ಸೂಚಿಸಿದರು.

ಲಖನೌ-ಆಗ್ರಾ ಮಾರ್ಗ ಡಬಲ್‌ಡೆಕರ್ ಬಸ್ ಭಸ್ಮ

ಲಖನೌ: ಎರಡು ದಿನಗಳ ಹಿಂದಷ್ಟೇ ಆಂಧ್ರ ಪ್ರದೇಶದ ಕರ್ನೂಲ್ ಬಳಿ ಖಾಸಗಿ ಸ್ಲೀಪರ್ ಬಸ್ ಬೆಂಕಿಯಲ್ಲಿ ಭಸ್ಮವಾಗಿ 21 ಪ್ರಯಾಣಿಕರು ಸಜೀವ ದಹನವಾದ ದುರಂತದ ನೆನಪು ಇನ್ನೂ ಹಸಿರಾಗಿರುವಾಗಲೇ ಅತ್ತ ಉತ್ತರ ಪ್ರದೇಶದಲ್ಲಿಯೂ ಡಬಲ್ ಡೆಕರ್ ಬಸ್ಸೊಂದು ಹೊತ್ತಿ ಉರಿದು

ಭಸ್ಮವಾಗಿದೆ. ಸುದೈವವಶಾತ್ ಪ್ರಯಾಣಿಕರು, ಚಾಲಕ ವರ್ಗದವರೆಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಲಖನೌ-ಆಗ್ರಾ ಎಕ್ಸ್‌ಪ್ರೆಸ್ ವೇನಲ್ಲಿ ಭಾನುವಾರ ಮುಂಜಾನೆ ಡಬಲ್ ಡೆಕರ್ ಬಸ್ ಹೊತ್ತಿ ಉರಿದಿದೆ. ಲಖನೌ-ಆಗ್ರಾ ಎಕ್ಸ್‌ಪ್ರೆಸ್ ವೇಯ ಟೋಲ್ ಪ್ಲಾಜಾದಿಂದ ಸ್ವಲ್ಪ ಮೊದಲು, ಕಾಕೋರಿ ಪೊಲೀಸ್ ಠಾಣೆ ಸಮೀಪದಲ್ಲಿ ಭಾನುವಾರ ಮುಂಜಾನೆ 5ರ ವೇಳೆ ಬಸ್‌ನ ಚಕ್ರಕ್ಕೆ ಬೆಂಕಿ ಹೊತ್ತಿದೆ. ಚಕ್ರದಲ್ಲಿ ಬೆಂಕಿ ಉರಿಯುತ್ತಿರುವುದನ್ನು ಮಿರರ್‌ನಲ್ಲಿ ಗಮನಿಸಿದ ಚಾಲಕ ತಕ್ಷಣವೇ ಬಸ್ ಅನ್ನು ಒಂದೆಡೆ ನಿಲುಗಡೆ ಮಾಡಿ, ಎಲ್ಲಾ ಪ್ರಯಾಣಿಕರನ್ನು ಎಚ್ಚರಿಸಿದ್ದಾರೆ. ಎಲ್ಲರೂ ಬಸ್‌ನಿಂದ ಸುರಕ್ಷಿತವಾಗಿ ಹೊರಬಂದಿದ್ದಾರೆ.

ದೆಹಲಿಯಿಂದ ಗೊಂಡಾಗೆ ಪ್ರಯಾಣಿಸುತ್ತಿದ್ದ ಡಬಲ್ ಡೆಕರ್ ಬಸ್‌ನ ಒಂದು ಟಯರ್‌ಗೆ ಘರ್ಷಣೆ ಕಾರಣದಿಂದಲೋ, ಬೇರೆ ಕಾರಣದಿಂದಲೋ ದಿಢೀರ್ ಎಂಬಂತೆ ಬೆಂಕಿ ಹೊತ್ತಿಕೊಂಡಿದೆ. ಬಳಿಕ ಬೆಂಕಿಯ ಕೆನ್ನಾಲಿಗೆ ಇಡೀ ಬಸ್ಸನ್ನು ಆವರಿಸಿಕೊಂಡು ಭಸ್ಮ ಪೂರ್ಣ ಭಸ್ಮವಾಗಿದೆ.

ಖಗೋಳ ಶಾಸ್ತ್ರಜ್ಞ ಜಯಂತ್ ನಾರ್ಲಿಕರ್‌ಗೆ ವಿಜ್ಞಾನ ರತ್ನ

8 ವಿಜ್ಞಾನ ಶ್ರೀ ಪ್ರಶಸ್ತಿಗಳನ್ನೂ ಪ್ರಕಟಿಸಿದ ಕೇಂದ್ರ ಸರಕಾರ

ದೆಹಲಿ: ದೇಶದ ವಿಜ್ಞಾನ ಕ್ಷೇತ್ರದಲ್ಲಿನ ಅತ್ಯುನ್ನತ ಪ್ರಶಸ್ತಿಯಾದ 'ವಿಜ್ಞಾನ ರತ್ನ' ಪುರಸ್ಕಾರಕ್ಕೆ ಖ್ಯಾತ ಖಗೋಳ ತಜ್ಞ, 'ಪದ್ಮವಿಭೂಷಣ' ಪುರಸ್ಕೃತ ಡಾ.ಜಯಂತ್ ನಾರ್ಲಿಕರ್ ಅವರನ್ನು ಶನಿವಾರ ಆಯ್ಕೆ ಮಾಡಲಾಗಿದೆ. ವಿಜ್ಞಾನ ಸಂವಹನಕಾರರೂ ಆಗಿದ್ದ ನಾರ್ಲಿಕರ್, ಮೇ 20ರಂದು 86ನೇ ವಯಸ್ಸಿನಲ್ಲಿ ನಿಧನರಾಗಿದ್ದು, ಪ್ರತಿಷ್ಠಿತ ಪ್ರಶಸ್ತಿ ಮರಣೋತ್ತರವಾಗಿ ಸಲ್ಲುತ್ತಿದೆ.



ನಾರ್ಲಿಕರ್

ಡಾ.ನಾರ್ಲಿಕರ್ ಅವರು 'ಬಿಗ್ ಬ್ಯಾಂಗ್' ಸಿದ್ಧಾಂತಕ್ಕೆ ಪರ್ಯಾಯ ಸಿದ್ಧಾಂತಗಳನ್ನು ಪ್ರಸ್ತಾಪಿಸಿದ್ದು, ಅದರಿಂದಾಗಿಯೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದರು.

ಇದೇ ವೇಳೆ, ಕೇಂದ್ರ ಸರಕಾರ 2025ನೇ ಸಾಲಿನ 8 ವಿಜ್ಞಾನ ಶ್ರೀ ಪ್ರಶಸ್ತಿಗಳನ್ನೂ ಭಾನುವಾರ ಪ್ರಕಟಿಸಿದೆ. ಜ್ಞಾನೇಂದ್ರ ಪ್ರತಾಪ್ ಸಿಂಗ್(ಕೃಷಿ ವಿಜ್ಞಾನ), ಯೂಸುಫ್ ಮೊಹಮ್ಮದ್ ಶೇಖ್(ಪರಮಾಣು ಶಕ್ತಿ), ಕೆ.ತಂಗರಾಜ್(ಜೈವಿಕ ವಿಜ್ಞಾನ), ಪ್ರದೀಪ್ ಥಲಪ್ಪಿಲ್ (ರಸಾಯನಶಾಸ್ತ್ರ), ಅನಿರುದ್ಧ ಬಾಲಚಂದ್ರ ಪಂಡಿತ್ (ಇಂಜಿನಿಯರಿಂಗ್ ವಿಜ್ಞಾನ), ಎಸ್. ವೆಂಕಟಮೋಹನ್(ಪರಿಸರ ವಿಜ್ಞಾನ), ಎಂ.ಜೆ.ಮಹಾನ್(ಗಣಿತ-ಕಂಪ್ಯೂಟರ್ ವಿಜ್ಞಾನ) ಮತ್ತು ಎನ್.ಜಯನ್ (ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ) ವಿಜ್ಞಾನ ಶ್ರೀ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅಲ್ಲದೇ, ಜಮ್ಮು-ಕಾಶ್ಮೀರದಲ್ಲಿ 'ಲ್ಯಾವೆಂಡರ್ ಮಿಷನ್' ಮುನ್ನಡೆಸಿದ 'ಸಿಎಸ್‌ಐಆರ್ ಅರೋಮಾ ಮಿಷನ್' ತಂಡವನ್ನು 'ವಿಜ್ಞಾನ ತಂಡ ಪ್ರಶಸ್ತಿ'ಗೆ ಹೆಸರಿಸಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತ ರಾಷ್ಟ್ರೀಯ ಗೌರವವೆಂದು ಪರಿಗಣಿಸಲಾದ ರಾಷ್ಟ್ರೀಯ ವಿಜ್ಞಾನ ಪುರಸ್ಕಾರವನ್ನು 2023ರಲ್ಲಿ ಆರಂಭಿಸಲಾಯಿತು. 2024ರ ಆ.22ರಂದು ರಾಷ್ಟ್ರೀಯ ಬಾಹ್ಯಾಕಾಶ ದಿನದ ಮುನ್ನಾದಿನ ಮೊದಲ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಅವಳಿ ಶಿಶುಗಳ ಜೀವ ತೆಗೆದ ಪತಿ-ಪತ್ನಿ ಜಗಳ

ಬುಲ್ಡಾನಾ: 'ಗಂಡ-ಹೆಂಡಿರ ಜಗಳ ಉಂಡು ಮಲಗುವ ತನಕ' ಎಂಬುದು ಹಳೆಯ ಗಾದೆ ಮಾತು. ಆದರೆ, ಮಹಾರಾಷ್ಟ್ರದ ಬುಲ್ಡಾನಾದಲ್ಲಿ ಪ್ರಯಾಣದಲ್ಲಿದ್ದಾಗ ನಡೆದ ಗಂಡ-ಹೆಂಡಿರ ಜಗಳ ಇಬ್ಬರು ಮುದ್ದಾದ ಹೆಣ್ಣು ಮಕ್ಕಳ ಜೀವಕ್ಕೇ ಎರವಾಗಿದೆ.

ಮಹಾರಾಷ್ಟ್ರದ ವಾಶಿಮ್ ಜಿಲ್ಲೆಯ ನಿವಾಸಿ ರಾಹುಲ್ ಚವಾಣ್ ಪತ್ನಿ ಮತ್ತು 2 ವರ್ಷದ ಅವಳಿ ಪುತ್ರಿಯರ ಜತೆ ಪ್ರಯಾಣಿಸುತ್ತಿದ್ದಾಗ ದಂಪತಿ ನಡುವೆ ಜಗಳವಾಗಿದೆ. ಮುನಿದ ಪತ್ನಿ ದಿಢೀರ್ ಎಂದು ತವರು ಮನೆಗೆ ತೆರಳಿದ್ದಾಳೆ. ಪುತ್ರಿಯರೊಂದಿಗೆ ಪ್ರಯಾಣ ಮುಂದುವರಿಸಿದ ಚವಾಣ್, ಬುಲ್ಡಾನ ಜಿಲ್ಲೆಯ ಅಂಚಾರ್ವಾಡಿ ಎಂಬಲ್ಲಿ ಕಾಡಿನೊಳಕ್ಕೆ ಪುತ್ರಿಯರನ್ನು ಕರೆದೊಯ್ದು, ಅಲ್ಲಿ ಅವರ ಕತ್ತು ಸೀಳಿದ್ದಾನೆ. ರಕ್ತದ ಮಡುವಿನಲ್ಲಿ ಬಿದ್ದು ನರಳುತ್ತಾ ಸಾವಿಗೀಡಾದ ಮಕ್ಕಳ ದೇಹಕ್ಕೆ ಬೆಂಕಿ ಇಟ್ಟಿದ್ದಾನೆ. ಬಳಿಕ ತನ್ನ ಊರಿಗೆ ಹಿಂದಿರುಗಿದ ಚವಾಣ್, ವಾಶಿಮ್ ಪೊಲೀಸ್ ಠಾಣೆಗೆ ತೆರಳಿ ತಪ್ಪೊಪ್ಪಿಕೊಂಡಿದ್ದಾನೆ. ವಾಶಿಮ್ ಠಾಣೆಯ ಪೊಲೀಸ್ ತಂಡ ಅಂಚಾರ್ವಾಡಿ ಬಳಿಯ ಕಾಡಿಗೆ ತೆರಳಿ ಅವಳಿ ಹೆಣ್ಣು ಮಕ್ಕಳ ಶವಗಳನ್ನು ಶೋಧಿಸಿದೆ.

ಕೊಲೆ ಮಾಡಿದ ನಂತರ ಚವಾಣ್ ಬೆಂಕಿ ಹಚ್ಚಿ ಸಾಕ್ಷ್ಯ ನಾಶಕ್ಕೆ ಯತ್ನಿಸಿರಬಹುದು. ಶವಗಳು ಭಾಗಶಃ ಸುಟ್ಟುಹೋಗಿದ್ದವು. ಸಾವಿಗೆ ನಿಖರ ಕಾರಣ ತಿಳಿಯಲು ಹಾಗೂ ಮಕ್ಕಳಿಬ್ಬರನ್ನು ಹತ್ಯೆ ಮಾಡಿದ ಬಳಿಕ ಸುಡಲಾಗಿದೆಯೇ ಎಂದು ತಿಳಿಯಲು ಮರಣೋತ್ತರ ಮತ್ತು ವಿಧಿವಿಜ್ಞಾನ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾದಲ್ಲಿ ಮೋದಿ ಹತ್ಯೆ ಸಂಚು: ಕಾರಲ್ಲಿ ಕರೆದೊಯ್ದು ಪಾರು ಮಾಡಿದ ಪುಟಿನ್

ಢಾಕಾದಲ್ಲಿ ಸಿಐಎ ಏಜೆಂಟ್ ಟೆರೆನ್ಸ್ ನಿಗೂಢ ಸಾವಿನಿಂದ ನಿಧಾನವಾಗಿ ತೆರದುಕೊಂಡ ರಹಸ್ಯ | ಹತ್ತಿರವಾಗುತ್ತಿರುವ ಭಾರತ-ಚೀನಾವನ್ನು ದೂರ ಮಾಡುವ ಲೆಕ್ಕಾಚಾರವೂ ಸಂಚಿನ ಹಿಂದಿತ್ತೇ?

ದೆಹಲಿ: ಸೆಪ್ಟೆಂಬರ್‌ನಲ್ಲಿ ಚೀನಾದ ಟಿಯಾಂಜಿನ್‌ನಲ್ಲಿ ನಡೆದ 'ಶಾಂಘೈ ಸಹಕಾರ ಸಂಘ'(ಎಸ್‌ಸಿಒ)ದ ಶೃಂಗಸಭೆಯಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಹತ್ಯೆಗೆ ಸಂಚು ನಡೆದಿತ್ತು ಎಂಬ ಸ್ಫೋಟಕ ಮಾಹಿತಿ ಈಗ ತಡವಾಗಿ ಬೆಳಕಿಗೆ ಬಂದಿದೆ. ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ವಿರುದ್ಧವೇ ಈ ಗಂಭೀರ ಆರೋಪ ಕೇಳಿಬಂದಿದೆ.

ರಷ್ಯಾ ತೈಲ ಖರೀದಿಸದಂತೆ ಭಾರತದ ಮೇಲೆ ಅಮೆರಿಕ ಸರಕಾರ ನಿರಂತರ ಒತ್ತಡ ಹೇರುತ್ತಿದೆ. ಅಷ್ಟೇ ಅಲ್ಲದೇ, ಭಾರತದ ಕೃಷಿ ಉತ್ಪನ್ನಗಳು ಮತ್ತು ಕ್ಷೀರೋತ್ಪನ್ನಗಳ ಮಾರುಕಟ್ಟೆಯಲ್ಲಿ ಅಮೆರಿಕದ ಕೃಷಿ ಮತ್ತು ಕ್ಷೀರ ಉತ್ಪನ್ನಗಳಿಗೂ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸುತ್ತಿದೆ. ಅಮೆರಿಕದ ಈ ಬೇಡಿಕೆಗಳಿಗೆ ಭಾರತ ಈವರೆಗೂ ಒಪ್ಪಿಲ್ಲ. ಅದೇ ಕಾರಣವಾಗಿ ಅಮೆರಿಕ-ಭಾರತ ನಡುವಿನ ವ್ಯಾಪಾರ ಒಪ್ಪಂದ ಈವರೆಗೂ ಅಂತಿಮಗೊಂಡಿಲ್ಲ. ಈ ಮಧ್ಯೆ, ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳಿಗೆ ಶೇ.50ರಷ್ಟು ಪ್ರತಿಸುಂಕ ವಿಧಿಸಿದೆ.

ಇನ್ನೊಂದೆಡೆ, ಭಾರತ-ಪಾಕಿಸ್ತಾನದ ನಡುವಿನ ಯುದ್ಧವನ್ನು ನಾನೇ ನಿಲ್ಲಿಸಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಭಾರತ ಸರಕಾರ ಅನುಮೋದಿಸಿಯೇ ಇಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಭಾರತ- ಅಮೆರಿಕ ದ್ವಿಪಕ್ಷೀಯ ಸಂಬಂಧದಲ್ಲಿ ಕಂಡೂ ಕಾಣದಂತೆ ಬಿರುಕು ಮೂಡಿದೆ. ಇದರ ಮಧ್ಯೆಯೇ ಪ್ರಧಾನಿ ಮೋದಿ ಹತ್ಯೆಗೆ ಅಮೆರಿಕದ ಸಿಐಎ ಸಂಚು ನಡೆಸಿತ್ತು ಎಂಬಂತಹ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗಿರುವುದು ಭಾರೀ ಚರ್ಚೆಗೆ ಕಾರಣವಾಗಿದೆ.

'ಅಮೆರಿಕದ ಸುಂಕ ಬೆದರಿಕೆಗಳ ಬೆನ್ನಲ್ಲೇ ಭಾರತ- ಚೀನಾ ಸಂಬಂಧದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ. ಅಲ್ಲದೇ ರಷ್ಯಾ-ಭಾರತ-ಚೀನಾ ನಾಯಕರು ಒಗ್ಗೂಡಿರುವುದನ್ನು ಸಹಿಸದ ದೇಶವೊಂದು ಮೋದಿ ಹತ್ಯೆಗೆ ಸಂಚು ರೂಪಿಸಿದೆ' ಎಂದು ಈ ವರದಿಗಳನ್ನು ಆಧರಿಸಿ ವಿಶ್ಲೇಷಿಸಲಾಗುತ್ತಿದೆ.

ಢಾಕಾದಲ್ಲಿ ಅಮೆರಿಕ ಅಧಿಕಾರಿ ಸಾವು

ಢಾಕಾದಲ್ಲಿ ವಿಶೇಷ ಕೆಲಸದ ಮೇಲೆ ನಿಯೋಜನೆಗೊಂಡಿದ್ದ ಅಮೆರಿಕದ ವಿಶೇಷ ಪಡೆಗಳ ಅಧಿಕಾರಿ ಟೆರೆನ್ಸ್ ಅರ್‌ವೆಲ್ಲೆ ಜಾಕ್ಸನ್ ಆ.31ರಂದು ಶವವಾಗಿ ಪತ್ತೆಯಾದರು. ಮ್ಯಾನ್ಮಾರ್‌ನಲ್ಲಿ ಅರಾಕನ್ ಆರ್ಮಿಗೆ ಬಾಂಗ್ಲಾ ನೆರವು ನೀಡಲು ನಿಯೋಜಿಸುವ ನೆಪದಲ್ಲಿ ಟೆರೆನ್ಸ್‌ರನ್ನು ಅಮೆರಿಕ ಸಕ್ರಿಯವಾಗಿರಿಸಿತ್ತು. ಟೆರೆನ್ಸ್‌ರ ನಿಗೂಢ ಸಾವು 'ಸಿಐಎ' ಹೆಜ್ಜೆಗುರುತುಗಳನ್ನೂ

ಸಿಐಎ ಏಜೆಂಟ್ ಟೆರೆನ್ಸ್

ಹಾಗೂ ಚೀನಾದಲ್ಲಿ ಪ್ರಧಾನಿ ಮೋದಿ ಅವರ ಹತ್ಯೆಯ ಸಂಚಿನ ಯೋಜನೆಯನ್ನು ಬಿಚ್ಚಿಟ್ಟಿದೆ. ಆ ಬಳಿಕವಷ್ಟೇ 'ಪ್ರಧಾನಿ ಮೋದಿ ಚೀನಾ ಪ್ರವಾಸದಲ್ಲಿದ್ದಾಗಲೇ ಅವರ ಹತ್ಯೆಗೆ ಸಂಚು ನಡೆದಿತ್ತು' ಎಂಬ ವರದಿಗಳು ಪ್ರಕಟವಾಗಿವೆ ಎಂಬುದು ಗಮನಾರ್ಹ. 'ಸಿಐಎ' ವಿರುದ್ಧದ ಈ ಆರೋಪವನ್ನು ಮತ್ತೊಂದು 'ತಾಷ್ಕೆಂಟ್'(ಶಾಸ್ತ್ರೀಜಿ ನಿಗೂಢ ಸಾವು) ಘಟನೆಯಂತೆ ಕಾಣಿಸುವ ಪ್ರಯತ್ನ ಎಂದೇ ವಿಶ್ಲೇಷಿಸಲಾಗಿದೆ. ಚೀನಾದಲ್ಲಿ ಭಾರತದ ಪ್ರಧಾನಿಯ ಹತ್ಯೆಯಾದರೆ, ಎರಡೂ ದೇಶಗಳ ನಡುವೆ ಶಾಶ್ವತ ಶತ್ರುತ್ವ ಮೂಡುತ್ತದೆ. ಈಗ ಹತ್ತಿರವಾಗುತ್ತಿರುವ ಭಾರತ-ಚೀನಾ ದೂರವಾಗುತ್ತವೆ. ಅಲ್ಲದೇ, ಭಾರತದಲ್ಲಿರುವ ಈಗಿನ ಸದೃಢ ಸರಕಾರ ಉರುಳಿ ಅರಾಜಕತೆ ಸೃಷ್ಟಿಯಾದರೆ ತನ್ನ ಮಾತು ಕೇಳುವ ಸರಕಾರವನ್ನು ಸ್ಥಾಪಿಸಬಹುದು ಎಂಬ ದೂರಾಲೋಚನೆಯೂ ಈ ಹತ್ಯೆ ಯತ್ನದ ಹಿಂದಿನ ಲೆಕ್ಕಾಚಾರವಾಗಿದೆ ಎಂದೇ ಹೇಳಲಾಗುತ್ತಿದೆ.

ಸಿಐಎ ಸಂಚು ವಿಫಲಗೊಳಿಸಿದ ರಾ

ಪ್ರಧಾನಿ ನರೇಂದ್ರ ಮೋದಿ ಅವರ ಹತ್ಯೆ ಮಾಡಲು ಬಂದಿದ್ದ ಸಿಐಎ ಅಧಿಕಾರಿ ಬಾಂಗ್ಲಾದೇಶದ ಹೋಟೆಲ್‌ನಲ್ಲಿ ನಿಗೂಢವಾಗಿ ಸಾವಿಗೀಡಾಗುವ ಮೂಲಕ ಸಿಐಎ ಸಂಚು ವಿಫಲವಾಗಿದೆ. ಇದರಲ್ಲಿ ಭಾರತದ 'ರಿಸರ್ಚ್ ಅಂಡ್

ಅನಾಲಿಸಿಸ್ ವಿಂಗ್'(ಆರ್ ಎಡಬ್ಲ್ಯು-ರಾ) ಕೆಲಸ ಮಾಡಿದೆ ಎಂದೇ ವಿಶ್ಲೇಷಣೆ ಮಾಡಲಾಗಿದೆ.

ಇದಕ್ಕೆ ಪೂರಕ ಎಂಬಂತೆ ಚೀನಾದ ಟಿಯಾಂಜಿನ್‌ನಲ್ಲಿ ಎಸ್‌ಸಿಒ ಶೃಂಗದ ಸಂದರ್ಭ ನಡೆದ ಘಟನೆಗಳು ಹೊಂದಿಕೆಯಾಗುತ್ತವೆ. ಪ್ರಧಾನಿ ಮೋದಿ ಅವರನ್ನು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಶೃಂಗಸಭೆಯ ಸ್ಥಳಕ್ಕೆ ತಮ್ಮದೇ ಕಾರಿನಲ್ಲಿ ಕರೆದೊಯ್ದಿದ್ದೇ ಹತ್ಯೆ ಸಂಚು ವಿಫಲವಾಗಿಸಿತು ಎಂದು ಹೇಳಲಾಗುತ್ತಿದೆ.

ಎಂದೂ ಯಾರಿಗೂ ಹೆಚ್ಚು ಸಮಯ ಕಾಯುತ್ತಾ ನಿಲ್ಲದ ಪುಟಿನ್ ಅವರು ಮೋದಿಗಾಗಿ ಅಂದು 10 ನಿಮಿಷಗಳವರೆಗೂ ಕಾದಿದ್ದು, ಮೋದಿ ಕೈ ಹಿಡಿದು ತಮ್ಮ ಜತೆಗೇ ಕಾರಿನಲ್ಲಿ ಶೃಂಗಸಭೆ ಸ್ಥಳಕ್ಕೆ ಕರೆದೊಯ್ದರು. ಅಷ್ಟೇ ಅಲ್ಲ, ಇಬ್ಬರೂ ನಾಯಕರು ಹಲವು ನಿಮಿಷಗಳ ಕಾಲ ಕಾರಿನಿಂದ ಇಳಿಯದೇ ಮಾತನಾಡುತ್ತಾ ಇದ್ದರು. ಇದೆಲ್ಲವೂ ಮೋದಿ ಅವರನ್ನು ಹತ್ಯೆ ಮಾಡುವ ಸಂಚನ್ನು ವಿಫಲಗೊಳಿಸುವ ಕಾರ್ಯತಂತ್ರದ ಭಾಗವಾಗಿತ್ತು ಎಂದೇ ಜಾಲತಾಣಗಳಲ್ಲಿ ವಿಶ್ಲೇಷಣೆ ನಡೆದಿದೆ.

ಮೋದಿ ನಿಗೂಢ ಮಾತು

ಇದೆಲ್ಲದರ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಚೀನಾ ಪ್ರವಾಸದಿಂದ ಸೆ.2ರಂದು ವಾಪಸಾದ ನಂತರ ದೆಹಲಿಯಲ್ಲಿ ನಡೆದ ಸೆಮಿಕಾನ್ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ನೀಡಿದ 'ಮತ್ತೊಂದು ಹೇಳಿಕೆ' ಕೂಡಾ ಹತ್ಯೆ ಸಂಚಿನ ಸುದ್ದಿಗಳಿಗೆ ಮತ್ತಷ್ಟು ಬಲ ನೀಡುತ್ತೇವೆ.

ಸೆಮಿಕಾನ್ ಶೃಂಗದ ಭಾಷಣದಲ್ಲಿ ಪ್ರಧಾನಿ ಮೋದಿ, 'ನಾನು ಚೀನಾಕ್ಕೆ ಹೋಗಿದ್ದಕ್ಕೆ ನೀವು ಚಪ್ಪಾಳೆ ತಟ್ಟುತ್ತಿದ್ದೀರಾ? ಅಥವಾ 'ನಾನು ಕ್ಷೇಮವಾಗಿ ಹಿಂತಿರುಗಿ ಬಂದಿದ್ದಕ್ಕೆ ಚಪ್ಪಾಳೆ ತಟ್ಟುತ್ತಿದ್ದೀರಾ?' ಎಂದು ಗೂಢಾರ್ಥದಲ್ಲಿ ಸಭಿಕರನ್ನು ಪ್ರಶ್ನೆ ಮಾಡಿದ್ದರು. ಮೋದಿ ಅವರ ಈ ಒಗಟಿನಂತಹ ಮಾತನ್ನು ಅನೇಕ ಮಾಧ್ಯಮಗಳವರು ಮತ್ತು ಡೊಮೇನ್ ತಜ್ಞರು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ ವಿಫಲರಾಗಿದ್ದರು.

ಮೋದಿ ಅವರ ಈ ಒಗಟಿನಂಥ ಹೇಳಿಕೆ ಹಿಂದೆ ಗಂಭೀರ ಸಂದೇಶವಿತ್ತು. ಇದು ಪ್ರಧಾನಿ ಎದುರಿಸುತ್ತಿರುವ ಜೀವ ಬೆದರಿಕೆಗಳ ಬಗ್ಗೆ ಸಂದೇಶಗಳನ್ನು ಒಳಗೊಂಡಿತ್ತು ಎಂದೇ ಜಾಲತಾಣದಲ್ಲಿ ಚರ್ಚೆಯಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ನಾಯಕತ್ವ ಗುಣ ಬೆಳೆಯಲು ಸಹಕಾರಿ

ಬೈಲಹೊಂಗಲ: ರಾಷ್ಟ್ರೀಯಸೇವಾಯೋಜನೆಶಿಬಿರಗಳು ವಿದ್ಯಾರ್ಥಿಗಳಲ್ಲಿ ದೇಶ ಪ್ರೇಮ, ಸಾಮಾಜಿಕ ಕಳಕಳಿ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುತ್ತವೆ. ದೇಶ ಸೇವೆಯೇಈಶಸೇವೆಎಂಬಭಾವಮಕ್ಕಳಲ್ಲಿಮೂಡಲು ಈಶಿಬಿರಗಳುಪ್ರಮುಖಕಾರಣಎಂದುಶ್ರೀಜಡಿಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಜಿ ಹೇಳಿದರು.ತಾಲೂಕಿನ ಮಲ್ಲಮ್ಮನಬೆಳವಡಿಯಈಶಪ್ರಭುಶಿಕ್ಷಣಸಂಸ್ಥೆಯ ವಿಆರ್‌ಎಮ್‌ಎಸ್ ಪಿಯು ಕಾಲೇಜು ವತಿಯಿಂದ ದೊಡವಾಡ ಗ್ರಾಮದಲ್ಲಿ 4 ದಿನಗಳವರೆಗೆ ಆಯೋಜಿಸಲಾಗಿರುವ ಎನ್ನೆಸ್ಸೆಸ್ ವಾರ್ಷಿಕ ತರಬೇತಿ ಶಿಬಿರವನ್ನುಹಿರೇಮಠದಸಭಾಭವನದಲ್ಲಿಉದ್ಘಾಟಿಸಿ ಅವರು ಮಾತನಾಡಿದರು.ಗ್ರಾಪಂ ಅಧ್ಯಕ್ಷ ಚಂದ್ರಶೇಖರಯ್ಯ ಕಾರಿಮನಿ ಮಾತನಾಡಿ ಕಾಲೇಜು ವಿದ್ಯಾರ್ಥಿಗಳುಎನ್ನೆಸ್ಸೆಸ್ಶಿಬಿರಗಳಿಂದಸಮಾಜಸೇವೆ ಮೂಲಕರಾಷ್ಟ್ರನಿರ್ಮಾಣಕಾರ್ಯದಲ್ಲಿಪಾಲ್ಗೊಳ್ಳಲು ಅವಕಾಶಮತ್ತುಅನುಭವನೀಡುತ್ತವೆಎಂದುಹೇಳಿದರು. ಮಾಜಿಯೋಧವಿರುಪಾಕ್ಷಿಪೂಜೇರಮಾತನಾಡಿದರು. ಶಿಬಿರಾಧಿಕಾರಿ ಎಮ್.ಪಿ.ಉಪ್ಪಿನ ಪ್ರಸ್ತಾವಿಕ ಮಾತನಾಡಿದರು. ಗ್ರಾಮದ ಗಣ್ಯರಾದ ಚನ್ನಪ್ಪ ಧಾರವಾಡ, ಅಡಿವೆಪ್ಪ ಅಸುಂಡಿ, ಮುದಕಪ್ಪ ತುಪ್ಪದ, ಅಜ್ಜಪ್ಪ ಪಟಾತ, ಬಾಳೇಶ ಅಲಸಂಧಿ, ಮಂಜುನಾಥ ಅಕ್ಕಿ,ಯಾಸೀನಕಿತ್ತೂರ,ಉಪನ್ಯಾಸಕರಾದಎಮ್.ಎ. ಸಾವಂತ್ರಿ ಕಾರ್ಯಕ್ರಮ ನಿರ್ವಹಿಸಿದರು. ರಮೇಶ ಸವಣೂರ ಸ್ವಾಗತಿಸಿದರು. ಸಿ.ಎಚ್.ಮೂಶನ್ನವರ ವಂದಿಸಿದರು.

ನಿಗಮ ನೋಂದಣಿ: ಹಡಪದ ಸಮಾಜ ಸಂತಸ

ಬೈಲಹೊಂಗಲ: ರಾಜ್ಯಸರಕಾರವುಹಡಪದಸಮಾಜದ ಅಭಿವೃದ್ಧಿ ನಿಗಮವನ್ನು ಸಂಪೂರ್ಣವಾಗಿ ಜಾರಿಗೆ ತರುವ ಉದ್ದೇಶದಿಂದ ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 7(2) ಅಡಿಯಲ್ಲಿ ನಿಗಮವನ್ನು 2025ರ ಅ.17ರಂದು ಅಧಿಕೃತವಾಗಿ ನೋಂದಾಯಿಸಿದ ಹಿನ್ನೆಲೆಯಲ್ಲಿ ಹಡಪದ ಸಮಾಜದವರು ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಮಹತ್ವದನಿರ್ಧಾರವುಸುಕ್ಷೇತ್ರತಂಗಡಗಿಯಜಗದ್ಗುರು ಶ್ರೀ ಅನ್ನದಾನಿ ಭಾರತಿ ಅಪ್ಪಣ್ಣ ಮಹಾಸ್ವಾಮಿಗಳ ಆಶೀರ್ವಾದ ಹಾಗೂ ರಾಜ್ಯದ ಹಡಪದ ಸಮಾಜದ ಹಲವು ವರ್ಷಗಳ ಹೋರಾಟದ ಫಲವೆಂದು ಅಖಿಲ ಕರ್ನಾಟಕಹಡಪದಅಪ್ಪಣ್ಣಸಮಾಜಸೇವಾಸಂಘದ ರಾಜ್ಯ ಉಪಾಧ್ಯಕ್ಷ ಸಂತೋಷ ಹಡಪದ ತಿಳಿಸಿದ್ದಾರೆ. ಈನಿಗಮವನ್ನುಪೂರ್ಣಪ್ರಮಾಣದಲ್ಲಿಜಾರಿಗೊಳಿಸಲು ಸಹಕಾರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲಿಸಿದಎಲ್ಲರಿಗೂಸಂಘದಪರವಾಗಿಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ.

ಸಾಧಕರಿಗೆ ಸನ್ಮಾನ: ಅರ್ಜಿ ಆಹ್ವಾನ

ವಿಜಯಪುರ: ಜಿಲ್ಲೆಯಲ್ಲಿವಿವಿಧಕ್ಷೇತ್ರಗಳಲ್ಲಿಅನನ್ಯ ಸೇವೆ ಸಲ್ಲಿಸಿರುವ ಸಾಧಕರಿಗೆ ನವೆಂಬರ್1ರಂದು ಸನ್ಮಾನಮಾಡಲು ಉದ್ದೇಶಿಸಲಾಗಿದೆ. ಕಲೆ, ಸಾಹಿತ್ಯ, ರಂಗಭೂಮಿ, ಸುಗಮಸಂಗೀತ, ಜನಪದ, ಸಂಗೀತ, ಶಿಲ್ಪಕಲೆ, ನೃತ್ಯ, ಚಿತ್ರಕಲೆ, ಸಮಾಜ ಸೇವೆ, ಕೃಷಿ, ವೈದ್ಯಕೀಯ, ಪತ್ರಿಕೋದ್ಯಮ, ಸಂಕೀರ್ಣ,ಇತರೆ ಕ್ಷೇತ್ರಗಳಲ್ಲಿ ತಮ್ಮ ಸಾಧನೆಯ ವಿವರಗಳನ್ನು ಒಳಗೊಂಡಂತೆ ತಮ್ಮ ಸ್ವ-ಪರಿಚಯ ಮತ್ತು ದಾಖಲೆಗಳೊಂದಿಗೆ 2025ರ ಅ.27ರೊಳಗಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಚೇರಿಗೆ ಸಲ್ಲಿಸಬಹುದಾಗಿದೆ.

ಅಗಲಿದ ಜೀವ

ಮಲ್ಲಪ್ಪ ದೊಡಭಂಗಿ

ಸಂಕೇಶ್ವರ: ಸಮೀಪದಹಂದಿಗೂಡಗ್ರಾಮದಹಿರಿಯರು ಹಾಗೂಸಂಕೇಶ್ವರಪಟ್ಟಣದವಿವೇಕಾನಂದಆಸ್ಪತ್ರೆಯ ವೈದ್ಯರಾದ ಡಾ. ರಮೇಶ ದೊಡಭಂಗಿ ಅವರ ತಂದೆಯಾಗಿದ್ದ ಮಲ್ಲಪ್ಪ ದೊಡಭಂಗಿ ಅವರು ಅನಾರೋಗ್ಯ ದಿಂದ ಗುರುವಾರಸಂಜೆವಿಧಿವಶವಾಗಿದ್ದಾರೆ. ಅನಾರೋಗ್ಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ ಮಲ್ಲಪ್ಪ ದೊಡಭಂಗಿ ಅವರು ಚಿಕಿತ್ಸೆ ಫಲಿಸದೆ ಗುರವಾರ ಸಂಜೆ ನಿಧನ ಹೊಂದಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ವಗ್ರಾಮ ಹಂದಿಗೂಡ ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ ನೆರವೇರಿತು. ಮೃತರು ಸಂಕೇಶ್ವರ ಹಿರಣ್ಯಕೇಶಿ ಸಕ್ಕರೆ ಕಾರಖಾನೆಯ ಸಿಬ್ಬಂದಿ ಯಾಗಿ ಸೇವೆ ಸಲ್ಲಿಸಿದ್ದರು. ಮೃತರುತಮ್ಮಹಿಂದೆಓರ್ವಪುತ್ರ,ನಾಲ್ವರುಪುತ್ರಿಯರು, ಸೊಸೆ, ಮೊಮ್ಮಕ್ಕಳುಸೇರಿದಂತೆಅಪಾರಬಂಧುಬಳಗ ಹೊಂದಿದ್ದರು.

{ಡಾ.ಎಚ್.ಸಿ.ಮಹದೇವಪ್ಪ} ಸಚಿವರು

ಚುನಾವಣಾ ಆಯೋಗ ಒಂದು ಸ್ವಾಯತ್ತ ಸಂಸ್ಥೆ. ಇದು ಸಂವಿಧಾನ ದತ್ತವಾದ ಮತದಾನ ಹಕ್ಕನ್ನು ರಕ್ಷಿಸುವ ಮುಖೇನ ಪಾರದರ್ಶಕ ಚುನಾವಣೆ ನಡೆಸಬೇಕು. ಯಾವುದೇ ಒಂದು ಕ್ಷೇತ್ರದಲ್ಲಿ ಮತದಾರರ ಸಂಖ್ಯೆ ಗಣನೀಯವಾಗಿ ಕುಸಿದರೆ ಅದನ್ನು ಚುನಾವಣಾ ಆಯೋಗ ಸೂಕ್ಷ್ಮವಾಗಿ ಗಮನಿಸಬೇಕು.

ಕೃಷ್ಣ ಸಕ್ಕರೆ ಕಾರ್ಖಾನೆ ಚುನಾವಣೆ | ಒಂದು ಸ್ಥಾನ ಅವಿರೋಧ ಆಯ್ಕೆ | ಪೆನಾಲ್‌ನ ಎಲ್ಲ 12 ಸ್ಥಾನಗಳ ವಿಜಯ | ಮತ್ತೆ ಆಡಳಿತದ ಚುಕ್ಕಾಣಿ

ಶಾಸಕ ಸವದಿ ಪೆನಾಲ್‌ಗೆ ಭರ್ಜರಿ ಗೆಲುವು

ಅಥಣಿ: ಬೆಳಗಾವಿ ಬಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದ ಶಾಸಕ ಲಕ್ಷ್ಮಣ ಸವದಿ ಅವರು ಇಲ್ಲಿನ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ಗೆ ನಡೆದ ಇಂದಿನ ಚುನಾವಣೆಯಲ್ಲಿ ರೈತ ಸಹಕಾರಿ ಫೇನಲ್ ನ ಎಲ್ಲ 12 ಸ್ಥಾನಗಳನ್ನು ಗೆಲ್ಲುವ ಮೂಲಕ ಮತ್ತೆ ಆಡಳಿತದ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಹೈಕೋರ್ಟ್ ಆದೇಶದ ಅನ್ವಯ ಚುನಾವಣಾ ಅಧಿಕಾರಿಗಳು ಫಲಿತಾಂಶವನ್ನು ಘೋಷಿಸುವದೊಂದೇ ಬಾಕಿ ಇದೆ.

ಅಥಣಿ ಮತಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಹಾಗೂ ಕಾಗವಾಡ ಶಾಸಕ ರಾಜು ಕಾಗೆ ಅವರ ನೇತೃತ್ವದ ರೈತರು ಸಹಕಾರಿ ಫೇನಲ್ ನಲ್ಲಿ ಒಟ್ಟು 13 ಸ್ಥಾನಗಳ ಪೈಕಿ ಬ ' ವರ್ಗದ ಒಂದು ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿತ್ತು. ರವಿವಾರ 12 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅವರ ಪೆನನ್ನ ದ ಎಲ್ಲಾ ಅಭ್ಯರ್ಥಿಗಳು ಗೆಲುವು ಸಾಧಿಸುವ ಮೂಲಕ ನಾಲ್ಕನೇ ಅವದಿಗೆ ನಿಕಟ ಪೂರ್ವ ಅಧ್ಯಕ್ಷ ಪರಪ್ಪ ಸವದಿ ನೇತೃತ್ವದ ಆಡಳಿತ ಮಂಡಳಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲು ಸಜ್ಜಾಗಿದ್ದಾರೆ. ಇವರ ಪ್ರತಿಸ್ಪರ್ಧಿಯಾಗಿದ್ದ ಗೋಕಾಕ್ ಶಾಸಕ ರಮೇಶ್ ಜಾರಕಿಹೊಳಿ ಬೆಂಬಲಿತ ಮಾಜಿ ಶಾಸಕರಾದ ಮಹೇಶ ಕುಮಟಳ್ಳಿ, ಶ್ರೀಮಂತ ಪಾಟೀಲ, ಶಹಜಹಾನ ಡೊಂಗರಗಾವ, ಕಾಂಗ್ರೆಸ್ ಮುಖಂಡ ಗಜಾನನ ಮಂಗಸುಳಿ ನೇತೃತ್ವದ ಸ್ವಾಭಿಮಾನಿ ರೈತ ಪೆನಲ್ ನ ಅಭ್ಯರ್ಥಿಗಳು ಈ ಚುನಾವಣೆಯಲ್ಲಿ ಪರಾಭವಕೊಳ್ಳುವ ಮೂಲಕ ತೀವ್ರ ಮುಖಭಂಗ ಅನುಭವಿಸಿದ್ದಾರೆ.

ಶಾಸಕ ಲಕ್ಷ್ಮಣ ಸವದಿ ಅವರ ಬೆಂಬಲಿಗರುಪರಸ್ಪರ ಗುಲಾಲು ಎರಚಿಕೊಂಡು ಪಟಾಕಿ ಸಿಡಿಸಿ ಸಂಭ್ರಮದಿಂದ ವಿಜಯೋತ್ಸವ ಆಚರಿಸಿದರು.

ಸಂಭ್ರಮದ ವಿಜಯೋತ್ಸವ

ಅಥಣಿ ಶಾಸಕ ಲಕ್ಷ್ಮಣ ಸವದಿ ಹಾಗೂ ಕಾಗವಾಡ ಶಾಸಕ ರಾಜು ಕಾಗೆ ಅವರ ಬೆಂಬಲಿಗರು ಹಾಗೂ ಚುನಾವಣೆಯಲ್ಲಿ ಜಯ ಸಾಧಿಸಿದ ಅಭ್ಯರ್ಥಿಗಳು ಪರಸ್ಪರ ಗುಲಾಲು ಎರಚಿಕೊಂಡು ಪಟಾಕಿ ಸಿಡಿಸಿ ಸಂಭ್ರಮದಿಂದ ವಿಜಯೋತ್ಸವ ಆಚರಿಸಿದರು.

ಕ್ರೀಡೆ ಜತೆ ಓದಿನ ಕಡೆ ಗಮನ ಕೊಡಿ : ಸಚಿವ ಜಾರಕಿಹೊಳಿ

ಮೂಡಲಗಿ: ಕ್ರೀಡಾಪಟುಗಳು ರಾಜ್ಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದಾಗ ಮಾತ್ರ ಜನಮಾನಸದಲ್ಲಿ ಉಳಿಯುತ್ತಾರೆ. ಕ್ರೀಡಾಪಟುಗಳು ಕ್ರೀಡೆಯ ಜೊತೆಗೆ ಶೈಕ್ಷಣಿಕವಾಗಿ ಬೆಳೆಯ ಬೇಕು . ಅಂದಾಗ ಮಾತ್ರ ಕ್ರೀಡೆಗೆ ಮೆರಗು ಬರುತ್ತದೆ ಜನ್ಮ ನೀಡಿದ ತಂದೆ ತಾಯಿ ಹಾಗೂ ಕುಟುಂಬವನ್ನು ಚೆನ್ನಾಗಿ ನೋಡಿ ಕೊಳ್ಳಬೇಕು . ಕ್ರೀಡೆಯಲ್ಲಿ ಬೆಳೆಯುವು ದರಿಂದ ಉತ್ತಮ ನಾಯಕರಾ ಗುತ್ತಾರೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು .ಅವರು ತಾಲೂಕಿನ ನಾಗನೂರು ಪಟ್ಟಣದಲ್ಲಿ ಬೆಳಗಾವಿ ಜಿಲ್ಲಾ ಪಂಚಾಯತ್ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಾರ್ಯಾಲಯ ಚಿಕ್ಕೋಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮೂಡಲಗಿ ಶ್ರೀ ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆ ನಾಗನೂರು ಇವುಗಳ ಸಂಯುಕ್ತ ಆಶ್ರಯದಲ್ಲಿ ಪ್ರಾಥಮಿಕ 14 ವರ್ಷದೊಳಗಿನ ಬಾಲಕ ಬಾಲಕಿಯರ ರಾಜ್ಯ ಮಟ್ಟದ ಇಲಾಖೆಯ ಖೋ ಖೋ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು , ಗ್ರಾಮೀಣ ಭಾಗದ ಯುವಕ ಯುವತಿಯರು ಕ್ರೀಡೆ, ಸಾಂಸ್ಕೃತಿಕ, ಹಾಗೂ ಶೈಕ್ಷಣಿಕವಾಗಿ ಬೆಳೆಯುವುದರ ಜೊತೆಗೆ ದೇಶಿಯ ಕ್ರೀಡೆಗಳನ್ನು ಉಳಿಸಿ ಮುಂದಿನ ಯುವ ಪೀಳಿಗೆಗೆ ನಶಿಸದಂತೆ ಬೆಳೆಸಬೇಕೆಂದರು. ಇದೇ ಸಂದರ್ಭದಲ್ಲಿ ರಾಜ್ಯಮಟ್ಟದ ಖೋ ಖೋ ಕ್ರೀಡೆಗೆ ಚಾಲನೆ ನೀಡಿ ಕ್ರೀಡೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಪ್ರಭಾ ಶುಗರ್ ನಿರ್ದೇಶಕ ಕೆಂಚನಗೌಡ ಪಾಟೀಲ ಹಾಗೂ ಖೋ ಖೋ ಅಸೋಸಿಯನ್ನ ಜಿಲ್ಲಾಧ್ಯಕ್ಷ ಗಜಾನನ ಯರಗಣವಿ ಸತ್ಕರಿಸಿದರು.

ಬಾಗಲಕೋಟಿ ಡಿಡಿಪಿಐ ಎ.ಸಿ ಮನ್ನಿಕೇರಿ,ನಾಗನೂರಿನ ಶ್ರೀ ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸನಗೌಡ ಪಾಟೀಲ, ಪ್ರಭಾ ಶುಗರ್‌ನಿರ್ದೇಶಕ ಕೆಂಚನಗೌಡ ಪಾಟೀಲ, ಹಳ್ಳಾಳದ ಶಿವಲಿಂಗೇಶ್ವರ ಸ್ವಾಮೀಜಿ, ಭಗೀರಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪರಸಪ್ಪ ಬಬಲಿ, ಮಲ್ಲಪ್ಪ ಹೊಸಮನಿ, ಸುರೇಶ ಸಕ್ಕರೆಪ್ಪಗೋಳ, ಬೆಳಗಾವಿ ಜಿಲ್ಲಾ ಖೋ ಖೋ ಅಸೋಸಿಯೇಷನ ಜಿಲ್ಲಾಧ್ಯಕ್ಷ ಗಜಾನನ ಯರಗಣವಿ, ಚಿಕ್ಕೋಡಿ ಜಿಲ್ಲಾ ಡಿಪಿಓ ಜುನೇದಿ ಪಟೇಲ , ಟಿಪಿಓ ಎಸ್ ಬಿ ಹಳಿಗೌಡರ, ಗೋಕಾಕ ಟಿಪಿಓ ಎಲ್ ಕೆ ತೋರಣಗಟ್ಟಿ, ಬೆಳಗಾವಿ ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರಾಜು ಹಿರೇಮಠ,ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಎಸ್.ಎಲ್ ಹೊಸಮನಿ, ಸಂಸ್ಥೆಯ ಕಾರ್ಯದರ್ಶಿ ಎಸ್ ಬಿ ಹೊಸಮನಿ, ನಿರ್ದೇಶಕರಾದ ಬಿ ಬಿ ಪಾಟೀಲ, ಎಲ್ ಬಿ ಸಕ್ರೆಪ್ಪಗೋಳ , ಬಿ ಎಂ ಬಂಡಿ, ಸಿ ಎ ಸಕ್ರೆಪ್ಪ ಗೋಳ, ಮುಖ್ಯ ಶಿಕ್ಷಕ ಎಸ್ ಬಿ ಕೇದಾರಿ, ಈರಣ್ಣ ಹಳಿಗೌಡರ, ಸಿ ಆರ್‌ಪೂಜಾರಿ ಇದ್ದರು.

ರಾಜ್ಯಮಟ್ಟದ ಕೋ ಕೋ ಪಂದ್ಯಾವಳಿಯಲ್ಲಿ ಸಚಿವ ಸತೀಶ್ ಜಾರಕಿಹೊಳಿಗೆ ಬಾಗಿ ಸತ್ಕರಿಸಿದ ಗಣ್ಯಮಾನ್ಯರು.

ಯಮಕನಮರಡಿಯಲ್ಲಿ ಮಳೆಯಬ್ಬರ

ಯಮಕನಮರಡಿ: ಯಮಕನಮರಡಿ ಗ್ರಾಮೀಣ ಪ್ರದೇಶಗಳಲ್ಲಿ ಆಗಾಗ ಮಳೆಯಾಗುತ್ತಿದ್ದು ಮುಂಗಾರಿ ಬೆಳೆಗಳಾದ ಸೆಂಘಾ,ಸೋಯಾಬಿನ್, ಜೋಳ, ಸೇರಿದಂತೆ ವಿವಿಧ ಫಸಲು ಬಂದ ನಂತರ ನೆಗಿಲಯೋಗಿಗಳು ಬಿತ್ತಿದ್ದ ಹಿಂಗಾರಿ ಬೆಳೆಗಳಾದ ಜೋಳ,ಕಡಲೆ, ಬಿತ್ತನೆಯನ್ನು ಮಾಡಿದ್ದು ಹಿಂಗಾರಿ ಬೆಳೆಗಳಿಗೆ ಅಗತ್ಯವಿರುವ ಮಳೆಯು ಕೃಷಿಕರ ಮೊಗದಲ್ಲಿ ರ್ಷತರುವಂತೆ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತಿದೆ.

ರ್ತಿಯಾದ ಕೆರೆ- ಬಾವಿಗಳು:- ವಲಯದಲ್ಲಿನ ಬಹುತೇಕ ಗ್ರಾಮಗಳಲ್ಲಿರುವ ಕೆರೆ-ಕಟ್ಟೆಗಳು, ಬಾವಿಗಳು, ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮತ್ತಷ್ಟು ರ್ತಿಯಾಗುತ್ತಿವೆ,

ಹರಿಯುತ್ತಿರುವ ನದಿಗಳು:-ಹುಕ್ಕೇರಿ ತಾಲೂಕಿನ ಘಟಪ್ರಭಾ,ಹಿರಣ್ಯಕೇಶಿ,ಮಾರ್ಕಂಡೇಯ, ತಾಮ್ರರ್ಣಿ,ನದಿಗಳು ಕಪ್ಪು ನೀರುನಿಮದ ಸ್ವಚ್ಚವಾಗಿ ಹರಿಯುತ್ತಿವೆ ಇದರಿಂದಾಗಿ ಹಿಡಕಲ್ ಜಲಾಶಯ ಮತ್ತು ಮರ್ಕಂಡೇಯ ಜಲಾಶಯಗಳು ತಮ್ಮ ನೀರಿನ ಮಟ್ಟದಲ್ಲಿ ಇಳಿಕೆ ಕಂಡಿಲ್ಲಾ,

ಮಳೆಯ ಚಿಹ್ನೆ ಮತ್ತಷ್ಟು ಹೆಚ್ಚಾಗುತ್ತಿದ್ದರಿಮದ ಬಹುತೇಕ ಕೃಷಿಕರು ಬಿತ್ತನೆ ಮಾಡುವ ತವಕದಲ್ಲಿದ್ದು ನವ್ಹೆಂಬರ ತಿಂಗಳ ಪ್ರಾರಂಭದ ಮೊದಲೇ ಭುತಾಯಿಯ ಒಡಲು ಹಚ್ಚು-ಹಸುರಾಗಿ ಕಾಣುತ್ತಿದೆ,

ಮೇವಿನ ಬರಕ್ಕೆ ಅಂತ್ಯ:-ಈ ರ್ಷದಲ್ಲಿ ಬಿಳಿಜೋಳದ ಬಿತ್ತನೆ ರ್ಪಪ್ರಮಾಣದಲ್ಲಿ ಆಗಿದ್ದರಿಂದ ದನ-ಕರುಗಳ ಮೇವಿನ ಬರ ಈ ಬಾರಿ ನಿಗಲಿದೆ ಎನ್ನುವುದು ಕೃಷಿಕರು ಅಭಿಪ್ರಾಯ, ಕೆಲ ಬೆಳೆಗಳಿಗೆ ಮಾರಕವಾದ ಮಳೆ:-ದೀಪಾವಳಿಯ ನಂತರ ಸಕ್ಕರೆ ಕಾರ್ಖಾನೆಗಳು ಪ್ರತಿವರ್ಷದಂತೆ ಕಬ್ಬು ಕಟಾವಿಗೆ ಎಲ್ಲ ಸಿದ್ದತೆಗಳನ್ನು ಮಡಿಕೊಂಡಿದ್ದು ಕೆಲವೆಡೆ ಕಬ್ಬು ಕಟಾವು ಪ್ರಾರಂಭವಾಗುತ್ತಿದಅತೆಯೇ ಮಳೆರಾಯ ಕಬ್ಬು ಕಟಾವಿಗೆ ಅಡ್ಡಿಯಾಗುವ ಎಲ್ಲ ಸಾಧ್ಯತೆಗಳನ್ನು ಒಡ್ಡಿದ್ದಾನೆ ಕಾರಣ ಹೊಲಗಳಲ್ಲಿ ಕಬ್ಬಿನ ವಾಹನಗಳು ಮಳೆಯಾಗಿ ಅತಿ ವದ್ದೆಡಯಾದ ನೆಲೆದಲ್ಲಿ ಭಾರವಾದ ಕಬ್ಬಿನ ವಾಹನಗಳು ಸಿಕ್ಕಿಹಾಕಿಕೊಳ್ಳುವ ಭಿತಿಯಿಂದ ರೈತರು ಕಬ್ಬು ಕಟಾವಿಗೆ ಮುಂದಾಗುತ್ತಿಲ್ಲಾ ಮಳೆ ಕಡಿಮೆಯಾಗುತ್ತಿದಂತೆ ಕಬ್ಬಿನ ಕಟಾವಿಗೆ ಮತ್ತಷ್ಟು ತೀವ್ರತೆ ಕಾಣಲಿದೆ,

ಮಳೆಯಬ್ಬರಕ್ಕೆ ತಪ್ಪಲು ಪಲ್ಲೆ ಕಾಯಿಪಲ್ಲೆ ಬೆಲೆ ಹೆಚ್ಚಳ:-ಮಳೆಯಗುತ್ತಿರುವ ಹಿನ್ನೆಲೆಯಲ್ಲಿ ತೊಪ್ಪಲು ಪಲ್ಲೆ ಹಾಗೂ ತರಕಾರಿ ಬೆಲೆಗಳು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ರೈತರು ತಮ್ಮ ಹೊಲಗಳಲ್ಲಿರುವ ತರಕಾರಿಯನ್ನು ಜಾಗ್ರತೆಯಿಂದ ಬೆದುಕಿಸುವತ್ತ ಹವನಿಸುತ್ತಿದ್ದಾರೆ,

ಯಮಕನಮರಡಿ-2 ಯಮಕಮರಡಿ ವಲಯದಲ್ಲಿನ ಉಳ್ಳಾಗಡ್ಡಿ-ಖಾನಾಪೂರ ಗ್ರಾಮದ ಬಿಳಿ ಜೋಳ ನಾಟಿಯಾದ ದೃಶ್ಯ,

ಮುದಕವಿಯ ಶ್ರೀವೀರಭದ್ರೇಶ್ವರ ಜಾತ್ರಾ ಮಹೋತ್ಸವ 28ಕ್ಕೆ

ರಾಮದುರ್ಗ: ತಾಲೂಕಿನ ಮುದಕವಿ ಗ್ರಾಮದ ಆರಾಧ್ಯ ದೈವ ಶ್ರೀವೀರಭದ್ರೇಶ್ವರ ಹಾಗೂ ಶ್ರೀಆಂಜನೇಯಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವ, 25ನೇ ವರ್ಷದ ಮಹಾ ಕುಂಬಾಭಿಷೇಕ, ಅಡ್ಡಪಲ್ಲಕ್ಕಿ ಉತ್ಸವ ಸಮಾರಂಭವು ಅ.28 ಮಂಗಳವಾರ ಜರುಗಲಿವೆ ಎಂದು ಉತ್ಸವ ಕಮಿಟಿಯ ರಾಜು ದಳವಾಯಿ ಹೇಳಿದರು.

ಪಟ್ಟಣದ ಪ್ರೆಸ್ಕ್ಲಬ್ನಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈಗಾಗಲೇ ಜಾತ್ರಾ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಅ.27 ಸೋಮವಾರ ಬೆಳಿಗ್ಗೆ 8 ಘಂಟೆಯಿಂದ ಗಂಗೆ ಪೂಜೆ, ಕುಂಬಾಭಿಷೇಕ, ಹೋಮ ಹವನ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿವೆ. ಅ.28 ಮಂಗಳವಾರ ಶ್ರೀವೀರಭದ್ರ ಹಾಗೂ ಶ್ರೀಆಂಜನೇಯಸ್ವಾಮಿಗೆ ರುದ್ರಾಭಿಷೇಕ ಸೇವೆಯೊಂದಿಗೆ ವಿಶೇಷ ಅಲಂಕಾರ ಪೂಜೆಯು ವಿವಿಧ ಮಠಗಳ ಸ್ವಾಮೀಜಿಗಳ ಸಮ್ಮುಖದಲ್ಲಿ ಜರುಗಲಿದೆ. ಮಂಗಳವಾರ ಬೆಳಿಗ್ಗೆ 7ಘಂಟೆಗೆ ಹೊನ್ನಾಳಿ ಹಿರೇಕಲ್ಮಠದ ಶ್ರೀಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅವರಿಂದ ಗುಗ್ಗಳ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ. ಬೆಳಿಗ್ಗೆ 10ಘಂಟೆಗೆ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಉತ್ಸವ. ಮಧ್ಯಾಹ್ನ 12ಘಂಟೆಗೆ ಸಾಮೂಹಿಕ ವಿವಾಹ ಸಮಾರಂಭ ಹಾಗೂ ಧರ್ಮಸಭೆ ಕಾರ್ಯಕ್ರಮ ಜರುಗಲಿದ್ದು. ಸಮಾರಂಭದ ಸಾನಿಧ್ಯವನ್ನು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಭಗವತ್ಪಾದರು ವಹಿಸುವರು. ಉದ್ಘಾಟನೆಯನ್ನು ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ ವೀರಾಪೂರ ಹಿರೇಮಠದ ಡಾ.ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಅರಭಾಂವಿ-ಮುದಕವಿಯ ಮಠದ ಡಾ. ಗುರುಬಸವಲಿಂಗ ಸ್ವಾಮೀಜಿ, ಕಿಲ್ಲಾತೊರಗಲ್ಲ ಮಠದ ಶ್ರೀಚನ್ನಮಲ್ಲ ಶಿವಾಚಾರ್ಯ ಸ್ವಾಮೀಜಿ ಹಾಗೂ ಕಟಕೋಳ-ಮುದಕವಿ ಮಠದ ಸಚ್ಚಿದಾನಂದ ಸ್ವಾಮೀಜಿ ನೆರವೇರಿಸುವರು.

ಸಭೆಯ ಅಧ್ಯಕ್ಷತೆಯನ್ನು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ವಹಿಸಲಿದ್ದು, ಶ್ರೀವೀರಭದ್ರ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ವೀರಭದ್ರಪ್ಪ ಮುದ್ನೂರ, ಸಂಸದ ಜಗದೀಶ ಶೆಟ್ಟರ, ಮಾಜಿ ಶಾಸಕ, ಧನಲಕ್ಷ್ಮೀ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಮಹಾದೇವಪ್ಪ ಯಾದವಾಡ, ಜಮಖಂಡಿ ಶಾಸಕ ಜೆ.ಎಸ್. ಗುಡಗುಂಟಿ, ಕೈಗಾರಿಕ ನಿಗಮದ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಧುರೀಣರು ಆಗಮಿಸಲಿದ್ದಾರೆ.

ರಾಮದುರ್ಗ ಪ್ರೆಸ್ಕ್ಲಬ್ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಜಾತ್ರಾ ಕಮಿಟಿ ಸದಸ್ಯರು ಮಾತನಾಡಿದರು.

ಖೋ ಖೋ ಪಂದ್ಯಾವಳಿ: ತಂಡ ರಾಷ್ಟ್ರಮಟ್ಟಕ್ಕೆ ಆಯ್ಕೆ

ಮೂಡಲಗಿ: ಮೂಡಲಗಿ ತಾಲೂಕಿನ ನಾಗನೂರಿನಲ್ಲಿ ನಡೆದ ವಿಭಾಗ ಹಾಗೂ ರಾಜ್ಯಮಟ್ಟದ ಖೋ ಖೋ ಪಂದ್ಯಾವಳಿಯಲ್ಲಿ ಭಾಗವಹಿಸಿ ತಂಡಗಳು ನೇರ ಹಣಾಹಣಿ ನಡೆಸಿ ಬೆಳಗಾವಿ ವಿಭಾಗ ಮಟ್ಟದಿಂದ 14 ವರ್ಷದ ಒಳಗಿನ ಬಾಲಕ ಬಾಲಕಿಯರ ವಿಭಾಗ ಮಟ್ಟದ ಖೋ ಖೋದಲ್ಲಿ ಚಿಕ್ಕೋಡಿಯು- ಬೆಳಗಾವಿ ತಂಡವನ್ನು 10-5 ರಿಂದ ಮಣಿಸಿ ಪ್ರಥಮ ಸ್ಥಾನ ಪಡೆದರೆ, ದ್ವಿತೀಯ ಸ್ಥಾನ ಬೆಳಗಾವಿ ಪಡೆಯಿತು.

ಬಾಲಕಿಯರ ವಿಭಾಗದಲ್ಲಿ ವಿಜಯಪುರವು- ಬಾಗಲಕೋಟೆ ತಂಡವನ್ನು 7 ಅಂಕಗಳಿಂದ ಪ್ರಥಮ ಸ್ಥಾನ ಪಡೆಯಿತು. ದ್ವಿತೀಯ ಸ್ಥಾನ ಬಾಗಲಕೋಟೆಯ ಪಾಲಾಯಿತು. ಚಿಕ್ಕೋಡಿ ಬಾಲಕರ ಹಾಗೂ ಬಾಲಕಿಯರ ವಿಜಯಪುರ ತಂಡವು ರಾಜ್ಯಮಟ್ಟಕ್ಕೆ ಆಯ್ಕೆಯಾಯಿತು . 17 ವರ್ಷದ ವಯೋಮಿತಿಯ ಬಾಲಕರ ವಿಭಾಗದಲ್ಲಿ ಚಿಕ್ಕೋಡಿ ತಂಡವು ಧಾರವಾಡವನ್ನು 14-13 ಅಂಕ ಪಡೆಯುವುದರ ಜೊತೆಗೆ ರೋಚಕ ಘಟ್ಟ ತಲುಪಿ 1 ಅಂಕದಿಂದ ಚಿಕ್ಕೋಡಿ ತಂಡವು ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಯಿತು.

ಬಾಲಕಿಯರ ವಿಭಾಗದಲ್ಲಿ ಅತಿಥಿಯ ಚಿಕ್ಕೋಡಿ ತಂಡವು ಹಾವೇರಿ ತಂಡವನ್ನು 10 -9 ಅಂಕಗಳಿಂದ ಮಣಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಯಿತು.

ರಾಷ್ಟ್ರಮಟ್ಟಕ್ಕೆ ಆಯ್ಕೆ 14 ವರ್ಷದ ಒಳಗಿನ ಬಾಲಕ ಬಾಲಕಿಯರ ರಾಜ್ಯಮಟ್ಟದ ಖೋಖೋ ೀಗ್ ಕಮ್ ನಾಕ್ ಔಟ್ ಪದ್ಧತಿಯಲ್ಲಿ ಬೆಳಗಾವಿ, ಬೆಂಗಳೂರು, ಮೈಸೂರು, ಕಲ್ಬುರ್ಗಿ ವಿಭಾಗದಿಂದ ಗೆದ್ದು ಬಂದ ಬಾಲಕರ ಹಾಗೂ ಬಾಲಕಿಯರ 8 ತಂಡಗಳು ಸೇಣಸಾಟ ನಡೆಸಿದವು.

ನಾಳೆಯಿಂದ ಚೌಗುಲೆ ಸಂಸ್ಥೆಯ ಜನ್ಮದಿನೋತ್ಸವದ ಸಂಭ್ರಮಾಚರಣೆ

ರಾಯಬಾಗ: ಶ್ರೀ ಭರಮಾಅಣ್ಣಪ್ಪಾ ಚೌಗುಲೆ ಶಿಕ್ಷಣ ಸಂಸ್ಥೆಯು ಪ್ರಾಥಮಿಕ ಶಾಲೆಯಿಂದ ಪ್ರಾರಂಭಗೊಂಡು ಇಂದು ಪ್ರೌಢಶಾಲೆ, ಪದವಿಪೂರ್ವ,ಪದವಿ ಮಹಾವಿದ್ಯಾಲಯಗಳನ್ನು ಹೊಂದಿದ್ದು, ಸಂಸ್ಥೆಯ 17ನೇ ಜನ್ಮದಿನೋತ್ಸವದ ಸಂಭ್ರಮಾಚರಣೆಯು ಮಂಗಳವಾರ 28 ರಿಂದ ಗುರುವಾರ 30 ರವರೆಗೆ ಕಾಲೇಜು ಆವರಣದಲ್ಲಿ ಜರುಗಲಿದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹಾಗೂ ಹಿರಿಯ ನ್ಯಾಯವಾದಿ ಎಲ್.ಬಿ. ಚೌಗುಲೆ ಹೇಳಿದರು.

ಪಟ್ಟಣದ ಶಿಕ್ಷಣ ಸಂಸ್ಥೆಯ ಕಾರ್ಯಾಲಯದಲ್ಲಿ ಸಂಸ್ಥೆಯ ಉತ್ಸವ ಕಾರ್ಯಕ್ರಮದ ಪತ್ರಿಕೆಯನ್ನು ಬಿಡುಗಡೆಗೊಳಿಸಿ ಪ್ರತಿಕಾಗೋಷ್ಟಿಯಲ್ಲಿ ಮಾತನಾಡಿದ ಅವರು ಮಂಗಳವಾರ ದಿ.28 ರಂದು 11ಗಂಟೆಗೆ ಗದಗದ ಶ್ರೀ ಜಗದ್ಗುರು ಶಿವಾನಂದ ಬೃಹನ್ಮಠದ ಸದಾಶಿವಾನಂದ ಮಹಾಸ್ವಾಮೀಜಿ ಸಾನಿಧ್ಯ ವಹಿಸಿ ಉತ್ಸವ ಉದ್ಘಾಟಿಸುವರು. ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷಎಲ್.ಬಿ. ಚೌಗುಲೆ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಬೆಳಗಾವಿ ರಾಣಿಚನ್ನಮ್ಮ ವಿಶ್ವವಿದ್ಯಾಲ ಯದಕನ್ನಡ ಪ್ರಾಧ್ಯಾ ಪಕರಾದಡಾ. ಗಜಾನನ ನಾಯಿಕ, ಗೌರವಾಧ್ಯಕ್ಷರಾಗಿ ಸಂಸ್ಥೆಯ ಕಾರ್ಯದರ್ಶಿ ವಿನಯಎಲ್.ಚೌಗುಲೆ, ಸಂಸ್ಥೆಯ ನಿರ್ದೇಶಕಅಮರ ನಾಗರಾಳ ಆಗಮಿಸುವರು.

ಬುಧವಾರ ದಿ. 29ರಂದು 11ಗಂಟೆಗೆ ಹಿರಿಯರ ಸ್ಮರಣೆ, ಕೀರ್ತನೆಕಾರ್ಯಕ್ರಮದ ಸಾನಿಧ್ಯವನ್ನು ನಂದಿಕುರಳಿ ಶ್ರೀ ವೀರಭದ್ರ ಮಹಾಸ್ವಾಮಿಗಳು ವಹಿಸಲಿದ್ದಾರೆ. ಪಂಡರಪುರದ ಹ.ಭ.ಪ.ಶ್ರೀ ಗೋಪಾಲ ಅಣ್ಣಾತುಕಾರಾಮ ವಾಸ್ಕರ ಮಹಾರಾಜರು ಉಪಸ್ಥಿತರಿರುವರು. ಜಮಖಂಡಿ ವಾಕರಿ ಶಿಕ್ಷಣ ಸಂಸ್ಥೆ ಹಾಗೂ ಖಿಜೇರಿ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು.ಅತಿಥಿಯಾಗಿ ಬೆಳಗಾವಿ ರಾಣಿಚನ್ನಮ್ಮಾ ವಿಶ್ವವಿದ್ಯಾಲಯದ ಕುಲಸಚಿವರು ಡಾ.ಡಿ.ಎನ್.ಪಾಟೀಲ ಆಗಮಿಸುವರು.

ಸಂಸ್ಥೆಯ ಕಾರ್ಯದರ್ಶಿ ವಿನಯಎಲ್. ಚೌಗುಲೆ ಅಧ್ಯಕ್ಷತೆ ವಹಿಸುವರು. ಸಂಸ್ಥೆಯ ನಿರ್ದೇಶಕ ಐಶ್ವರ್ಯಾ.ವಿ.ಚೌಗುಲೆ ಆಗಮಿಸಲಿದ್ದಾರೆ.

ಗುರುವಾರ ದಿ30 ರಂದು 11ಗಂ.ಸತೀಶಎಲ್. ಚೌಗುಲೆಇವರ 35ನೇ ಹುಟ್ಟುಹಬ್ಬದ ಸವಿನೆನಪು ಕಾರ್ಯಕ್ರಮ ಹಾಗೂ ಸಮಾರೋಪ ಸಮಾರಂಭದ ಸಾನಿಧ್ಯವನ್ನು ಹಿರೇವಡಟ್ಟಿ ಮಣಕವಾಡಅನ್ನದಾನೀಶ್ವರದೇವ ಮಂದಿರ ಮಹಾಮಠದ ಶ್ರೀ ಗುರುಅಭಿನವ ಮೃತ್ಯುಂಜಯ ಮಹಾಸ್ವಾಮಿಜಿ ವಹಿಸುವರು. ಮಮದಾಪೂರದ ಮೌನ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಜಮುಖಂಡಿಓಲೈಮಠದಆ ನಲಅದದೇವರುಆಗಮಿಸಲಿದ್ದು, ಅಧ್ಯಕ್ಷತೆಯನ್ನು ಹಿರಿಯ ನ್ಯಾಯವಾದಿ ಎಲ್.ಬಿ. ಚೌಗುಲೆ, ಗೌರವಾಧ್ಯಕ್ಷತೆಯನ್ನು ಸಂಸ್ಥೆಯಉಪಾಧ್ಯಕ್ಷರಾದ ಭಾರತಿಚೌಗುಲೆ ವಹಿಸಲಿದ್ದಾರೆಎಂದು ಸಂಸ್ಥಾಪಕ ಅಧ್ಯಕ್ಷಎಲ್.ಬಿ. ಚೌಗುಲೆ ಪ್ರತಿಕಾಗೋಷ್ಟಿಯಲ್ಲಿ ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ವಿನಯ ಚೌಗುಲೆ, ಸಿಬಿಎಸ್ಸಿ ಪ್ರಿನ್ಸಿಪಾಲ ಇಕ್ಬಾಲ ತಾಜವಾಲೆ, ಪ್ರಿನ್ಸಿಪಾಲ ಸುನೀಲ ದಿಗ್ಗೇವಾಡಿ, ಶಿವಾನಂದ ನಾಂದಣಿ ಉಪಸ್ಥಿತರಿದ್ದರು.

ಸಂಸ್ಥೆಯ ಉತ್ಸವ ಕಾರ್ಯಕ್ರಮದ ಪತ್ರಿಕೆಯನ್ನು ಎಲ್.ಬಿ.ಚೌಗುಲೆ ಬಿಡುಗಡೆಗೊಳಿಸಿ ಪ್ರತಿಕಾಗೋಷ್ಟಿಯಲ್ಲಿ ಮಾತನಾಡಿದರು.

ಸಂಪತ್ತು ಸದ್ಬಳಕೆ ಆಗಲಿ, ಸಮಾಜ ಸೇವೆಯೊಂದಿಗೆ ಜನ್ಮ ದಿನ ಆಚರಿಸಿ

ಬೆಳಗಾವಿ: ಸನಾತನ ಭಾರತೀಯ ಸಂಸ್ಕೃತಿಯಲ್ಲಿ ಜನ್ಮದಿನಕ್ಕೆ ಅತ್ಯಂತ ಪಾವಿತ್ರತೆ ಇದ್ದು ಅದನ್ನು ಮರೆತು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗದೆ, ದಿನ ದುರ್ಬಲರಿಗೆ ಸಹಾಯ ಸಹಕಾರದೊಂದಿಗೆ ಸಾಮಾಜಿಕ ಸೇವೆ ಮಾಡುವದರೊಂದಿಗೆ ಮಾಡುವ ಜನ್ಮದಿನಾಚರಣೆಯಿಂದ ಜೀವನ ಸಾರ್ಥಕವಾಗುತ್ತದೆ ಎಂದು ಗ್ರಾಮಾಂತರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಮಾದಮ್ಮನವರ ಹೇಳಿದರು.

ಸಮೀಪದ ಬಸವಣ ಕುಡಚಿಯಲ್ಲಿರುವ ವೃದ್ಧಾಶ್ರಮದಲ್ಲಿ 51ನೇ ಹುಟ್ಟುಹಬ್ಬದ ನಿಮಿತ್ತ ಬೆಳಗಿನ ಉಪಹಾರ ಅಯೋಜಿಸಿ ತಮ್ಮ ಜನ್ಮದಿನಾಚರಣೆ ಆಚರಿಸಿಕೊಂಡು ಮಾತನಾಡಿ, ಸಮಾಜದಲ್ಲಿ ಮಕ್ಕಳ ಪ್ರೀತಿ ವಂಚಿತ ಹಾಗೂ ಅಸಾಹಯಕರಾದ ವೃದ್ದರಿಗೆ ಗೌರವ ಕೊಡಬೇಕಾಗಿರುವದು ನಾಗರಿಕಸಮಾಜದ ಪ್ರತಿಯೊಬ್ಬರ ಕರ್ತವ್ಯ ಅಂತಹ ವಾತ್ಸಲ್ಯತೊರ್ಪಡಿಸಲು ಅವಕಾಶ ಇಲ್ಲದವರ ಮಧ್ಯದಲ್ಲಿ ಅವರಿಗೆ ಮಗನ ಸ್ಥಾನದಲ್ಲಿ ನಿಂತು ಉಪಹಾರ ಬಡಿಸಿ ಅವರ ಸಮ್ಮುಖದಲ್ಲಿ ಕೇಕ್ ಕಟ್ ಮಾಡಿ ಸಿಹಿ ವಿತರಿಸಿ ಜನ್ಮದಿನ ಅಚರಿಸುತ್ತಿರುವದು ನನ್ನ ಪೂರ್ವ ಜನ್ಮದ ಪುಣ್ಯ. ದೇವರು ಕೊಟ್ಟ ಸಂಪತ್ತಿನಕೆಲ ಭಾಗವನ್ನು ಇಂತಹ ಸಂದರ್ಭಗಳಲ್ಲಿ ಸತ್ಕಾರ್ಯಕ್ಕೆ ಉಪಯೋಗ ಪಡಿಸಿದರೆ ಮಾನಸಿಕ ನೆಮ್ಮದಿ ಹಾಗೂ ಐಶ್ವರ್ಯ ದ್ವಿಗುಣವಾಗುವ ಭರವಸೆ ಇದೆ ಎಂದರು.

ಜನ್ಮದಿನದ ನಿಮಿತ್ತ ವಿದ್ಯಾರ್ಥಿಗಳ ಉಚಿತ ಅರೋಗ್ಯ ಶಿಬಿರ ಮತ್ತು ನೋಟ್ ಬುಕ್ ವಿತರಣೆ: ಪಂತನಗರದ ಶಿವಾಲಯದಲ್ಲಿ ಕಾಲೇಜು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಡಾ ಗುರುಪ್ರಸಾದ ಕೋತಿನ್ ನಡೆಸಿದರು. ವಿದ್ಯಾರ್ಥಿಗಳಲ್ಲಿರುವ ಪೌಷ್ಟಿಕ ಆಹಾರದ ಕೊರತ, ಕಡಿಮೆ ತೂಕ ಹಾಗೂ ಆರೋಗ್ಯದ ಸಮಸ್ಯೆ ಎದುರಿಸುತ್ತಿದ್ದ ವಿದ್ಯಾರ್ಥಿಗಳಿಗೆ ಪ್ರೋಟಿನ್ ಪೌಡರ ಹಾಗೂ ಪೌಷ್ಟಿಕಾಂಶದ ಮಾತ್ರೆ ಮತ್ತು ಸಿರಪ್ ನೀಡಿ ಮಕ್ಕಳಲ್ಲಿ ಅರೋಗ್ಯದ ಜಾಗೃತಿ ಮೂಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನ್ಯಾಯವಾದಿ ಎಫ್.ಎಸ್.ಸಿದ್ದನಗೌಡರ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಸಮಯದ ಮಹತ್ವ ಅರಿತು ಮೋಜು ಮಸ್ತಿ ಎನ್ನದೆ ಸತತ ವ್ಯವಸ್ಥಿತ ಅಧ್ಯಯನದಿಂದ ಅಂದುಕೊಂಡ ಗುರಿಮುಟ್ಟುಲು ಸಾಧ್ಯ. ಜೀವನದಲ್ಲಿ ಅಂದುಕೊಂಡದ್ದನ್ನು ಸಾಧಿಸಬೇಕಾದರೆ ನಿರಂತರ ಶ್ರಮವಹಿಸಿ ಶ್ರದ್ದೆಯಿಂದ ಕಾರ್ಯ ನಿರ್ವಹಿಸಬೇಕು ಅಂದಾಗ ಸಾಧನೆಯ ಶಿಖರವೇರಲು ಸಾಧ್ಯ ಎಂದರು.

ನಿವೃತ್ತ ಶಿಕ್ಷಕರಾದ ದಯಾನಂದ ದಯಣ್ಣವರ, ಮಲ್ಲಿಕಾರ್ಜುನ ಮಾದಮ್ಮನವರ ಸಾಧನೆ ಅತ್ಯಂತ ಯಶಸ್ವಿಯಾಗಿದೆ ಎಂದರು.

ವೇದಿಕೆಯ ಮೇಲೆ ಸಂತೋಷ ದೇಶನೂರ, ಯಲ್ಲೇಶ ಕೊಲಕಾರ, ಈರಣ್ಣ ವೀರಶೆಟ್ಟಿ, ಆನಂತ ಸಾಳುಂಕೆ, ಸಿದ್ರಾಮ ತಲ್ಲೂರ ಡಾ.ಎಮ್.ಸಿ ಹೀರೆಮಠ, ಆನಂದ ನಿರ್ವಾಣಿ, ಬಸವರಾಜ ಗಣಿಕೊಪ್ಪ, ಕಾಡಯ್ಯ ಸಾಲಿಮಠ ಹಾಗೂ ನೂರಾರು ವಿದ್ಯಾರ್ಥಿಗಳು ಇದ್ದರು.

ಮಾರಿಹಾಳ ಪಿಕೆಪಿಎಸ್ ನಿರ್ದೇಶಕರು ಸಿಬ್ಬಂದಿ ಸತ್ಕರಿಸಿ ಹುಟ್ಟುಹಬ್ಬದ ಶುಭಕೋರಿದರು. ಜನ್ಮದಿನದ ನಿಮಿತ್ತ ಕಾರ್ಮಿಕರು, ಜನಪ್ರತಿನಿಧಿಗಳು ಹಾಗೂ ಹಿತೈಷಿಗಳು ಅವರ ಹುಟ್ಟು ಹಬ್ಬವನ್ನು ಅದ್ದೂರಿಯಾಗಿ ಅನೇಕಕಡೆ ಆಚರಿಸಿದರು ಶುಭಾಶಯ ಮಹಾಪೂರೆ ಹರಿದು ಬಂತು.

ಜನ್ಮದಿನಾಚರಣೆ ಆಚರಿಸಿಕೊಂಡು ಮಲ್ಲಿಕಾರ್ಜುನ ಮಾದಮ್ಮನವರ ಅವರು ಮಾತನಾಡಿದರು.

ಸಣ್ಣ ಹಣಕಾಸಿನ ವಿವಾದ: ಘರ್ಷಣೆಯಲ್ಲಿ ಯುವಕ ಸಾವು

ಬೈಲಹೊಂಗಲ: ಪೊಲೀಸ್ ಠಾಣಾ ವ್ಯಾಪ್ತಿಯ ಗಿರಿಯಾಲ್ ಕೆ.ಬಿ. ಗ್ರಾಮದಲ್ಲಿ ಸಣ್ಣ ಹಣಕಾಸಿನ ವಾದ ವಿವಾದದ ಹಿನ್ನೆಲೆಯಲ್ಲಿ ನಡೆದ ಘರ್ಷಣೆಯಲ್ಲಿ ಯುವಕನೊಬ್ಬ ಮೃತಪಟ್ಟಿರುವ ಘಟನೆ ಇಂದು ಮುಂಜಾನೆ ಸಂಭವಿಸಿದೆ. ಮೃತನಾದ ಮಂಜುನಾಥ್ ಗಿರಿಮಲ್ಲಪ್ಪ ಗೌಡರ್(29), ಕೂಲಿ ಕೆಲಸ ಮಾಡುತ್ತಿದ್ದವನಾಗಿದ್ದು, ಆರೋಪಿ ದಯಾನಂದ ಮಲ್ಲಸರ್ಜಾ ಗುಂಡ್ಲೂರ್(24) ಕೃಷಿಕನಾಗಿದ್ದಾನೆ.ಮಾಹಿತಿ ಪ್ರಕಾರ, ಸುಮಾರು 8 ದಿನಗಳ ಹಿಂದೆ ಆರೋಪಿ ದಯಾನಂದನು ಮೃತನಿಗೆ 2,000 ರು. ಹಣ ನೀಡಿದ್ದನು. ನಿನ್ನೆ ರಾತ್ರಿ ಸುಮಾರು 8.30 ರಿಂದ 8.40ರ ಸುಮಾರಿಗೆ, ಗಿರಿಯಾಲ್ ಗ್ರಾಮದ ವಿಠ್ಠಲ ದೇವಸ್ಥಾನ ಹತ್ತಿರ ಹಣ ವಾಪಸ್ ಕೇಳಿದಾಗ, ಮೃತ ಮಂಜುನಾಥ್ ಆರೋಪಿ ಹಾಗೂ ಅವನ ತಂದೆ-ತಾಯಿಗೆ ಅವಾಚ್ಯವಾಗಿ ಬೈದಿದ್ದನೆಂದು ತಿಳಿದುಬಂದಿದೆ.ಈ ಘಟನೆಯಿಂದ ಆಕ್ರೋಶಗೊಂಡ ಆರೋಪಿ ಗಿರಿಯಾಲ್ ಕೆ.ಬಿ. ಗ್ರಾಮದ ಓಬಳೇಪ್ಪಾ ಅಜ್ಜನ ಗುಡಿ ಕಮಾಂಡ್ ಹತ್ತಿರ ಮೃತನೊಂದಿಗೆ ಮತ್ತೆ ವಾಗ್ವಾದಕ್ಕೆ ಇಳಿದು, ಕೈಯಲ್ಲಿ ಇದ್ದ ಕುಡಗೋಲಿನಿಂದ ಮೃತನ ಎಡ ಕಾಲಿನ ಮೊಣಕಾಲು ಕೆಳಭಾಗದಲ್ಲಿ ಹಿಂಬದಿಯಿಂದ ಹೊಡೆದಿದ್ದಾನೆ. ಇದರಿಂದ ಮಂಜುನಾಥ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಘಟನಾ ಸ್ಥಳ ಕ್ಕೆ ಸಿಪಿ ಐ ಪ್ರಮೋದ ಯಲಿಗಾರ, ಕ್ರೈಂ ಪಿಎಸ್ ಐ ಗುರುರಾಜ ಕಲಬುರ್ಗಿ,ಎಫ್ ವೈ ಮಲ್ಲೂರ ಭೇಟಿ ನೀಡಿ ತನಿಖೆ ನಡೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮಹಿಳಾ ವಿಶ್ವಕಪ್ ಹಿನ್ನಡೆ: ಪಾಕ್ ಕೋಚ್ ವಜಾ

ಕರಾಚಿ: ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ಈ ಸಲ ನಿರಾಶಾದಾಯಕ ಪ್ರದರ್ಶನ ತೋರಿದೆ. ತಂಡವು ಒಂದೂ ಜಯ ಕಾಣದೇ ಅಭಿಯಾನ ಮುಗಿಸಿದ ಬೆನ್ನಲ್ಲೇ ಇದೀಗ ತಂಡದ ಮುಖ್ಯ ಕೋಚ್ ಮೊಹಮ್ಮದ್ ವಾಸಿಮ್ ಅವರ ಒಪ್ಪಂದವನ್ನು ನವೀಕರಿಸದಿರಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ ನಿರ್ಧರಿಸಿದೆ. ಪಾಕ್ ಆಡಿದ ಏಳು ಪಂದ್ಯಗಳಲ್ಲಿ ನಾಲ್ಕರಲ್ಲಿ ಸೋಲು ಮತ್ತು ಉಳಿದ ಮೂರು ಪಂದ್ಯಗಳು ಮಳೆಯಲ್ಲಿ ರದ್ದಾಗಿದ್ದವು. ವಾಸೀಮ್ ಭರವಸೆ ನೀಡಿದಂತೆ ಪಾಕ್ ಪ್ರದರ್ಶನ ನೀಡಿಲ್ಲ ಎಂಬುದು ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರ ನಿರಾಶೆಗೆ ಕಾರಣ ಎಂದು ಪಿಸಿಬಿಯ ವಿಶ್ವಾಸಾರ್ಹ ಮೂಲವೊಂದು ತಿಳಿಸಿದೆ. ಕಳೆದ ವರ್ಷ ವಾಸಿಮ್ ಅವರನ್ನು ಮಹಿಳಾ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಿತ್ತು ಮತ್ತು ಅವರ ಅವಧಿಯಲ್ಲಿ ಪಾಕಿಸ್ತಾನ ತಂಡವು ಏಷ್ಯಾ ಕಪ್ ಸೆಮಿಫೈನಲ್‌ನಲ್ಲಿ ಸೋಲು, ನಂತರ ದಕ್ಷಿಣ ಆಫ್ರಿಕಾದಲ್ಲಿ ನಡೆದ ಮಹಿಳಾ ಟಿ20 ವಿಶ್ವಕಪ್‌ನ ನಾಲ್ಕು ಪಂದ್ಯಗಳಲ್ಲಿ ಕೇವಲ ಒಂದು ಗೆಲುವು ಮಾತ್ರ ಗಳಿಸಿತ್ತು.

ಅಯ್ಯರ್ ಗಾಯಾಳು

ಸಿಡ್ನಿ: ಆಸ್ಟ್ರೇಲಿಯಾ ವಿರುದ್ಧದ ಮೂರನೇ ಏಕದಿನ ಪಂದ್ಯದ ವೇಳೆ ಭಾರತ ತಂಡದ ಉಪ ನಾಯಕ ಶ್ರೇಯಸ್ ಅಯ್ಯರ್ ಗಾಯಗೊಂಡು ಮೈದಾನದಿಂದ ಹೊರನಡೆಯಬೇಕಾಯಿತು.

ಹರ್ಷಿತ್ ರಾಣಾ ಅವರ ಬೌಲಿಂಗ್‌ನಲ್ಲಿ ಅಲೆಕ್ಸ್ ಕೇರಿ ಅವರ ಕ್ಯಾಚ್ ಪಡೆಯುವ ವೇಳೆ ನೆಲಕ್ಕೆ ಬಿದ್ದು ಪಕ್ಕೆಲುಬಿಗೆ ಗಾಯವಾಗಿದೆ. ಈ ಹಿನ್ನೆಲೆಯಲ್ಲಿ ಅವರು ಕನಿಷ್ಠ 3 ವಾರಗಳ ಕಾಲ ಕ್ರಿಕೆಟ್‌ನಿಂದ ದೂರ ಉಳಿಯ ಬೇಕೆಂದು ಬಿಸಿಸಿಐ ಮೂಲಗಳು ತಿಳಿಸಿವೆ. ಪಂದ್ಯದ ಸಮಯದಲ್ಲಿ ಶ್ರೇಯಸ್ ಅವರನ್ನು ಸ್ಕ್ಯಾನ್‌ಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆರಂಭಿಕ ವರದಿಯ ಪ್ರಕಾರ, ಸೆಳೆತ ಉಂಟಾಗಿದ್ದು, ಅವರು ಕನಿಷ್ಠ ಮೂರು ವಾರಗಳ ಕಾಲ ಆಟದಿಂದ ಹೊರಗುಳಿಯಬೇಕಾಗುತ್ತದೆ. ಶ್ರೇಯಸ್ ಅಯ್ಯರ್ ವಾಪಸಾದ ನಂತರ ಬೆಂಗಳೂರಿನ ಎಕ್ಸ್‌ಲೆಂಟ್ ಕೇಂದ್ರಕ್ಕೆ ವರದಿ ಮಾಡಿಕೊಳ್ಳಬೇಕಾಗುತ್ತದೆ. ಅವರು ಚೇತರಿಸಿಕೊಳ್ಳಲು ಹೆಚ್ಚಿನ ಸಮಯ ಬೇಕಾಗುತ್ತದೆಯೇ ಎಂದು ತೀರ್ಮಾನಿಸುವುದಕ್ಕೂ ಮುನ್ನ ಹೆಚ್ಚಿನ ವರದಿಗಳಿಗಾಗಿ ಕಾಯಲಾಗುತ್ತಿದೆ. ಇದು ಸ್ಟ್ರೆಸ್ ಫ್ರಾಕ್ಚರ್ ಆಗಿದ್ದರೆ ಹೆಚ್ಚು ಸಮಯ ತೆಗೆದುಕೊಳ್ಳಬಹುದು ಎಂದು ಈ ಬೆಳವಣಿಗೆ ಬಗ್ಗೆ ತಿಳಿದಿರುವ ಬಿಸಿಸಿಐ ಮೂಲಗಳು ತಿಳಿಸಿವೆ. ಅಯ್ಯರ್ ಅವರ ಗಾಯದ ಬಗ್ಗೆ ಬಿಸಿಸಿಐ ವಿವರವಾದ ಮಾಹಿತಿಯನ್ನು ಒದಗಿಸಿದೆ. 'ಅಯ್ಯರ್ ಎಡ ಪಕ್ಕೆಲುಬಿನ ಗಾಯದಿಂದ ಬಳಲುತ್ತಿದ್ದಾರೆ. ಹೆಚ್ಚಿನ ಮೌಲ್ಯಮಾಪನಕ್ಕಾಗಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಇದು ಗಾಯದ ತೀವ್ರತೆಯನ್ನು ಸೂಚಿಸುತ್ತದೆ. ವಿವರವಾದ ವೈದ್ಯಕೀಯ ಮೌಲ್ಯಮಾಪನದ ಅಗತ್ಯವಿದೆ. ತಂಡದ ಆಡಳಿತ ಮಂಡಳಿ ಮತ್ತು ಅಭಿಮಾನಿಗಳು ಈಗ ಅಯ್ಯರ್ ಅವರ ಚೇತರಿಕೆಗಾಗಿ ಆಶಿಸುತ್ತಿದ್ದಾರೆ' ಎಂದಿದೆ.

ಬುಧವಾರದಿಂದ ಭಾರತ-ಆಸೀಸ್ ಏಕದಿನ ಸರಣಿ | ಸೂರ್ಯಕುಮಾರ್ ನಾಯಕತ್ವದ ಟಿ20 ತಂಡ

ಭಾರತದ ಚಿತ್ತ ಟಿ20 ಸರಣಿ ಗೆಲ್ಲುವತ್ತ

ಮುಂಬೈ: ಆಸ್ಟ್ರೇಲಿಯಾ ವಿರುದ್ಧದ 3 ಪಂದ್ಯಗಳ ಏಕದಿನ ಸರಣಿಯನ್ನು 1-2 ಅಂತರದಲ್ಲಿ ಸೋತಿರುವ ಭಾರತ ತಂಡ, ಮುಂದಿನ ಐದು ಪಂದ್ಯಗಳ ಟಿ20 ಸರಣಿಗೆ ಸಜ್ಜಾಗುತ್ತಿದೆ. ಏಕದಿನ ತಂಡದಲ್ಲಿದ್ದ ಎಂಟು ಆಟಗಾರರು ಮಾತ್ರ ಟಿ20 ಸರಣಿಗಾಗಿ ಆಸ್ಟ್ರೇಲಿಯಾದಲ್ಲಿ ಉಳಿದಿದ್ದಾರೆ. ಸೂರ್ಯಕುಮಾರ್ ಯಾದವ್ ಟಿ20 ತಂಡವನ್ನು ಸರಣಿಯಲ್ಲಿ ತಂಡವನ್ನು ಮುನ್ನಡೆಸಲಿದ್ದು, ಏಕದಿನ ಸರಣಿಯಲ್ಲಿನ ಸೋಲಿಗೆ ಸೇಡು ತೀರಿಸಿಕೊಳ್ಳಲು ಭಾರತ ತಂಡ ಎದುರು ನೋಡುತ್ತಿದೆ. ಮುಂದಿನ ವರ್ಷ ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ಟಿ20 ವಿಶ್ವಕಪ್ ನಡೆಯಲಿದೆ. ಆ ಹಿನ್ನೆಲೆಯಲ್ಲಿ ಈ ಸರಣಿ ಉಭಯ ತಂಡಗಳಿಗೂ ಅತ್ಯಂತ ಮಹತ್ವದ್ದಾಗಿದೆ.

ಏಷ್ಯಾ ಕಪ್ ಟೂರ್ನಿಯಲ್ಲಿ ಆರಂಭಿಕ ಆಟಗಾರನಾಗಿ ಸಂಜು ಸ್ಯಾಮ್ಸನ್‌ಗಿಂತ ಶುಭಮನ್ ಗಿಲ್ ಅವರಿಗೆ ಆದ್ಯತೆ ನೀಡಲಾಗಿತ್ತು. ಹೀಗಾಗಿ ಅಭಿಷೇಕ್ ಶರ್ಮಾ ಜೊತೆಗೆ ಆರಂಭಿಕರಾಗಿ ಗಿಲ್ ತಮ್ಮ ಆಟವನ್ನು ಮುಂದುವರಿಸುವ ಸಾಧ್ಯತೆ ಇದ್ದು, ತಿಲಕ್ ವರ್ಮಾ ಮೂರನೇ ಸ್ಥಾನದಲ್ಲಿ ಆಡಬಹುದು. ಬಳಿಕ ನಾಯಕ ಸೂರ್ಯಕುಮಾರ್

ಯಾದವ್ ನಾಲ್ಕನೇ ಸ್ಥಾನದಲ್ಲಿ ಕಣಕ್ಕಿಳಿಯುವುದರಲ್ಲಿ ಯಾವುದೇ ಅನುಮಾನವಿಲ್ಲ. ವಿಕೆಟ್ ಕೀಪರ್ ಸ್ಥಾನಕ್ಕೆ ಸಂಜು ಸ್ಯಾಮ್ಸನ್ ಮತ್ತು ಜಿತೇಶ್ ಶರ್ಮಾ ನಡುವೆ ಪೈಪೋಟಿ ನಡೆಯಲಿದ್ದು, ಏಷ್ಯಾ ಕಪ್‌ನಲ್ಲಿ ಸ್ಯಾಮ್ಸನ್ ನಿರೀಕ್ಷಿತ ಪ್ರದರ್ಶನ ತೋರದ ಕಾರಣ, ಜಿತೇಶ್ ಶರ್ಮಾ ಅವರನ್ನು ಹಾರಿಸಬಹುದು.

ಮೊದಲ ಟಿ20ಐನಲ್ಲಿ ಶಿವಂ ದುಬೆ ಮತ್ತು ನಿತೀಶ್ ರೆಡ್ಡಿ ಇಬ್ಬರೂ ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ದಟ್ಟವಾಗಿದೆ. ಭಾರತ ತಂಡ ಬಲಿಷ್ಠ ಸ್ಪಿನ್ ವಿಭಾಗದೊಂದಿಗೆ ಕಣಕ್ಕಿಳಿಯಲು ಯೋಜನೆ ಹಾಕಿಕೊಳ್ಳುತ್ತಿದ್ದು, ವಾಷಿಂಗ್ಟನ್ ಸುಂದರ್ ಬದಲಿಗೆ ಅಕ್ಷರ್ ಪಟೇಲ್ ಅವರನ್ನು ಸ್ಪಿನ್ ಆಲ್‌ರೌಂಡರ್ ಆಗಿ ಆಯ್ಕೆ ಮಾಡಬಹುದು. ಆದರೆ ವರುಣ್ ಚಕ್ರವರ್ತಿ ತಂಡದಲ್ಲಿ ಸ್ಥಾನ ಪಡೆದರೆ ಕುಲ್ದೀಪ್ ಯಾದವ್ ಅವರನ್ನು ಕೈಬಿಡುವ ಸಾಧ್ಯತೆ ಹೆಚ್ಚಿದೆ. ಟೀಮ್ ಇಂಡಿಯಾ ಪ್ರಮುಖ ವೇಗಿ ಜಸ್ಪ್ರೀತ್ ಬುಮ್ರಾ ತಂಡದಲ್ಲಿ ಸ್ಥಾನ ಪಡೆಯುವುದು ಬಹುತೇಕ ಖಚಿತ. ಅವರ ಜತೆಗೆ ಹೊಸ ಬಾಲ್‌ನಲ್ಲಿ ಉತ್ತಮ ಬೌಲಿಂಗ್ ಪ್ರದರ್ಶನ ನೀಡುವ ಅರ್ಷದೀಪ್ ಸಿಂಗ್ ಅವರನ್ನು ಆಯ್ಕೆ ಮಾಡುವುದು ಕೂಡಾ ಅನಿವಾರ್ಯವಾಗಿದೆ.

ಟಿ20 ಭಾರತ ಸಂಭಾವ್ಯ ತಂಡ: ಅಭಿಷೇಕ್ ಶರ್ಮಾ, ಶುಭಮನ್ ಗಿಲ್, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ಜಿತೇಶ್ ಶರ್ಮಾ/ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಶಿವಂ ದುಬೆ, ನಿತೀಶ್ ರೆಡ್ಡಿ, ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್.

ಗೋವಾ ವಿರುದ್ಧ ಅಬ್ಬರಿಸಿದ ಕರುಣ್ ನಾಯರ್

ರಣಜಿ: ಕರ್ನಾಟಕ ಗೌರವಾರ್ಹ ಮೊತ್ತ

ಶಿವಮೊಗ್ಗ: ಉಪ ನಾಯಕ ಕರುಣ್ ನಾಯರ್ (ಅಜೇಯ 174 ರನ್) ಅವರ ಆಕರ್ಷಕ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡ ಗೋವಾ ವಿರುದ್ಧದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಗೌರವಾರ್ಹ ಮೊತ್ತ ಕಲೆಹಾಕಿದೆ.

ಇಲ್ಲಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 5 ವಿಕೆಟ್‌ಗೆ 222 ರನ್‌ನೊಂದಿಗೆ ಭಾನುವಾರ ಆಟ ಮುಂದುವರಿಸಿದ ಮಯಂಕ್ ಅಗರ್ವಾಲ್ ಬಳಗ 110.1 ಓವರ್‌ಗಳಲ್ಲಿ 371 ರನ್‌ಗಳಿಗೆ ಆಲೌಟ್ ಆಯಿತು. ಇಲ್ಲಿನ ಮೈದಾನದಲ್ಲಿ ಎರಡನೇ ಶತಕ ದಾಖಲಿಸಿದ ಕರುಣ್, ಭಾನುವಾರ ಎದುರಾಳಿ ಬೌಲರ್‌ಗಳನ್ನು ಇನ್ನಿಲ್ಲದಂತೆ ಕಾಡಿದರು.

ಅವರಿಗೆ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ (57 ರನ್) ಮತ್ತು ವೇಗದ ಬೌಲರ್ ವೈಶಾಖ್ (31 ರನ್) ಬೆಂಬಲ ನೀಡಿದರು. ಕರುಣ್ ಮತ್ತು ಶ್ರೇಯಸ್ 6ನೇ ವಿಕೆಟ್ ಜೊತೆಯಾಟದಲ್ಲಿ 117 ರನ್ ಗಳಿಸಿ ಕರ್ನಾಟಕ ತಂಡವನ್ನು ಸುಸ್ಥಿತಿಗೆ ತಂದು ನಿಲ್ಲಿಸಿದರು.

ಶ್ರೇಯಸ್ ಔಟಾದ ನಂತರ ಕರುಣ್, ಬಾಲಂಗೋಚಿಗಳೊಂದಿಗೆ ಸೇರಿ ಇನ್ನಿಂಗ್ಸ್ ಬೆಳೆಸಿದರು. 7ನೇ ವಿಕೆಟ್‌ಗೆ ಯಶೋವರ್ಧನ್ ಪರಂತಾಪ್ (14) ಜೊತೆ 26 ರನ್, 8ನೇ ವಿಕೆಟ್ ಪಾಲುದಾರಿಕೆಯಲ್ಲಿ ವೈಶಾಖ್ ಜೊತೆ 99 ಎಸೆತಗಳಲ್ಲಿ 60 ರನ್ ದಾಖಲಿಸಿ ತಂಡದ ಮೊತ್ತವನ್ನು 300ರ ಗಡಿ ದಾಟಿಸಿದರು.

10ನೇ ವಿಕೆಟ್‌ಗೆ ವಿದ್ವತ್ ಕಾವೇರಪ್ಪ ಜೊತೆಗೂಡಿ 29 ರನ್ ಕಲೆಹಾಕಿದರು. ಈ ಪಾಲುದಾರಿಕೆಯಲ್ಲಿ ಬಂದ ರನ್‌ಗಳೆಲ್ಲವೂ ಅವರ ಬ್ಯಾಟ್‌ನಿಂದಲೇ ಹರಿದು ಬಂದಿತ್ತು. 111ನೇ ಓವರ್‌ನ ಮೊದಲ ಎಸೆತವನ್ನು ಕರುಣ್, ಡೀಪ್ ಮಿಡ್ ವಿಕೆಟ್‌ನತ್ತ ಬಾರಿಸಿ ಒಂದು ರನ್ ಗಳಿಸಿದರು.

ಫಿಫಾದಿಂದ ಅನುಮತಿ ಸಿಗದ ಕಾರಣ ಪಂದ್ಯ ಮುಂದಕ್ಕೆ | ಖಚಿತಪಡಿಸಿದ ಪ್ರಾಯೋಜಕರು

ಅರ್ಜೆಂಟೀನಾ ಫುಟ್ಬಾಲ್ ತಂಡದ ಕೇರಳ ಭೇಟಿ ಮತ್ತೆ ಮುಂದೂಡಿಕೆ

ದೆಹಲಿ: ಲಿಯೋನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡದ ಕೇರಳ ಪ್ರವಾಸ ಮತ್ತೆ ಮುಂದೂಡಿಕೆಯಾಗಿದೆ. ಮೂಲ ವೇಳಾಪಟ್ಟಿಯ ಪ್ರಕಾರ, ನವೆಂಬರ್ 17ರಂದು ಮೆಸ್ಸಿ ಸಾರಥ್ಯದ ಅರ್ಜೆಂಟೀನಾ ತಂಡ ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಸೌಹಾರ್ದ ಪಂದ್ಯದಲ್ಲಿ ಆಡಬೇಕಿತ್ತು.

ಆದರೆ ಈ ಪಂದ್ಯಕ್ಕೆ ಜಾಗತಿಕ ಫುಟ್ಬಾಲ್ ಮಂಡಳಿ ಫಿಫಾದಿಂದ ಅನುಮತಿ ಸಿಗದ ಕಾರಣ ಪಂದ್ಯ ಮುಂದೂಡಿಕೆಯಾಗಿದೆ ಎಂದು ಪಂದ್ಯದ ಪ್ರಯೋಜಕರಾದ ಉದ್ಯಮಿ ಆ್ಯಂಟೋ ಅಗಸ್ಟಿನ್ ಸಾಮಾಜಿಕ ಜಾಲತಾಣ ಪೋಸ್ಟ್ ಮೂಲಕ ಖಚಿತಪಡಿಸಿದ್ದಾರೆ. ಪಂದ್ಯಕ್ಕೆ ಫಿಫಾದಿಂದ



ಅನುಮತಿ ಪಡೆಯುವಲ್ಲಿ ವಿಳಂಬವಾಗಿದೆ ಎಂದು ಅವರು ಫೇಸ್‌ಬುಕ್‌ನಲ್ಲಿ ಬರೆದಿದ್ದಾರೆ. ಅರ್ಜೆಂಟೀನಾದ ಫುಟ್ಬಾಲ್ ಅಸೋಸಿಯೇಷನ್ (ಎಎಫ್‌ಎ) ಜೊತೆಗಿನ ಸಭೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು.

'2022ರ ವಿಶ್ವಕಪ್ ವಿಜೇತ ತಂಡವನ್ನು ಸ್ವಾಗತಿಸಲು ಉತ್ಸುಕರಾಗಿದ್ದೇವೆ. ಲಕ್ಷಾಂತರ ಫುಟ್ಬಾಲ್ ಪ್ರೇಮಿಗಳು ತಮ್ಮ ನೆಚ್ಚಿನ ತಂಡದ ಆಟವನ್ನು ಕಣ್ತುಂಬಿಕೊಳ್ಳಲು ತುದಿಗಾಲಲ್ಲಿ ನಿಂತಿದ್ದಾರೆ. ಕೇರಳದಲ್ಲಿ ಮೆಸ್ಸಿ ಆಡುವುದನ್ನು ನೋಡಲು ಜನರಿಗೆ ಅವಕಾಶ ಮಾಡಿಕೊಡಬೇಕು ಎಂಬುದಷ್ಟೇ ನಮ್ಮ ಉದ್ದೇಶ. ಈ ಕಾರ್ಯಕ್ರಮ ಕುರಿತು ಸರಕಾರ ಅಧಿಕೃತ ಆದೇಶ ಹೊರಡಿಸಲು ಕೇಂದ್ರ ಕ್ರೀಡಾ ಸಚಿವಾಲಯ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಒಪ್ಪಿಗೆ ಸೂಚಿಸಿದೆ' ಎಂದು ಕೇರಳದ ಕ್ರೀಡಾ ಸಚಿವ ವಿ. ಅಬ್ದುರಹಿಮಾನ್ ಹೇಳಿದರು.

ಮಹಿಳಾ ವಿಶ್ವಕಪ್: ಕೊನೆಯ ಪಂದ್ಯದಲ್ಲಿ ಸೋತ ನ್ಯೂಜಿಲೆಂಡ್

ಇಂಗ್ಲೆಂಡ್‌ಗೆ 8 ವಿಕೆಟ್ ಗೆಲುವು

ವಿಶಾಖಪಟ್ಟಣಂ: ಲಿನ್ಸೆ ಸ್ಮಿತ್ ಅವರ ಅಮೋಘ ಬೌಲಿಂಗ್ ಮತ್ತು ಎಮಿ ಜೋನ್ಸ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ ತಂಡವು ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 8 ವಿಕೆಟ್ ಜಯ ಗಳಿಸಿತು. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಇಂಗ್ಲೆಂಡ್ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿದೆ.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಲಿನ್ಸೆ ಸ್ಮಿತ್ (30 ರನ್‌ಗೆ 3 ವಿಕೆಟ್) ಮತ್ತು ನ್ಯಾಟ್ ಶಿವರ್ ಬ್ರಂಟ್ (31 ರನ್‌ಗೆ 2 ವಿಕೆಟ್) ಅವರ ಬೌಲಿಂಗ್‌ನಿಂದಾಗಿ ನ್ಯೂಜಿಲೆಂಡ್ ತಂಡವು 38.2 ಓವರ್‌ಗಳಲ್ಲಿ 168 ರನ್ ಗಳಿಸಿತು. ಜಾರ್ಜಿಯಾ ಫ್ಲಿಮರ್ (43

ರನ್) ಮತ್ತು ಅಮೆಲಿಯಾ ಕೆರ್ (35 ರನ್) ಅವರು ತಂಡಕ್ಕೆ ಬಲ ತುಂಬಿದರು. ಆ ಬಳಿಕ ಸೋಫಿ ಡಿವೈನ್ (23) ಹೊರತುಪಡಿಸಿ ನ್ಯೂಜಿಲೆಂಡ್‌ನ ಯಾವ ಬ್ಯಾಟರ್‌ಗಳೂ ಪ್ರತಿರೋಧ ತೋರಲಿಲ್ಲ.

ಗುರಿ ಬೆನ್ನಟ್ಟಿದ ತಂಡವು ಇಂಗ್ಲೆಂಡ್ ತಂಡವು ಕೇವಲ 29.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 172 ರನ್ ಗಳಿಸಿ ಸುಲಭ ಜಯಸಾಧಿಸಿತು. ಎಮಿ ಜೋನ್ಸ್ 92 ಬಾಲ್‌ಗಳನ್ನು ಎದುರಿಸಿ 86 ರನ್ ಅಜೇಯರಾಗುಳಿದು ತಂಡದ ಸುಲಭ ಜಯಕ್ಕೆ ಕಾರಣಕರ್ತರಾದರು. ತಮಿಸನ್ ಬ್ಯೂಮಾಂಟ್ 38 ಬಾಲ್ ಎದುರಿಸಿ 40 ರನ್ ಗಳಿಸಿದರು. ಆ ಬಳಿಕ ಕ್ರೀಸ್‌ಗೆ ಬಂದ ಹೀದರ್ ನೈಟ್ 40 ಬಾಲ್‌ಗಳನ್ನು ಎದುರಿಸಿ 33 ರನ್ ಮಾಡಿದರು. ನೀಡಿದರು. ಇದರಿಂದಾಗಿ ತಂಡವು ಜಯಿಸಿತು.

ನ್ಯೂಜಿಲೆಂಡ್ ತಂಡವು ಈಗಾಗಲೇ ಸೆಮಿಫೈನಲ್ ಸ್ಪರ್ಧೆಯಿಂದ ಹೊರಬಿದ್ದಿದೆ.

ಗೋವಾದಲ್ಲಿ ನಡೆಯಲಿರುವ ಟೂರ್ನಿ | ಭಾರತದ 24 ಆಟಗಾರರು ಭಾಗಿ

ಅ.30ರಿಂದ ವಿಶ್ವ ಚೆಸ್ ಪಂದ್ಯಾವಳಿ

ಪಣಜಿ: ಭಾರತ ಆತಿಥ್ಯದಲ್ಲಿ ನಡೆಯುವ ಚೆಸ್ ವಿಶ್ವಕಪ್ ಟೂರ್ನಿಗೆ ಇನ್ನು ಕೇವಲ ಮೂರು ದಿನಗಳು ಮಾತ್ರ ಬಾಕಿ ಉಳಿದಿವೆ. ಅಕ್ಟೋಬರ್ 30ರಿಂದ ನವೆಂಬರ್ 27ರ ವರೆಗೆ ಗೋವಾದಲ್ಲಿ ಪಂದ್ಯಾವಳಿ ನಿಗದಿಯಾಗಿದೆ. ಈ ಟೂರ್ನಿಯಲ್ಲಿ 206 ಆಟಗಾರರು ಭಾಗವಹಿಸುತ್ತಿದ್ದು, ಪ್ರತಿಷ್ಠಿತ ಪ್ರಶಸ್ತಿಯ ಜೊತೆಗೆ ಮೊದಲ ಮೂರು ಸ್ಥಾನ ಪಡೆದವರು 2026ರ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯಲಿದ್ದಾರೆ.

2002ರಲ್ಲಿ ಭಾರತವು ಕೊನೆಯ ಬಾರಿ ಚೆಸ್ ವಿಶ್ವಕಪ್‌ನ ಆತಿಥ್ಯ ವಹಿಸಿದ್ದಾಗ ಹೈದರಾಬಾದಿನಲ್ಲಿ ಟೂರ್ನಿ ನಡೆದಿತ್ತು. ವಿಶ್ವನಾಥನ್ ಆನಂದ್ ಆ ವರ್ಷ ಪ್ರಶಸ್ತಿ ಗೆದ್ದುಕೊಂಡಿದ್ದರು. ಈ ಬಾರಿ ಒಟ್ಟು 24 ಭಾರತೀಯ ಚೆಸ್ ಆಟಗಾರರು ಕಣದಲ್ಲಿದ್ದಾರೆ. ವಿಶ್ವ ಚಾಂಪಿಯನ್ ಡಿ. ಗುಕೇಶ್, ವಿಶ್ವ ವಿಜೇತ ಭಾರತದ ಯುವ ಚೆಸ್ ತಾರೆ, ನಾಗ್ಪುರದ 19 ವರ್ಷದ ದಿವ್ಯಾ ದೇಶ್‌ಮುಖ್ ಮೇಲೆ ಹೆಚ್ಚಿನ ಭರವಸೆ ಇರಿಸಲಾಗಿದೆ.

ಟೂರ್ನಿಯು ನಾಕೌಟ್ ಮಾದರಿಯಲ್ಲಿ ನಡೆಯಲಿದ್ದು, ಸೋಲುವ ಆಟಗಾರ ಹೊರಬೀಳಲಿದ್ದಾರೆ. ಟೂರ್ನಿಯ ವಿವಿಧ ಮಾದರಿಗಳಲ್ಲಿ ನಡೆದಿದ್ದು, 2021ರಿಂದ ಸಿಂಗಲ್ ಎಲಿಮಿನೇಷನ್ ಮಾದರಿ ಅನುಸರಿಲಾಗುತ್ತಿದೆ. ಪ್ರತಿಯೊಂದು ಸುತ್ತು ಮೂರು ದಿನ ನಡೆಯಲಿದ್ದು, ಎರಡು ದಿನ ಒಂದೊಂದು ಕ್ಲಾಸಿಕಲ್ ಮಾದರಿಯ ಪಂದ್ಯಗಳು ನಡೆಯಲಿವೆ. ಸ್ಕೋರ್ ಸಮನಾದರೆ ಮೂರನೇ ದಿನವನ್ನು ಟೈಬ್ರೇಕ್ ಪಂದ್ಯಗಳಿಗೆ ಮೀಸಲಿಡಲಾಗಿದೆ ಎಂದು ಫಿಡೆ ತಿಳಿಸಿದೆ.

ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್, 2023ರ ರನ್ನರ್ ಅಪ್ ಪ್ರಜ್ಞಾನಂದ, ವಿಶ್ವದ ಐದನೇ ಕ್ರಮಾಂಕದ ಆಟಗಾರ ಅರ್ಜುನ್ ಇರಿಗೇಶಿ ಸೇರಿದಂತೆ ದೇಶದ ಅಗ್ರ ಆಟಗಾರರು ಈ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ, ಈ ಹಿಂದಿನ ಆವೃತ್ತಿಯ ಚಾಂಪಿಯನ್ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಸಹ ಕಣಕ್ಕಿಳಿಯಲಿದ್ದಾರೆ.

ಕಲ್ಟ್‌ನ ಬ್ಲಡಿ ಲವ್

ಉಪಾಧ್ಯಕ್ಷ ಸೇರಿದಂತೆ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿರುವ ನಿರ್ದೇಶಕ ಅನಿಲ್ ಕುಮಾರ್ ನಿರ್ದೇಶನದ ಕಲ್ಟ್ ತೆರೆಗೆ ಸಿದ್ಧವಾಗಿದೆ. ಝೈದ್ ಖಾನ್ ನಾಯಕನಾಗಿ ನಟಿಸಿದ್ದು, ರಚಿತಾ ರಾಮ್ ಮತ್ತು ಮಲೈಕಾ ನಾಯಕಿಯರಾಗಿ ಅಭಿನಯಿಸಿರುವ ಬಹು ನಿರೀಕ್ಷಿತ ಕಲ್ಟ್ ಚಿತ್ರದ ಎರಡನೇ ಹಾಡು ಬ್ಲಡಿ ಲವ್ ಕಿತ್ತೂರು ಉತ್ಸವದಲ್ಲಿ ಬಿಡುಗಡೆಯಾಗಿದೆ. ನಿರ್ದೇಶಕ ಅನಿಲ್ ಕುಮಾರ್ ರಚಿಸಿರುವ ಈ ಹಾಡನ್ನು ಚಂದನ್ ಶೆಟ್ಟಿ ಹಾಡಿದ್ದಾರೆ. ಅರ್ಜುನ್ ಜನ್ಯ ಸಂಗೀತಸ ಸಂಯೋಜಿಸಿದ್ದಾರೆ. ಈ ಹಾಡಿಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ.

ನಮ್ಮ ಚಿತ್ರದ ಮೊದಲ ಹಾಡು ಅಯ್ಯೋ ಶಿವನೇ... ಹಾಡಿಗೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ. ಮುಂದಿನ ವರ್ಷ ಹಾಡು ಬಿಡುಗಡೆಯಾಗಗಲಿದೆ. ಲವ್, ಆಕ್ಷನ್, ಸೆಂಟಿಮೆಂಟ್ ಹೀಗೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿದೆ. ನಮ್ಮ

ಚಿತ್ರಕ್ಕೆ ನಿಮ್ಮೆಲ್ಲರ ಬೆಂಬಲವಿರಲಿ ಎಂದು ಝೈದು ಖಾನ್ ಹೇಳಿದರು.

ನಾನು ದಾವಣಗೆರೆ ಹುಡುಗಿ. ನನ್ನ ನಟನೆಯ ಆರಂಭದ ದಿನಗಳಿಂದಲೂ ತಾವೆಲ್ಲಾ ತೋರುತ್ತಿರುವ ಪ್ರೋತ್ಸಾಹಕ್ಕೆ ಚಿರ ಋಣಿ. ಇಂದು ಕಲ್ಟ್ ನಮ್ಮ ಚಿತ್ರದ ಎರಡನೇ ಹಾಡು ಬಿಡುಗಡೆಯಾಗಿದೆ ಎಂದು ಮಲೈಕಾ ತಿಳಿಸಿದರು. ಕೆ.ವಿ.ಎನ್ ಪ್ರೊಡಕ್ಷನ್ಸ್ ಅರ್ಪಿಸುವ, ಲೋಕಿ ಸಿನಿಮಾಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಕಲ್ಟ್ ಮುಂದಿನ ವರ್ಷ ಜನವರಿಯಲ್ಲಿ ತೆರೆಗೆ ಬರಲಿದೆ.

ನಾದಬ್ರಹ್ಮ ಹಂಸಲೇಖ ಅವರ ಐದನಿ ಎಂಟರ್‌ಟೇನ್‌ಮೆಂಟ್ ಸಂಸ್ಥೆಯೂ ಪ್ರತಿ ವರ್ಷ ಒಬ್ಬೊರು ಸಾಧಕರಿಗೆ ಜೀವಮಾನದ ಸಾಧನೆಗಾಗಿ ನೀಡುವ ಐದನಿ ಚಿನ್ನದ ಪದಕ ನೀಡಿ ಗೌರವುಸುತ್ತಾ ಬಂದಿದೆ. ಈ ಮೊದಲ ಗೌರವವನ್ನು ಡಾ ಶಿವರಾಜ್ ಕುಮಾರ್ ಅವರಿಗೆ, ಎರಡನೆಯದಾಗಿ ಹಿರಿಯ ನಿರ್ದೇಶಕರಾದ ರಾಜೇಂದ್ರ ಸಿಂಗ್ ಬಾಬು ಅವರಿಗೆ ನೀಡಿತ್ತು. ಇದೀಗ ಮೂರನೆಯವರಾಗಿ ಪ್ರಾಗೈತಿಹಾಸಿಕ ತಜ್ಞ

ಹಂಸಲೇಖ ಮೆಚ್ಚಿದ ರವಿ

ಡಾ.ರವಿ ಕೋರಿ ಶೆಟ್ಟರ್ ಅವರನ್ನು ಆಯ್ಕೆ ಮಾಡಿದ್ದಾರೆ.

ನವೆಂಬರ್ 14 ರಂದು ಬಳ್ಳಾರಿಯ ಸಂಗನಕಲ್ಲು ಪುರಾತತ್ವ ಮ್ಯೂಸಿಯಂ ಎದುರು ರವಿ ಕೋರಿಶೆಟ್ಟರ್ ಅವರಿಗೆ ಐದನಿ ಚಿನ್ನದ ಪದಕ ನೀಡಿ ಗೌರವಿಸಲಿದ್ದೇವೆ. ಪದ್ಮಶ್ರೀ ಪ್ರಶಸ್ತಿಗೆ ಅರ್ಹರಾಗಿರುವ ಕೋರಿಶೆಟ್ಟರ್ ಅವರಿಗೆ ಸಂದಿದೆ. ರವಿ ಕೋರಿ ಶೆಟ್ಟರ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲು ಸಚಿವ ಶಿವರಾಜ್ ತಂಗಡಗಿ ಅವರೊಂದಿಗೆ ಹಂಸಲೇಖ ಅವರು ಮಾತಾನಾಡಿರುವುದಾಗಿ ತಿಳಿಸಿದರು.

ಕನ್ನಡ ಕಿರುತೆರೆ ಇತಿಹಾಸದಲ್ಲಿ ದಾಖಲೆ ಬರೆದ ಅಡುಗೆ ಶೋ ಅಂದ್ರೆ ಅದು ಬೊಂಬಾಟ್ ಭೋಜನ ಸಾವಿರದ ಐನೂರಕ್ಕೂ ಹೆಚ್ಚು ಸಂಚಿಕೆಗಳನ್ನು ದಾಟಿ ಹೊಸ ಮೈಲಿಗಲ್ಲು ಸೃಷ್ಟಿಸಿರುವ ಈ ಶೋ ಈಗಾಗಲೇ ಐದು ಸೀಸನ್ ಗಳನ್ನು ಯಶಸ್ವಿಯಾಗಿ ಪೂರೈಸಿದೆ. ಇದೀಗ ಇನ್ನಷ್ಟು ಹೊಸತನ ವನ್ನೊಳಗೊಂಡು ಆರನೇನೇ ಆವೃತ್ತಿಯೊಂದಿಗೆ ವೀಕ್ಷಕರ ಮುಂದೆ ಬರಲು ಸಜ್ಜಾಗಿದೆ. ಇಂದಿನಿಂದ ಹೊಸ ಸೀಸನ್ ಆರಂಭವಾಗಲಿದೆ.

ನಿಮ್ಮೆಲ್ಲರ ಪ್ರೋತ್ಸಾಹದಿಂದ ನಮ್ಮ ಜನಪ್ರಿಯ ಬೊಂಬಾಟ್ ಭೋಜನ ಕಾರ್ಯಕ್ರಮ ಯಶಸ್ವಿ ಐದು ವರ್ಷಗಳನ್ನು ಪೂರೈಸಿ ಆರನೇ ನೇ ವರ್ಷಕ್ಕೆ ಅಡಿಯಿಡುತ್ತಿದೆ. ಇದೇ ಅಕ್ಟೋಬರ್ 27 ರ ಸೋಮವಾರದಿಂದ ಬೊಂಬಾಟ್ ಭೋಜನ ಸೀಸನ್ ಆರು ಆರಂಭವಾಗಲಿದೆ. ಅಡುಗೆಗೆ ಸಂಬಂಧಿಸಿದ ಕಾರ್ಯಕ್ರಮವೊಂದರ ಸಾವಿರದ ಐನೂರು ಕಂತುಗಳನ್ನು ಒಬ್ಬ ವ್ಯಕ್ತಿಯೇ ನಿರೂಪಣೆ ಮಾಡಿರುವುದು ಇದೇ ಮೊದಲು. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಅನ್ನುವ ಟ್ಯಾಗ್‌ಲೈನ್ ಇರುವ ಈ ಸೀಸನ್‌ನ ಪ್ರತಿಯೊಂದು ಸೆಗ್ಮೆಂಟ್‌ನಲ್ಲೂ ಜನರು ಇರುತ್ತಾರೆ. ಅಭಿಮಾನಿ ದೇವರುಗಳು ಇರುತ್ತಾರೆ. ಒಟ್ಟಿನಲ್ಲಿ ಈ ಸೀಸನ್ ಜನರಿಗೋಸ್ಕರ ಅರ್ಪಣೆ ಮಾಡಲಾಗುತ್ತಿದೆ. ವಿಶೇಷ ಭೋಜನ ರುಚಿ-ರುಚಿಯಾದ ಅಡುಗೆಯನ್ನು



ತಿಳಿಸುವುದು. ಜತೆಗೆ ಪತ್ರ ಹಾಗೂ ಕರೆಯ ಮೂಲಕ ಬಂದಿರುವ ಅಭಿಮಾನಿಗಳ ಅಡುಗೆ ಕೋರಿಕೆಯನ್ನು ಈಡೇರಿಸಲಾಗುತ್ತದೆ. ಗೌರಿ ಸುಬ್ರಮಣ್ಯ ರವರು ಜನರಿಗೆ ಉಪಯುಕ್ತ ವಾದ ಮನೆಮದ್ದನ್ನು ಇಲ್ಲಿ ತಿಳಿಸುತ್ತಾರೆ. ಬೇರೆ ಬೇರೆ ಜಿಲ್ಲೆಗಳಲ್ಲಿರುವ ಲೇಡಿಸ್ ಕ್ಲಬ್ ಗಳಿಗೆ ಹೋಗಿ ಅಲ್ಲಿನ ಜನರೊಂದಿಗೆ ಬೆರೆತು ವಿಭಿನ್ನ ಅಡುಗೆ ಡಿಶ್ ಗಳನ್ನು ತಯಾರಿಸುವುದು. ಹಿತ ಭೋಜನ ಜನಸಾಮಾನ್ಯರು ಸೆಲೆಬ್ರಿಟಿಸ್‌ಗಳು ಬಂದು ವಿವಿಧ ರೀತಿಯ ಕೈರುಚಿಯನ್ನು ತಿಳಿಸುವುದು. ಕರ್ನಾಟಕದಾದ್ಯಂತ ಚಲಿಸಿ, ಹೋಟೆಲ್‌ಗಳಿಗೆ ಧಾವಿಸಿ ಅಲ್ಲಿನ ಜನಪ್ರಿಯ ತಿನಿಸುಗಳನ್ನು ಸವಿದು ಜನರಿಗೆ ತಿಳಿಸುವುದು. ಒಬ್ಬರ ಮನೆಗೆ ಸರ್ಪ್ರೈಸ್ ಎಂಟ್ರಿಕೊಟ್ಟು, ಅವರು ತಯಾರಿಸಿರುವ ಅಡುಗೆಯ ರುಚಿಯನ್ನು ಸವಿದು,

ಬೊಂಬಾಟ್ ಭೋಜನದ ಹೊಸ ಸೀಸನ್

ಕೈತುತ್ತನ್ನು ನೀಡಿ ಅವರೊಂದಿಗೆ ಮಾತುಕತೆ ನಡೆಸುವುದು. ಜತೆಗೆ ಸ್ಥಳದಲ್ಲೇ ಫೋಟೋ ತೆಗೆದು ಸರ್ಟಿಫಿಕೇಟ್ ನೀಡಲಾಗುವುದು. ಜಿಲ್ಲೆಯಾದ್ಯಂತ ಸಂಚರಿಸುತ್ತಾ, ವೀಕ್ಷಕರ ಮನೆಗಳಿಗೆ ಹೋಗಿ ನನ್ನ ಕೈಯಾರೆ ಮಾಡಿದ ರುಚಿಯಾದ ಅಡುಗೆ ಉಣಬಡಿಸೋದು ಹಾಗು ತೆರಳಿದ ಮನೆಯಲ್ಲಿ ದೇವಿ ಸದಾ ನೆಲೆಸಲೆಂದು ಮನೆ ಮಂದಿಗೆ ಶ್ರೀ ಸಿಗಂದೂರು ಚೌಡೇಶ್ವರಿ ದೇವಾಲಯದಿಂದ ದೈವಾನುಗ್ರಹಗೊಂಡ ದೇವಿಯ ವಿಗ್ರಹವನ್ನು ಉಡುಗೊರೆಯಾಗಿ ನೀಡುವುದು. ಪ್ರತಿ ಶುಕ್ರವಾರದಂದು ಮಕ್ಕಳಿಗಾಗಿ ಮಾಡಿರೋ ಹೊಸ ವಿಭಾಗ. ಮಕ್ಕಳ ಜತೆ ಪೋಷಕರು ಭಾಗಿಯಾಗಿ ರುಚಿ-ರುಚಿಯಾದ ಅಡುಗೆ ಹೇಳಿ ಕೊಡಲಾಗುತ್ತದೆ ಎಂದು ಸಿಹಿಕಹಿ ಚಂದ್ರು ಹೇಳಿದರು.

ಯೋಗರಾಜ್ ಸಿನಿಮಾಸ್ ಹಾಗೂ ರವಿ ಶಾಮನೂರು ಫಿಲಂಸ್ ಲಾಂಛನದಲ್ಲಿ ಈ ಹಿಂದೆ ಪದವಿ ಪೂರ್ವ ಚಿತ್ರವನ್ನು ನಿರ್ಮಿಸಿದ್ದ ದಾವಣಗೆರೆಯ ರವಿ ಶಾಮನೂರು ಹಾಗೂ ಯೋಗರಾಜ್ ಭಟ್ ಅವರು ನಿರ್ಮಿಸಿರುವ, ಅಮೋಲ್ ಪಾಟೀಲ್ ನಿರ್ದೇಶನದ ಹಾಗೂ ಪದವಿಪೂರ್ವ ಖ್ಯಾತಿಯ ಪೃಥ್ವಿ ಶಾಮನೂರು ನಾಯಕನಾಗಿ ನಟಿಸಿರುವ ಉಡಾಳ ಚಿತ್ರದ ಹೊಡಿ ಶ್ಯಾವಿಗ್ಯಾಗ ಮಜ್ಗಿ ಹಾಡು ಇತ್ತೀಚೆಗಷ್ಟೇ ಬಿಡುಗಡೆಯಾಗಿತ್ತು. ಯೋಗರಾಜ್ ಭಟ್ ಅವರು ಬರೆದು ಚೇತನ್ ಡ್ಯಾವಿ ಸಂಗೀತ ನೀಡಿರುವ ಈ ಹಾಡನ್ನು ಮಾಳು ನಿಪ್ನಾಳ್ ಹಾಗೂ ಸೃಷ್ಟಿ ಶಾಮನೂರ್ ಹಾಡಿದ್ದಾರೆ. ಹಾಡು ಬಿಡುಗಡೆಯಾದ ಕ್ಷಣದಿಂದಲೇ ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದ್ದು, ಅಪಾರ ಮೆಚ್ಚುಗೆ ಪಡೆದುಕೊಂಡಿದೆ. ಈ ಹಾಡಿಗೆ ರೀಲ್ಸ್ ಮಾಡುತ್ತಿರುವವರ ಸಂಖ್ಯೆ ಕೂಡ ಅಧಿಕವಾಗಿದೆ. ಈಗ ಈ ಹಾಡು ಇಡೀ ಭಾರತದಲ್ಲೇ ಎರಡನೇ ಸ್ಥಾನದಲ್ಲಿದೆ. ಇನ್ನು ಈ ಚಿತ್ರದ ಎರಡನೇ



ಟ್ರೆಂಡಿಂಗ್‌ನಲ್ಲಿ ಉಡಾಳನ ಹಾಡು

ಹಾಡು ಶೀಘ್ರದಲ್ಲಿ ಬಿಡುಗಡೆಯಾಗಲಿದ್ದು, ಈಗಾಗಲೇ ಬಿಡುಗಡೆಯಾಗಿರುವ ಮೊದಲ ಹಾಡು ಹಾಗೂ ಟೀಸರ್ ನಿಂದಲೇ ಎಲ್ಲರ ಗಮನ ಸೆಳೆದಿರುವ ಉಡಾಳ ಚಿತ್ರ ನವೆಂಬರ್ 14 ರಂದು ತೆರೆಗೆ ಬರಲಿದೆ.



ಕಲ್ಲೂರ್ ಸಿನಿಮಾಸ್, ಪೆನ್.ಎನ್ ಪೇಪರ್ ಸ್ಟುಡಿಯೋಸ್ ಹಾಗೂ ಸ್ಕ್ರೀನ್ ಫಸ್ಟ್ ಪ್ರೊಡಕ್ಷನ್ ಲಾಂಛನದಲ್ಲಿ ಪ್ರಶಾಂತ್ ಕಲ್ಲೂರ್ ಅವರು ನಿರ್ಮಿಸಿರುವ, ಪ್ರತಾಪ್ ಗಂಧರ್ವ ನಿರ್ದೇಶನದ,

ನವೆಂಬರ್‌ನಲ್ಲಿ ಕಂಗ್ರಾಜುಲೇಷನ್ಸ್ ಬ್ರದರ್

ಕಂಗ್ರಾಜುಲೇಷನ್ಸ್ ಬ್ರದರ್ ಚಿತ್ರ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಹರೀಶ್ ರೆಡ್ಡಿ ಸಹ ನಿರ್ಮಾಣವಿರುವ ಈ ಚಿತ್ರ ನವೆಂಬರ್ 21 ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಅದಕ್ಕೂ ಮುನ್ನ ಚಿತ್ರತಂಡ ವಿನೂತನ ಪ್ರಚಾರಕ್ಕೆ ಮುಂದಾಗಿದೆ. ಬೀದರ್‌ನಿಂದ ಚಾಮರಾಜನಗರದವರೆಗೂ ಚಿತ್ರತಂಡ ಕರ್ನಾಟಕದ ಪ್ರತಿಯೊಂದು ಜಿಲ್ಲೆಗಳಿಗೂ ಭೇಟಿ ನೀಡಿ ಜನರಿಗೆ ಚಿತ್ರದ ಬಗ್ಗೆ ಮಾಹಿತಿ ನೀಡಲಿದೆ. ಅದಕ್ಕಾಗಿ ನೂತನ ಪ್ರಚಾರದ ವಾಹನವೊಂದು ಸಿದ್ಧವಾಗಿದೆ. ಈ ವಿನೂತನ ಪ್ರಚಾರಕ್ಕೆ ಕನ್ನಡಪರ ಹೋರಾಟಗಾರರಾದ ಸಾ.ರಾ.ಗೋವಿಂದು ಅವರು ವೀರೇಶ ಚಿತ್ರಮಂದಿರದ ಬಳಿ ಚಾಲನೆ ನೀಡಿದರು. ಮೊದಲಿನಿಂದಲೂ ಸಂತು ಅವರು ಒಪ್ಪಿಕೊಂಡ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಇನ್ನೂ ಇಂದಿನ ಸಮಾರಂಭದಲ್ಲಿ ಚಿತ್ರದ ಎಲ್ಲಾ ಕಲಾವಿದರು ಭಾಗವಹಿಸಿರುವುದು ನೋಡಿ ಖುಷಿಯಾಗಿದೆ. ಚಿತ್ರ ಯಶಸ್ವಿಯಾಗಲಿ ಎಂದು ಸಾ.ರಾ.ಗೋವಿಂದು ಅವರು ಹಾರೈಸಿದರು.

ನಮ್ಮ ಚಿತ್ರ ಬಿಡುಗಡೆಯ ಹಂತ ತಲುಪಿದೆ. ನವೆಂಬರ್ 21 ಕ್ಕೆ ಚಿತ್ರ ಬಿಡುಗಡೆಯಾಗಲಿದೆ. ಅದರ ಪೂರ್ವಭಾವಿಯಾಗಿ ಕಲಾವಿದರು ಕರ್ನಾಟಕದಾದ್ಯಂತ ಪ್ರವಾಸ ಮಾಡಲಿದ್ದಾರೆ. ಎಲ್ಲಾ ಜಿಲ್ಲೆಗಳಿಗೂ ತೆರಳಿ ಅಲ್ಲಿನ ಜನರನ್ನು, ವಿಶೇಷವಾಗಿ ಯುವ ಸಮುದಾಯವನ್ನು ಭೇಟಿ ಮಾಡಿ ಮಾತನಾಡಲಿದ್ದಾರೆ. ಈ ವಿನೂತನ ಪ್ರಚಾರ ಕಾರ್ಯಕ್ಕೆ ಇಂದು ಹಿರಿಯರಾದ ಸಾ.ರಾ. ಗೋವಿಂದು ಅವರು ಚಾಲನೆ ನೀಡಿದ್ದಾರೆ. ಮುನೀಂದ್ರ ಅವರು ನಮ್ಮ ಚಿತ್ರವನ್ನು ವಿತರಣೆ ಮಾಡುತ್ತಿದ್ದಾರೆ ಎಂದು ಚಿತ್ರದ ಕಥೆಗಾರ ಹಾಗೂ ಕ್ರಿಯೇಟಿವ್ ಹೆಡ್ ಹರಿ ಸಂತೋಷ್ ತಿಳಿಸಿದರು. ರಕ್ಷಿತ್ ನಾಗ್, ನಾಯಕಿಯರಾದ ಸಂಜನಾ ದಾಸ್, ಅನೂಷ, ಕಲಾವಿದ ರಕ್ಷಿತ್ ಕಾಪು, ಸುದರ್ಶನ್, ಚೇತನ್ ದುರ್ಗ ಮುಂತಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.